ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬


KARNATAKA STATE OPEN UNIVERSITY
Manasagangotri, Mysore-570 006

# ಸಾರ್ವಜನಿಕ ಆಡಳಿತ

## ಎಂ.ಎ. (ಪ್ರಥಮ)

## ಸಾರ್ವಜನಿಕ ಆಡಳಿತ
## (ಸ್ವರೂಪ ಮತ್ತು ಕಲ್ಪನೆಗಳು)

ಕನ್ನಡ ಮಾಧ್ಯಮ



ಕೋರ್ಸ್ - 2

ಬ್ಲಾಕ್ - 1

ಉನ್ನತ ಶಿಕ್ಷಣಕ್ಕಾಗಿ ಇರುವ ಅವಕಾಶಗಳನ್ನು ಹೆಚ್ಚಿಸುವುದಕ್ಕೆ ಮತ್ತು ಶಿಕ್ಷಣವನ್ನು ಪ್ರಜಾತಂತ್ರೀಕರಿಸುವುದಕ್ಕೆ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥೆಯನ್ನು ಆರಂಭಿಸಲಾಗಿದೆ.

*ರಾಷ್ಟ್ರೀಯ ಶಿಕ್ಷಣ ನೀತಿ* ***1986***

*The Open University system has been initiated in order to augment opportunities for higher education and as an instrument of democratising education.*

***National Education Policy 1986***

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಸಾರ್ವಜನಿಕ ಆಡಳಿತ
ಕೋರ್ಸ್ 2

## ಬ್ಲಾಕ್ 1


| | | |
|---|---|---|
| ಘಟಕ - 1 | ಸಾರ್ವಜನಿಕ ಆಡಳಿತ - ಅರ್ಥ, ಸ್ವರೂಪ, ವ್ಯಾಪ್ತಿ ಮತ್ತು ಪ್ರಾಮುಖ್ಯತೆ, ಸಾರ್ವಜನಿಕ ಆಡಳಿತ ಹಾಗೂ ಖಾಸಗಿ ಆಡಳಿತ ಇವುಗಳ ನಡುವಿನ ಹೋಲಿಕೆಗಳು ಮತ್ತು ವ್ಯತ್ಯಾಸಗಳು. | 1 - 20 |
| ಘಟಕ - 2 | ಸಾರ್ವಜನಿಕ ಆಡಳಿತದ ವಿಕಾಸ-ಸಾರ್ವಜನಿಕ ಆಡಳಿತದ ಬೆಳವಣಿಗೆಯಲ್ಲಿನ ವಿವಿಧ ಹಂತಗಳು | 21 - 29 |
| ಘಟಕ - 3 | ಸಾರ್ವಜನಿಕ ಆಡಳಿತದ ಪರಿಸರ-ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವ | 30 - 41 |
| ಘಟಕ - 4 | ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಮತ್ತು ಯೋಜನೆಗಳ ಅಡಿ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರ | 42 - 56 |

## ಪಠ್ಯಕ್ರಮ ವಿನ್ಯಾಸ ಮತ್ತು ಸಂಪಾದಕ ಮಂಡಳಿ

ಕುಲಪತಿಗಳು ಮತ್ತು ಅಧ್ಯಕ್ಷರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಪ್ರೊ. ಜಗದೀಶ್**
ಡೀನ್ ಶೈಕ್ಷಣಿಕ ಸಮಾವೇಶಕರು,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ವಿಷಯ ಸಂಯೋಜಕರು

**ಡಾ. ಟಿ.ಡಿ. ದೇವೇಗೌಡ**
ಪ್ರೊಫೆಸರ್ ಮತ್ತು ಅಧ್ಯಕ್ಷರು
ರಾಜ್ಯಶಾಸ್ತ್ರ ಮತ್ತು ಸಾರ್ವಜನಿಕ ಆಡಳಿತ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

## ಪಠ್ಯಕ್ರಮ ನಿರೂಪಕರು

**ಪ್ರೊ. ಎನ್. ಹಾಲಪ್ಪ (ನಿವೃತ್ತ)**
ರಾಜ್ಯಶಾಸ್ತ್ರ ವಿಭಾಗ
ಮಹಾರಾಣಿ ಕಾಲೇಜು, ಮೈಸೂರು

ಕೋರ್ಸ್ 2
ಘಟಕ 1 - 4

## ಪ್ರಕಾಶಕರು

ಕುಲಸಚಿವರು
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು -570 006

**ಕ.ರಾ.ಮು.ವಿ., ಯ ಶೈಕ್ಷಣಿಕ ವಿಭಾಗದಿಂದ ಸಿದ್ಧಪಡಿಸಲಾಗಿದೆ.**
**ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, 2009**

ಎಲ್ಲಾ ಹಕ್ಕುಗಳು ಕಾದಿರಿಸಲಾಗಿದೆ. ಅಪ್ಪಣೆ ಇಲ್ಲದೆ ಈ ಕೃತಿಯನ್ನು ಪೂರ್ಣವಾಗಿ ಅಥವಾ ಭಾಗವಾಗಿ ಪುನರ್ ಮುದ್ರಿಸಬಾರದು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೋರ್ಸ್‌ಗಳ ಹೆಚ್ಚಿನ ವಿವರಗಳಿಗೆ ವಿಶ್ವವಿದ್ಯಾನಿಲಯದ ಕಾರ್ಯಾಲಯ, ಮಾನಸಗಂಗೋತ್ರಿ, ಮೈಸೂರು - 6 ಇಲ್ಲಿಂದ ಪಡೆಯಬಹುದು.

# ಕೋರ್ಸ್ - 2

## ಪರಿಚಯ

## ಸ್ವರೂಪ ಮತ್ತು ಕಲ್ಪನೆಗಳು

ಪ್ರಿಯ ವಿದ್ಯಾರ್ಥಿ,

ಸಾರ್ವಜನಿಕ ಆಡಳಿತದ ಪ್ರಥಮ ವರ್ಷದ ಎಂ. ಎ. ವಿದ್ಯಾರ್ಥಿಗಳಾದ ನಿಮ್ಮನ್ನು ಸ್ವಾಗತಿಸಲು ನಾನು ಬಹಳ ಸಂತೋಷ ಪಡುತ್ತೇನೆ. ನೀವು ಈ ವರ್ಷ ಐದು ಪತ್ರಿಕೆಗಳನ್ನು ಓದಬೇಕಾಗುತ್ತದೆ. (ಪತ್ರಿಕೆಗಳನ್ನು ಕೋರ್ಸ್ ಎಂದು ಕರೆಯಲಾಗಿದೆ) ಈ ಕೋರ್ಸಿನ ಹೆಸರು ಸಾರ್ವಜನಿಕ ಆಡಳಿತ (ಸ್ವರೂಪ ಮತ್ತು ಪರಿಕಲ್ಪನೆ) ಈ ಪತ್ರಿಕೆಯಲ್ಲಿ ನೀವು ಆಡಳಿತ ಶಾಸ್ತ್ರದ ಸ್ವಭಾವ ಮತ್ತು ಪರಿಕಲ್ಪನೆಯನ್ನು ಅಭ್ಯಾಸ ಮಾಡಬೇಕಾಗಿರುತ್ತದೆ. ಈ ಪತ್ರಿಕೆಯಲ್ಲಿ ಆಡಳಿತ ಶಾಸ್ತ್ರದ ಕಲ್ಪನೆ ಹಾಗೂ ಅದರ ಬೆಳವಣಿಗೆಯ ವಿವಿಧ ಹಂತಗಳು ಮತ್ತು ವಿವಿಧ ಹಂತಗಳಲ್ಲಿ ಅದು ಬೆಳೆದು ಬಂದ ರೀತಿಯನ್ನು ಚರ್ಚಿಸಲಾಗಿದೆ. ಇದರ ಜೊತೆಗೆ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಬಗ್ಗೆಯೂ ಕೂಡ ಅಭ್ಯಾಸ ಮಾಡುತ್ತೀರಿ. ಇದರ ಜೊತೆಗೆ ಆಡಳಿತ ಕಲೆಯೆ, ವಿಜ್ಞಾನವೇ, ಎಂಬುದರ ಬಗ್ಗೆ ಚರ್ಚಿಸಲಾಗಿದೆ. ಇದರ ಜೊತೆಗೆ ಸಾರ್ವಜನಿಕ ಆಡಳಿತದ ಅಧ್ಯಯನದ ವಿಧಾನ ಮತ್ತು ವಿವಿಧ ರೀತಿಯ ದೃಷ್ಟಿಕೋನದಿಂದ ಅಭ್ಯಾಸ ಮಾಡುವ ವಿಧಾನವನ್ನು ತಿಳಿಸಲಾಗಿದೆ. ಇದರ ಜೊತೆಗೆ ಆಡಳಿತದ ಮೂಲ ಕಲ್ಪನೆ, ಸಂಘಟನೆಯ ವಿಧಗಳು ಹಾಗೂ ಇಲಾಖೆಗಳ ನಿಗಮಗಳು ಸ್ವತಂತ್ರ ನಿಯಂತ್ರಣಾ ಆಯೋಗದ ಬಗ್ಗೆ ಚರ್ಚಿಸಲಾಗಿದೆ. ಆಡಳಿತದ ಮೇಲಿನ ವಿವಿಧ ಅಂಗಗಳಿಂದ ಮಾಡಲ್ಪಡುವ ನಿಯಂತ್ರಣ, ನಿಯೋಜಿತ ಶಾಸನ ಆಡಳಿತಾತ್ಮಕ ನ್ಯಾಯದ ಬಗ್ಗೆ ಸುದೀರ್ಘ ಚರ್ಚೆ ಮಾಡಲಾಗಿದೆ. ಸಾರ್ವಜನಿಕ ಆಡಳಿತದ ಮೇಲೆ ವಿಜ್ಞಾನ ಮತ್ತು ತಾಂತ್ರಿಕತೆಯ ಪರಿಣಾಮ, ಆಡಳಿತಾತ್ಮಕ ಸುಧಾರಣೆ, ಭ್ರಷ್ಟಾಚಾರದ ನಿಯಂತ್ರಣ ಇತ್ಯಾದಿಗಳ ಬಗ್ಗೆ ವಿವರಣೆಗಳನ್ನು ನೀಡಲಾಗಿದೆ.

**ಡಾ|| ಟಿ. ಡಿ. ದೇವೇಗೌಡ,**
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು
ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ
ಕ.ರಾ.ಮು.ವಿ.

## ಬ್ಲಾಕ್-1
## ಪರಿಚಯ

ಈ ಬ್ಲಾಕ್ ನಾಲ್ಕು ಘಟಕಗಳನ್ನು ಹೊಂದಿದೆ. ಘಟಕ ಒಂದರಲ್ಲಿ ಸಾರ್ವಜನಿಕ ಆಡಳಿತದ ಅರ್ಥ, ಸ್ವಾಭಾವ, ವ್ಯಾಪ್ತಿ ಮತ್ತು ಪ್ರಾಮುಖ್ಯತೆಯನ್ನು ಚರ್ಚಿಸಲಾಗಿದೆ. ಇದರ ಜೊತೆಗೆ ಖಾಸಗಿ ಆಡಳಿತಕ್ಕೂ ಸಾರ್ವಜನಿಕ ಆಡಳಿತಕ್ಕೂ ಇರುವ ವ್ಯತ್ಯಾಸವನ್ನು ಸಹ ಚರ್ಚಿಸಿದೆ. ಘಟಕ ಎರಡರಲ್ಲಿ ಸಾರ್ವಜನಿಕ ಆಡಳಿತದ ವಿಕಾಸ ಹಾಗೂ ಆಡಳಿತದ ಬೆಳವಣಿಗೆಯಲ್ಲಿನ ವಿವಿಧ ಹಂತಗಳು ಹಾಗೂ ಸಂಬಂಧಿಸಿದ ವಿರ್ಷಯಗಳನ್ನು ಚರ್ಚಿಸಲಾಗಿದೆ. ಘಟಕ ಮೂರರಲ್ಲಿ ಸಾರ್ವಜನಿಕ ಆಡಳಿತದ ಪರಿಸರದಲ್ಲಿ, ಸಾಂಸ್ಕೃತಿಕ, ಸಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಂಶಗಳ ಪ್ರಭಾವವನ್ನು ತಿಳಿಸಲಾಗಿದೆ. ಘಟಕ ನಾಲ್ಕರಲ್ಲಿ ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಮತ್ತು ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ವಿವರಿಸಲಾಗಿದೆ.

## ಘಟಕ - 1 ಸಾರ್ವಜನಿಕ ಆಡಳಿತ - ಅರ್ಥ, ಸ್ವರೂಪ, ವ್ಯಾಪ್ತಿ ಮತ್ತು ಪ್ರಾಮುಖ್ಯತೆ, ಸಾರ್ವಜನಿಕ ಆಡಳಿತ ಹಾಗೂ ಖಾಸಗಿ ಆಡಳಿತ ಇವುಗಳ ನಡುವಿನ ಹೋಲಿಕೆಗಳು ಮತ್ತು ವ್ಯತ್ಯಾಸಗಳು.

ರಚನೆ


1.0. ಉದ್ದೇಶಗಳು

1.1 ಪೀಠಿಕೆ

1.2 ಸಾರ್ವಜನಿಕ ಆಡಳಿತದ ಅರ್ಥ ಮತ್ತು ವ್ಯಾಖ್ಯೆಗಳು

1.3 ಸಾರ್ವಜನಿಕ ಆಡಳಿತದ ಸ್ವರೂಪ

1.3.1 ಸಮಗ್ರ ದೃಷ್ಟಿಕೋನ

1.3.2 ವ್ಯವಸ್ಥಾಪನಾ/ನಿರ್ವಹಣಾ ದೃಷ್ಟಿಕೋನ

1.4 ಸಾರ್ವಜನಿಕ ಆಡಳಿತದ ವ್ಯಾಪ್ತಿ

1.4.1 ಪೋಸ್ಡ್‌ಕಾರ್ಬ್ ದೃಷ್ಟಿಕೋನ

1.4.2 ವಸ್ತು ವಿಷಯ ದೃಷ್ಟಿಕೋನ

1.4.3 ಕಲ್ಯಾಣ ಅಥವಾ ಆದರ್ಶ ದೃಷ್ಟಿಕೋನ

1.5 ಸಾರ್ವಜನಿಕ ಆಡಳಿತ ಪ್ರಾಮುಖ್ಯತೆ

1.5.1 ಸರ್ಕಾರದ ಅಡಿಪಾಯ

1.5.2 ಸಾರ್ವಜನಿಕ ಭದ್ರತೆಯನ್ನು ಕಾಪಾಡಲು ಅಗತ್ಯ

1.5.3 ಸಾಮಾಜಿಕ ಭದ್ರತೆಯನ್ನು ಕಾಪಾಡಲು ಅಗತ್ಯ

1.5.4 ಸಾಮಾಜಿಕ ಬದಲಾವಣೆ ಮತ್ತು ಅಭಿವೃದ್ಧಿಯ ಸಾಧನ

1.5.5 ಕಾನೂನು ಮತ್ತು ನೀತಿಗಳ ಅನುಷ್ಠಾನದ ಸಾಧನ

1.5.6 ರಾಷ್ಟ್ರೀಯ ಸಮಗ್ರತೆಯ ಸಾಧನ

1.5.7 ನೀತಿ ನಿರೂಪಣೆಯಲ್ಲಿ ಹೆಚ್ಚುತ್ತಿರುವ ಪಾತ್ರ

1.5.8 ಅಭಿವೃದ್ಧಿ ಮತ್ತು ಕಲ್ಯಾಣದ ಸಾಧನ

1.6 ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವಿನ ಹೋಲಿಕೆಗಳು ಮತ್ತು ವ್ಯತ್ಯಾಸಗಳು

1.6.1 ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತದ ನಡುವಿನ ವ್ಯತ್ಯಾಸಗಳು

1.6.2 ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತದ ನಡುವಿನ ಹೋಲಿಕೆಗಳು

1.7 ಸಾರಾಂಶ

1.8 ಕಠಿಣ ಪದಗಳು

1.9 ಕೆಲವು ಉಪಯುಕ್ತ ಗ್ರಂಥಗಳು

1.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

## 1.0 ಉದ್ದೇಶಗಳು

ನೀವು ಸ್ನಾತಕೋತ್ತರ ವಿದ್ಯಾರ್ಥಿಗಳಾಗಿ, ಸಾರ್ವಜನಿಕ ಆಡಳಿತದ ಬಗ್ಗೆ ನೀವು ಹೊಂದಿರುವ ಕಾಳಜಿ ಹಾಗೂ ಆಸಕ್ತಿ ನಮಗೆ ಮೆಚ್ಚಿಗೆ ಹಾಗೂ ಸಂತೋಷ ತಂದಿದೆ. ಈ ಘಟಕದಲ್ಲಿ ಕೊಟ್ಟಿರುವುದನ್ನು ನೀವು ಹೆಚ್ಚಿನ ಆಸಕ್ತಿಯಿಂದ ಕಲಿಯುತ್ತೀರೆಂದು ನಾವು ನಂಬಿದ್ದೇವೆ. ಈ ಘಟಕದಲ್ಲಿ ಸಾರ್ವಜನಿಕ ಆಡಳಿತದ ಅರ್ಥ, ಸ್ವರೂಪ, ವ್ಯಾಪ್ತಿ ಮತ್ತು ಪ್ರಾಮುಖ್ಯತೆಯನ್ನು ಹಾಗೂ ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವಿನ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ಚರ್ಚಿಸಲಾಗಿದೆ. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳನ್ನು ಉತ್ತರಿಸಬಹುದು.

* ಸಾರ್ವಜನಿಕ ಆಡಳಿತದ ಅರ್ಥ (ವ್ಯಾಖ್ಯೆ) ಮತ್ತು ಸ್ವರೂಪವನ್ನು ತಿಳಿಸಿರಿ.
* ಸಾರ್ವಜನಿಕ ಆಡಳಿತದ ವ್ಯಾಪ್ತಿ ಮತ್ತು ಪ್ರಾಮುಖ್ಯತೆಯನ್ನು ವಿವರಿಸಿ
* ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತ ಇವುಗಳ ನಡುವಿನ ವ್ಯತ್ಯಾಸ ಹಾಗೂ ಹೋಲಿಕೆಗಳನ್ನು ಚರ್ಚಿಸಿ.

## 1.1 ಪೀಠಿಕೆ

ಇಂದಿನ ಸಂಕೀರ್ಣ ಹಾಗೂ ಶೀಘ್ರಗತಿಯಲ್ಲಿ ಬದಲಾವಣೆಯಾಗುತ್ತಿರುವ ಆಧುನಿಕ ಸಮಾಜದಲ್ಲಿ ಸಾರ್ವಜನಿಕ ಆಡಳಿತವು ಕೇಂದ್ರ ಸ್ಥಾನವನ್ನು ಹೊಂದಿದೆ. ಸಾರ್ವಜನಿಕ ಆಡಳಿತದಿಂದ ಸಮಾಜಕ್ಕೆ ಆಗುವ ಪ್ರಯೋಜನಗಳ ಮಹತ್ವ ದಿನೇ ದಿನೇ ಹೆಚ್ಚುತ್ತಿದೆ. ಸಾರ್ವಜನಿಕ ಆಡಳಿತದ ಚಟುವಟಿಕೆಗಳು ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಮತ್ತು ಪ್ರತಿಯೊಂದು ಕ್ಷೇತ್ರದ ಮೇಲೂ ಪರಿಣಾಮಗಳನ್ನು ಬೀರುತ್ತಿವೆ. ಆದ್ದರಿಂದ ಇಂದು ಸಾರ್ವಜನಿಕ ಆಡಳಿತದ ಅಧ್ಯಯಲ್ಲಿ ಹೆಚ್ಚಿನ ಆಸಕ್ತಿಯನ್ನು ತೋರಿಸಲಾಗುತ್ತಿದೆ.

ಸಾರ್ವಜನಿಕ ಆಡಳಿತವು ರಾಜ್ಯಶಾಸ್ತ್ರದ ಒಂದು ಶಾಖೆಯಾಗಿ, ಸಾಮಾಜಿಕ ವಿಜ್ಞಾನಗಳಲ್ಲೊಂದಾಗಿದೆ. ಸಾರ್ವಜನಿಕ ಆಡಳಿತ ಒಂದು ಅಧ್ಯಯನದ ಶಾಸ್ತ್ರವಾಗಿ ಇತ್ತೀಚೆಗೆ ಬೆಳವಣಿಗೆಯಾದರೂ, ಸಾರ್ವಜನಿಕ ಆಡಳಿತದ ಚಟುವಟಿಕೆಗಳು ಮಾನವ ಸಮಾಜದಷ್ಟೇ. ಪುರಾತನವಾದವು. ಪುರಾತನ ಕಾಲದಿಂದಲೂ ವಿವಿಧ ಚಿಂತಕರು ಸಾರ್ವಜನಿಕ ಆಡಳಿತದ ಚಿಂತನೆ ಹಾಗೂ ಆಚರಣೆ ಕಾಣಿಕೆಗಳನ್ನು ಸಲ್ಲಿಸಿದ್ದಾರೆ. ಉದಾಹರಣೆಗೆ ಕೌಟಿಲ್ಯನ 'ಅರ್ಥಶಾಸ್ತ್ರ', ಮೆಕಿವೆಲ್ಲಿಯ 'ಪ್ರಿನ್ಸ್' ಗ್ರಂಥ ಸಾರ್ವಜನಿಕ ಆಡಳಿತದ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡುತ್ತವೆ. ನಮ್ಮ ಮಹಾಕಾವ್ಯಗಳಾದ 'ರಾಮಾಯಣ' ಮತ್ತು 'ಮಹಾಭಾರತ' ರಾಜಕೀಯ ವಿಷಯಗಳ ಜೊತೆಗೆ ಆಡಳಿತಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಒಳಗೊಂಡಿವೆ. ಅಲ್ಲದೆ ಪ್ರಾಚೀನ ಭಾರತದ ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಗ್ರೀಕ್ ನಗರ ರಾಜ್ಯಗಳ ವ್ಯವಸ್ಥೆ ಮುಂತಾದವುಗಳು ಸಾರ್ವಜನಿಕ ಆಡಳಿತ ಬಹು ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದಿತು ಎಂಬುದಕ್ಕೆ ಉದಾಹರಣೆಗಳಾಗಿವೆ. ಆದರೆ ಇದು ಒಂದು ಪ್ರತ್ಯೇಕವಾದ ಅಧ್ಯಯನ ಮತ್ತು ಬೋಧನಾ ವಿಷಯ ವಸ್ತುವಾದುದ್ದು ಇತ್ತೀಚಿನ ವರ್ಷಗಳಲ್ಲಿ, ಅಂದರೆ 19ನೇ ಶತಮಾನದ ಕೊನೆ ವರ್ಷಗಳಲ್ಲಿ ಎಂದು ಹೇಳಲಾಗಿದೆ. ಸಾರ್ವಜನಿಕ ಆಡಳಿತದ ಅಧ್ಯಯನದ ಬೆಳವಣಿಗೆ ವಿಶೇಷವಾಗಿ ಅಮೆರಿಕಾದಲ್ಲಿ ಪ್ರಾರಂಭವಾಯಿತು. ರಾಜಕೀಯ ಸುಧಾರಕರೂ ಆಡಳಿತಗಾರರೂ ಆದ ಅಮೆರಿಕದ ಮಾಜಿ ಅಧ್ಯಕ್ಷ ವುಡ್ರೊ ವಿಲ್ಸನ್‌ರು, 1887ರಲ್ಲಿ ಪ್ರಕಟವಾದ 'ಆಡಳಿತ ಅಧ್ಯಯನ' (The study of Administration) ಎಂಬ ತಮ್ಮ ಪ್ರಬಂಧದಲ್ಲಿ ಸಾರ್ವಜನಿಕ ಆಡಳಿತದ ಕ್ರಮಬದ್ಧ ಅಧ್ಯಯನಕ್ಕೆ ತಳಹದಿ ಹಾಕಿದರು. ಆದುದರಿಂದ ಅವರನ್ನು 'ಸಾರ್ವಜನಿಕ ಆಡಳಿತದ ಪಿತಾಮಹ' ಎಂದು ಪರಿಗಣಿಸಲಾಗಿದೆ. ಈ ಪೀಠಿಕೆಯೊಂದಿಗೆ ಸಾರ್ವಜನಿಕ ಆಡಳಿತದ ಅರ್ಥ ಸ್ವರೂಪ, ವ್ಯಾಪ್ತಿ ಮತ್ತು ಪ್ರಾಮುಖ್ಯತೆಯನ್ನು ಮುಂದಿನ ಭಾಗಗಳಲ್ಲಿ ಚರ್ಚಿಸೋಣ.

## 1.2 ಸಾರ್ವಜನಿಕ ಆಡಳಿತದ ಅರ್ಥ ಮತ್ತು ವ್ಯಾಖ್ಯೆಗಳು

'ಸಾರ್ವಜನಿಕ ಆಡಳಿತ' ಎಂಬುದು 'ಆಡಳಿತ' ಎಂಬ ವಿಶಾಲ ಕ್ಷೇತ್ರದ ಒಂದು ನಿರ್ದಿಷ್ಟ ಭಾಗವಾಗಿದೆ. ಏಕೆಂದರೆ 'ಸಾರ್ವಜನಿಕ' (public) ಎನ್ನುವ ಪದ 'ಸರ್ಕಾರಿ' (government) ಎನ್ನುವ ಅರ್ಥವನ್ನು ಸೂಚಿಸುತ್ತದೆ. ಸರ್ಕಾರದ ವ್ಯವಹಾರಗಳ ನಿರ್ವಹಣೆಯೇ ಸಾರ್ವಜನಿಕ ಆಡಳಿತ ಎಂದು ಸಂಕ್ಷಿಪ್ತವಾಗಿ ಹೇಳಬಹುದು.

ಸಾರ್ವಜನಿಕ ಆಡಳಿತದ ಅರ್ಥವನ್ನು ತಿಳಿಯುವ ಮೊದಲು 'ಆಡಳಿತ' ಎಂದರೇನು ಎಂಬುದನ್ನು ತಿಳಿದುಕೊಳ್ಳುವುದು ಅವಶ್ಯಕ. 'ಆಡಳಿತ' ಎನ್ನುವ ಪದ ಬಹು ವಿಶಾಲವಾದ ಅರ್ಥವುಳ್ಳದ್ದಾಗಿದೆ. 'ಆಡಳಿತ' (Administration) ಎಂಬ ಪದ ಲ್ಯಾಟಿನ್ ಭಾಷೆಯ AD (ಆಡ್) ಮತ್ತು Ministrare (ಮಿನಿಸ್ಟ್ರೇರ್) ಎಂಬ ಎರಡು ಪದಗಳ ಸಂಯೋಜನೆಯಾಗಿದ್ದು, ವ್ಯವಸ್ಥೆ ಮಾಡು, ನಿರ್ವಹಿಸು, ಸೇವೆ ಮಾಡು ಎಂದು ಇದರ ಅರ್ಥವಾಗುತ್ತದೆ. ಆಡಳಿತವೆಂದರೆ ನಿರ್ದಿಷ್ಟ ಗುರಿ ಸಾಧನೆಗಾಗಿ ನಡೆಸುವ ಸಾಮೂಹಿಕ ಪ್ರಯತ್ನವೆಂದು ಹೇಳಬಹುದು. ಕೆಲವು ಸಾಮಾನ್ಯ ಗುರಿಗಳನ್ನು ಈಡೇರಿಸಲು ಮಾನವರ ಮತ್ತು ಸಾಮಾಗ್ರಿಗಳ ವ್ಯವಸ್ಥೆ ಮತ್ತು ನಿರ್ವಹಣೆಯಲ್ಲಿ ಕಂಡುಬರುವ ಸಾಮೂಹಿಕ ಚಟುವಟಿಕೆಗಳನ್ನು ಆಡಳಿತ ಎಂದು ಕರೆಯಬಹುದು. ಫಿಫ್‌ನರ್‌ರವರ ಪ್ರಕಾರ, "ನಿರೀಕ್ಷಿಸಿದ ಗುರಿಗಳನ್ನು ಈಡೇರಿಸಿಕೊಳ್ಳಲು ದೊರೆಯುವ ಮಾನವರ ಹಾಗೂ ಸಾಮಾಗ್ರಿಗಳ ವ್ಯವಸ್ಥೆ ಮತ್ತು ನಿರ್ದೇಶನವೇ" ಆಡಳಿತ.

ಆಡಳಿತವೆಂದರೆ, "ಒಂದು ಉದ್ದೇಶ ಸಾಧನೆಗಾಗಿ ಮಾನವರ ಮತ್ತು ಸಾಮಾಗ್ರಿಗಳ ಸಂಘಟನೆ ಮತ್ತು ಬಳಕೆ" ಎಂದು ಫೆಲಿಕ್ಸ್ ನಿಗ್ರೋ ವ್ಯಾಖ್ಯಾನಿಸಿದ್ದಾರೆ.

ಎಲ್. ಡಿ. ವೈಟ್‌ರ ಪ್ರಕಾರ, ಉದ್ದೇಶವೊಂದರ ಸಾಧನೆಗಾಗಿ ಹಲವಾರು ಜನರನ್ನು ನಿರ್ದೇಶಿಸುವ ಮತ್ತು ನಿಯಂತ್ರಿಸುವ ಕಲೆಯೇ ಆಡಳಿತ"

ಹರ್ಬರ್ಟ್ ಎ. ಸೈಮನ್‌ರ ಪ್ರಕಾರ "ಉದ್ದೇಶ ಸಾಧನೆಗೋಸ್ಕರ ಮಾನವ ಶ್ರಮ ಮತ್ತು ಸಂಪನ್ಮೂಲಗಳನ್ನು ಸಂಘಟಿಸಿ ಬೆಳೆಸುವುದೇ ಆಡಳಿತ".

ಮೇಲಿನ ವ್ಯಾಖ್ಯೆಗಳಿಂದ ಆಡಳಿತವು ಎರಡು ಮೂಲಾಂಶಗಳನ್ನೊಳಗೊಂಡಿರುವುದು ಸ್ಪಷ್ಟವಾಗಿದೆ. ಅವುಗಳೆಂದರೆ 'ಸಾಮೂಹಿಕ ಪ್ರಯತ್ನ' (collective forest) ಮತ್ತು ಸಾಮಾನ್ಯ ಉದ್ದೇಶ (Common Purpose) ಆದುದರಿಂದ ಆಡಳಿತವೆಂದರೆ ಒಂದು ಸಾಮಾನ್ಯ ಉದ್ದೇಶ ಸಾಧನೆಗಾಗಿ ಜನರು ಕೈಗೊಳ್ಳುವ ಸಾಮೂಹಿಕ ಹಾಗೂ ಸಹಕಾರಯುತ ಪ್ರಯತ್ನವಾಗಿದೆ. ಆಡಳಿತದ ಚಟುವಟಿಕೆಗಳು ನಮ್ಮ ಜೀವನದ ಎಲ್ಲಾ ಕ್ಷೇತ್ರಗಳಲ್ಲೂ ಕಂಡು ಬರುತ್ತಿವೆ. ಹೀಗೆ ಆಡಳಿತವು ಒಂದು ಸಾರ್ವತ್ರಿಕ ಪ್ರಕ್ರಿಯೆ ಹಾಗೂ ಜೀವನದ ಅವಿಭಾಜ್ಯ ಅಂಗವಾಗಿದೆ.

**ಸಾರ್ವಜನಿಕ ಆಡಳಿತದ ಅರ್ಥ ಮತ್ತು ವ್ಯಾಖ್ಯೆಗಳು**

'ಆಡಳಿತ' ಎಂಬ ಪದದ ಅರ್ಥವನ್ನು ತಿಳಿದುಕೊಂಡ ನಂತರ ಸಾರ್ವಜನಿಕ ಆಡಳಿತದ ಅರ್ಥ ಮತ್ತು ವ್ಯಾಖ್ಯೆಗಳನ್ನು ಪರಿಶೀಲಿಸೋಣ. 'ಸಾರ್ವಜನಿಕ ಆಡಳಿತ' ಎಂಬುದರಲ್ಲಿ 'ಸಾರ್ವಜನಿಕ' (public) ಎಂಬ ಪದ 'ಸರ್ಕಾರಿ' (government) ಎಂಬ ವಿಶೇಷ ಅರ್ಥ ಪಡೆದಿದೆ. ಆದ್ದುದರಿಂದ ಸಾರ್ವಜನಿಕ ಎಂಬ ಪದವನ್ನು 'ಸರ್ಕಾರಿ' ಎಂಬ ಪದಕ್ಕೆ ಸಮೀಕರಿಸಲಾಗಿದೆ. ಸರ್ಕಾರ ಕೈಗೊಳ್ಳುವ ಎಲ್ಲಾ ಕಾರ್ಯಗಳ ಉದ್ದೇಶ ಸಾರ್ವಜನಿಕ ಕಲ್ಯಾಣವಾಗಿರುವುದರಿಂದ ಸರ್ಕಾರದ ಕಾರ್ಯಕಲಾಪಗಳೆಲ್ಲಾ ಸಾರ್ವಜನಿಕ ಆಡಳಿತವೆಂದು ಸಾಮಾನ್ಯವಾಗಿ ಹೇಳಬಹುದು. ಹೀಗೆ ಸಾರ್ವಜನಿಕ ಆಡಳಿತ ಎಂದರೆ ರಾಜ್ಯದ/ಸರ್ಕಾರದ ಕಾರ್ಯನಿರ್ವಹಣೆಯೇ ಸಾರ್ವಜನಿಕ ಆಡಳಿತವಾಗಿದೆ. ಸಾರ್ವಜನಿಕ ಆಡಳಿತವು ಸರ್ಕಾರದ ನೌಕರರು ನಿರ್ವಹಿಸುವ ಕಾರ್ಯಗಳು ಅಥವಾ ಕಾರ್ಯಸರಣಿಯನ್ನು ಒಳಗೊಂಡಿರುತ್ತದೆ.

'ಸಾರ್ವಜನಿಕ ಆಡಳಿತ' ಎಂಬ ಪದವನ್ನು 1812 ರಲ್ಲಿ ಮೊಟ್ಟ ಮೊದಲಿಗೆ ಅಲೆಕ್ಸಾಂಡರ್ ಹ್ಯಾಮಿಲ್ಟನ್‌ರು ಬಳಸಿದ್ದಾರೆ. ಆನಂತರ ಹಲವು ಲೇಖಕರು ಸಾರ್ವಜನಿಕ ಆಡಳಿತವನ್ನು ತಮ್ಮದೇ ಆದ ಅರ್ಥದಲ್ಲಿ ವ್ಯಾಖ್ಯಾನಿಸಿದ್ದಾರೆ. ಆದರೆ ಯಾವುದೇ ನಿರ್ದಿಷ್ಟ ವ್ಯಾಖ್ಯೆ ಪರಿಪೂರ್ಣವಾಗಿಲ್ಲ. ಸಾರ್ವಜನಿಕ ಆಡಳಿತದ ಕೆಲವು ವ್ಯಾಖ್ಯೆಗಳು ಈ ಕೆಳಗಿನಂತಿವೆ.

1) ವುಡ್ರೋ ವಿಲ್ಸನ್‌ರ ಪ್ರಕಾರ "ಸಾರ್ವಜನಿಕ ಕಾನೂನನ್ನು ಸವಿಸ್ತಾರವಾಗಿ ಹಾಗೂ ಕ್ರಮಬದ್ಧವಾಗಿ ಅನುಷ್ಠಾನಕ್ಕೆ ತರುವುದೇ ಸಾರ್ವಜನಿಕ ಆಡಳಿತ". ಪ್ರತಿಯೊಂದು ನಿರ್ದಿಷ್ಟ ಕಾನೂನನ್ನು ಸವಿಸ್ತಾರವಾಗಿ ಹಾಗೂ ಕ್ರಮ ಬದ್ಧವಾಗಿ ಅನುಷ್ಠಾನಕ್ಕೆ ತರುವುದೇ ಸಾರ್ವಜನಿಕ ಆಡಳಿತ." ಪ್ರತಿಯೊಂದು ನಿರ್ದಿಷ್ಟ ಕಾನೂನಿನ ಅನ್ವಯವು ಆಡಳಿತದ ಕ್ರಿಯೆಯಾಗಿದೆ.

2) ಎಲ್. ಡಿ. ವೈಟ್‌ರ್ ಪ್ರಕಾರ: ವ್ಯಾಪಕ ಅರ್ಥದಲ್ಲಿ ವ್ಯಾಖ್ಯಾನ ಮಾಡಿದಾಗ "ಸಾರ್ವಜನಿಕ ನೀತಿಯನ್ನು ಕಾರ್ಯಗತಗೊಳಿಸುವ ಉದ್ದೇಶದಿಂದ ಕೈಗೊಳ್ಳಲಾಗುವ ಎಲ್ಲಾ ಚಟುವಟಿಕೆಗಳನ್ನು ಸಾರ್ವಜನಿಕ ಆಡಳಿತ ಒಳಗೊಂಡಿದೆ".

3) "ಸಾರ್ವಜನಿಕ ನೀತಿಯನ್ನು ಜಾರಿಗೊಳಿಸಲು ನಡೆಸುವ ಸಾಮೂಹಿಕ ಪ್ರಯತ್ನಗಳ ಸಂಯೋಜನೆಯೇ ಸಾರ್ವಜನಿಕ ಆಡಳಿತ" ಎಂದು ಫಿಫ್ನರ್ ವ್ಯಾಖ್ಯಾನಿಸಿದ್ದಾರೆ.

4) "ಒಂದು ಕಾನೂನನ್ನು ಜಾರಿಗೆ ತರಲು ಸರ್ಕಾರವು ನಿರ್ವಹಿಸುವ ಕಾರ್ಯವೇ ಸಾರ್ವಜನಿಕ ಆಡಳಿತ" ಎಂದು ಹಾರ್ವೆ ವಾಕರ್ ವ್ಯಾಖ್ಯಾನ ಮಾಡಿದ್ದಾರೆ.

5) ಹರ್ಬರ್ಟ್ ಎ. ಸೈಮನ್ ರ ಪ್ರಕಾರ, ಸಾಮಾನ್ಯ ರೂಢಿಯಲ್ಲಿ ಕೇಂದ್ರಿಯ, ರಾಜ್ಯದ ಮತ್ತು ಸ್ಥಳೀಯ ಸರ್ಕಾರಗಳ ಕಾರ್ಯಾಂಗ ಶಾಖೆಗಳ ಚಟುವಟಿಕೆಗಳನ್ನು ಸಾರ್ವಜನಿಕ ಆಡಳಿತವೆಂದು ತಿಳಿಯಲಾಗಿದೆ.

6) ಪ್ರೊಫೆಸರ್ ವಿಲ್ಲೋಬಿಯವರು, ಸಾರ್ವಜನಿಕ ಆಡಳಿತ ಎಂಬ ಪದವನ್ನು ಎರಡು ಅರ್ಥದಲ್ಲಿ ಬಳಸಿದ್ದಾರೆ. ಅವರ ಪ್ರಕಾರ ವಿಶಾಲಾರ್ಥದಲ್ಲಿ ಸಾರ್ವಜನಿಕ ಆಡಳಿತವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಈ ಮೂರು ಅಂಗಗಳ ಕಾರ್ಯ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಸಂಕುಚಿತ ಅರ್ಥದಲ್ಲಿ ಸಾರ್ವಜನಿಕ ಆಡಳಿತವು ಕೇವಲ ಆಡಳಿತಾಂಗದ ಕಾರ್ಯ ನಿರ್ವಹಣೆಯನ್ನು ಮಾತ್ರ ಒಳಗೊಂಡಿರುತ್ತದೆ.

7) ಲೂಥರ್ ಗಲ್ಲಿಕ್ ಅವರ ಅಭಿಪ್ರಾಯದಲ್ಲಿ "ಸಾರ್ವಜನಿಕ ಆಡಳಿತವು ಸರ್ಕಾರದ ಕಾರ್ಯಗಳನ್ನು ನಿರ್ವಹಿಸುವ ಕಾರ್ಯಾಂಗ ಶಾಖೆಗೆ ಸಂಬಂಧಿಸಿದೆ".

8) ಮಾರ್ಷಲ್ ಡಿಮಾಕ್ ಅವರ ಪ್ರಕಾರ "ಆಡಳಿತವು ಸರ್ಕಾರದ ಬಗ್ಗೆ 'ಏನು' (what) ಮತ್ತು 'ಹೇಗೆ' (how) ಎಂಬ ಪ್ರಶ್ನೆಗಳಿಗೆ ಸಂಬಂಧಿಸಿದೆ. 'ಏನು' ಎಂಬುದು ವಸ್ತು ವಿಷಯದ ಬಗ್ಗೆ ಆಡಳಿತಗಾರನಿಗೆ ತನ್ನ ಕಾರ್ಯ ನಿರ್ವಹಿಸಲು ಸಹಕಾರಿಯಾಗಿರುವ ಒಂದು ಕ್ಷೇತ್ರದ ತಾಂತ್ರಿಕ ಜ್ಞಾನ. 'ಹೇಗೆ' ಎಂಬುದು ಕಾರ್ಯ ನಿರ್ವಹಣೆಯ ತಂತ್ರ ವಿಧಾನ ಹಾಗೂ ವ್ಯಾಪಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಸಹಾಯಕವಾಗುವ ತತ್ವಗಳನ್ನು ಸೂಚಿಸುತ್ತದೆ.

9) ಡ್ವೈಟ್ ವಾಲ್ಡೊ ಅವರು "ರಾಜ್ಯದ ವ್ಯವಹಾರಗಳಿಗೆ ಅನ್ವಯವಾಗುವಂತಹ ನಿರ್ವಹಣಾ ಕಲೆ ಮತ್ತು ವಿಜ್ಞಾನವೇ ಸಾರ್ವಜನಿಕ ಆಡಳಿತ" ಎಂದು ಹೇಳಿದ್ದಾರೆ.

ಮೇಲಿನ ವಿಭಿನ್ನ ವ್ಯಾಖ್ಯೆಗಳನ್ನು ಪರಿಶೀಲಿಸಿದಾಗ ಸಾರ್ವಜನಿಕ ನೀತಿಯನ್ನು ಹಾಗೂ ಸಾರ್ವಜನಿಕ ಕಾನೂನನ್ನು ಅನುಷ್ಠಾನಕ್ಕೆ ತರಲು ಸರ್ಕಾರ ಕೈಗೊಳ್ಳುವ ಎಲ್ಲ ಚಟುವಟಿಕೆಗಳೇ ಸಾರ್ವಜನಿಕ ಆಡಳಿತವೆಂದು ತಿಳಿದು ಬರುತ್ತದೆ. ಇದೊಂದು ಪ್ರಕ್ರಿಯೆಯೂ ಹೌದು ಮತ್ತು ವೃತ್ತಿಯೂ ಹೌದು. ನೀತಿಯ ಸಂಪೂರ್ಣ ಅನುಷ್ಠಾನ ಇದರ ಹೊಣೆಗಾರಿಕೆಯಾಗಿರುವುದರಿಂದ ಇದೊಂದು ಪ್ರಕ್ರಿಯೆ. ಚಟುವಟಿಕೆಗಳ ನಿರ್ವಹಣೆ ಇದರ ಕಾರ್ಯವಾಗಿರುವುದರಿಂದ ಇದೊಂದು ವೃತ್ತಿ. ಸರ್ಕಾರದ ಸಮಸ್ತ ಕಾರ್ಯಾಚರಣೆಯೇ

(government in action) ಸಾರ್ವಜನಿಕ ಆಡಳಿತವೆಂದು ಹೇಳಬಹುದು. ರಾಜ್ಯದ ದೈನಂದಿನ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವ ಸರ್ಕಾರದ ಅಂಗವೇ ಸಾರ್ವಜನಿಕ ಆಡಳಿತ.

ನಿಗ್ರೊ ಮತ್ತು ನಿಗ್ರೊ ಅವರು ಸಾರ್ವಜನಿಕ ಆಡಳಿತದ ಈ ಕೆಳಗಿನ ಕೆಲವು ಲಕ್ಷಣಗಳನ್ನು ಗುರುತಿಸಿದ್ದಾರೆ.

1) ಸಾರ್ವಜನಿಕ ರಂಗದಲ್ಲಿ ಪರಸ್ಪರ ಸಹಕರಿಸಿ ಉದ್ದೇಶಿತ ಗುರಿ ಸಾಧಿಸಲು ಮಾಡುವ ಸಾಮೂಹಿಕ ಪ್ರಯತ್ನ.
2) ಸರ್ಕಾರದ ಮೂರು ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ನಡುವಣ ಪರಸ್ಪರ ಸಂಬಂಧವನ್ನು ಒಳಗೊಂಡಿದೆ.
3) ಸಾರ್ವಜನಿಕ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ಹೊಂದಿದೆ, ಇದರಿಂದಾಗಿ ರಾಜಕೀಯ ಪ್ರಕ್ರಿಯೆಯ ಒಂದು ಭಾಗವಾಗಿದೆ.
4) ಇದು ಖಾಸಗಿ ಆಡಳಿತಕ್ಕಿಂತ ಹಲವು ವಿಧಗಳಲ್ಲಿ ಭಿನ್ನವಾಗಿದೆ.
5) ಹಲವಾರು ಖಾಸಗಿ ಗುಂಪುಗಳು ಮತ್ತು ವ್ಯಕ್ತಿಗಳು ಜೊತೆಗೂಡಿ ಸಮಾಜಕ್ಕೆ ಸೇವೆ ಸಲ್ಲಿಸುತ್ತದೆ.

ಸಂಕ್ಷಿಪ್ತದಲ್ಲಿ ಹೇಳುವುದಾದರೆ, ಸಾರ್ವಜನಿಕ ಆಡಳಿತವೆಂದರೆ ನಿರ್ಣಯ ಕೈಗೊಳ್ಳುವುದು, ಮಾಡಬೇಕಾದ ಕಾರ್ಯಗಳ ಯೋಜನೆ ಸಿದ್ಧಪಡಿಸುವುದು, ಗುರಿ ಹಾಗೂ ಉದ್ದೇಶಗಳನ್ನು ನಿರ್ಧರಿಸುವುದು, ಶಾಸಕಾಂಗ ಹಾಗೂ ಪೌರ ಸಂಘಟನೆಗಳ ಸಂಯೋಗದೊಂದಿಗೆ ಕಾರ್ಯ ನಿರ್ವಹಿಸುವುದು, ಸಾರ್ವಜನಿಕರ ಬೆಂಬಲ ಮತ್ತು ಸರ್ಕಾರ ಯೋಜನೆಗಳಿಗೆ ನಿಧಿ ಪಡೆಯುವುದು, ಉದ್ಯೋಗಿಗಳಿಗೆ ನಿರ್ದೇಶನ, ಮೇಲ್ವಿಚಾರಣೆ ಮಾಡುವುದು, ನಾಯಕತ್ವ ಒದಗಿಸುವುದು, ಸರ್ಕಾರದ ನೀತಿ ಹಾಗೂ ಗುರಿ ಸಾಧಿಸುವಂತೆ ನೋಡಿಕೊಳ್ಳುವುದಾಗಿದೆ ಹೀಗೆ ಸಾರ್ವಜನಿಕ ಆಡಳಿತವು ಸರ್ಕಾರ ನಿರ್ವಹಿಸುವ ಎಲ್ಲಾ ಪ್ರಕಾರದ ಚಟುವಟಿಕೆಗಳೊಂದಿಗೆ ಸಂಬಂಧ ಹೊಂದಿದೆ.

### ನಿಮ್ಮ ಪ್ರಗತಿ ಪರಿಶೀಲನೆ -1

ಸೂಚನೆ : i) ಕೆಳಗೆ ಕೊಟ್ಟಿರುವ ಸ್ಥಳವನ್ನು ನಿಮ್ಮ ಉತ್ತರಗಳಿಗೆ ಉಪಯೋಗಿಸಿರಿ.

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ.

1) 'ಆಡಳಿತ' ಮತ್ತು 'ಸಾರ್ವಜನಿಕ ಆಡಳಿತ' ಪದಗಳ ಅರ್ಥವನ್ನು ತಿಳಿಸಿ.

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

2) ಸಾರ್ವಜನಿಕ ಆಡಳಿತದ ಪ್ರಮುಖ ಲಕ್ಷಣಗಳನ್ನು ತಿಳಿಸಿರಿ.

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

## 1.3 ಸಾರ್ವಜನಿಕ ಆಡಳಿತದ ಸ್ವರೂಪ

ಸಾರ್ವಜನಿಕ ಆಡಳಿತದ ಸ್ವರೂಪದ ಬಗ್ಗೆ ಎರಡು ವಿಭಿನ್ನ ದೃಷ್ಟಿಕೋನಗಳಿವೆ. ಮೊದಲನೆಯದು 'ಸಮಗ್ರ ದೃಷ್ಟಿಕೋನ' ಮತ್ತು ಎರಡನೆಯದು ವ್ಯವಸ್ಥಾಪಕ/ನಿರ್ವಹಣಾ ದೃಷ್ಟಿಕೋನ

### 1.3.1 ಸಮಗ್ರ ದೃಷ್ಟಿಕೋನ (Integral View)

ಕೆಲವೊಂದು ಬರಹಗಾರರ ಅಭಿಪ್ರಾಯದಂತೆ ಸಾರ್ವಜನಿಕ ಆಡಳಿತವೆಂದರೆ ಒಂದು ನಿರ್ದಿಷ್ಟ ಉದ್ದೇಶ ಸಾಧನೆಯಲ್ಲಿ ಕೈಗೊಳ್ಳಲಾಗುವ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ. ದೈಹಿಕ, ತಾಂತ್ರಿಕ, ವ್ಯವಸ್ಥಾಪನೆಯ ಹಾಗೂ ಗುಮಾಸ್ತಿಕೆಗೆ (clerical) ಸಂಬಂಧಿಸಿದ ಎಲ್ಲಾ ಕಾರ್ಯಕಲಾಪಗಳ ಒಟ್ಟು ಮೊತ್ತವೇ ಸಮಗ್ರ ದೃಷ್ಟಿಕೋನವಾಗಿದೆ. ಒಂದು ಸಂಘಟನೆಯಲ್ಲಿಯ ಕೆಳ ಹಂತದಿಂದ ಮೇಲಿನ ಹಂತದವರೆಗಿನ ಎಲ್ಲ ಸಿಬ್ಬಂದಿ ವರ್ಗದ ಜನರು ನಿರ್ವಹಿಸುವ ಕಾರ್ಯ ಇದಾಗಿದೆ. ಉದಾ: ಒಂದು ಸರ್ಕಾರಿ ಕಛೇರಿಯಲ್ಲಿನ ಸೇವಕನಿಂದ ಹಿಡಿದು ಸಚಿವಾಲಯದಲ್ಲಿಯ ಕಾರ್ಯದರ್ಶಿಯವರೆಗೂ ಹಾಗೂ ರಾಜ್ಯದ ಮುಖ್ಯಸ್ಥನ ವರೆಗೂ ನಿರ್ವಹಿಸಲ್ಪಡುವ ಸಮಸ್ತ ಕಾರ್ಯ ಚಟುವಟಿಕೆಗಳು ಇದರಲ್ಲಿ ಬರುತ್ತವೆ. ಪ್ರೊ. ಎಲ್.ಡಿ. ವೈಟ್ ಮತ್ತು ಡಿಮಾಕ್ ಈ ದೃಷ್ಟಿಕೋನವನ್ನು ಸಮರ್ಥಿಸಿದ್ದಾರೆ.

### 1.3.2 ವ್ಯವಸ್ಥಾಪಕ/ನಿರ್ವಹಣಾ ದೃಷ್ಟಿಕೋನ (Managerial view)

ಈ ದೃಷ್ಟಿಕೋನದ ಪ್ರಕಾರ ವ್ಯವಸ್ಥಾಪನಾ ಕಾರ್ಯದಲ್ಲಿ ನಿರತರಾದವರ ಕಾರ್ಯ ಕಲಾಪಗಳು ಮಾತ್ರ ಆಡಳಿತದ ವ್ಯಾಪ್ತಿಯಲ್ಲಿ ಬರುತ್ತವೆ. ಇದರ ಪ್ರಕಾರ ವ್ಯವಸ್ಥಾಪನೆ, ನಿರ್ದೇಶನ, ಯೋಜನೆ, ಸಂಘಟನೆ, ನಿಯಂತ್ರಣ, ಮೇಲ್ವಿಚಾರಣೆ, ಸಂಯೋಜನೆ ಇವುಗಳು ಮಾತ್ರ ಆಡಳಿತ ಕಾರ್ಯಗಳು. ಈ ದೃಷ್ಟಿಕೋನವು ಆಡಳಿತದ ಉನ್ನತ ಸ್ಥಾನದಲ್ಲಿರುವ ಕೆಲವೇ ವ್ಯಕ್ತಿಗಳ ಕಾರ್ಯ ಕಲಾಪಗಳನ್ನು ಸೂಚಿಸುತ್ತದೆ. ಲೂಥರ್ ಗಲ್ಲಿಕ್, ಸೈಮನ್, ಸ್ಮಿತ್‌ಬರ್ಗ್, ಥಾಮ್ಸನ್, ಮರ್ಸನ್ ಮುಂತಾದವರು ಈ ದೃಷ್ಟಿಕೋನದ ಪ್ರತಿಪಾದಕರು.

ಈ ಎರಡೂ ದೃಷ್ಟಿಕೋನಗಳನ್ನು ಸಂಪೂರ್ಣವಾಗಿ ಅಂಗೀಕರಿಸಲು ಅಥವಾ ನಿರಾಕರಿಸಲು ಸಾಧ್ಯವಿಲ್ಲ. ಆಡಳಿತ ಎನ್ನುವ ಪದದ ಅರ್ಥ ಹಾಗೂ ಸ್ವರೂಪವನ್ನು ಯಾವ ಸಂದರ್ಭದಲ್ಲಿ ಬಳಸಲಾಗಿದೆ ಎನ್ನುವುದನ್ನು ಅವಲಂಬಿಸಿದೆ. ಈ ಬಗ್ಗೆ ಡಿಮಾಕ್, ಡಿಮಾಕ್ ಮತ್ತು ಕೊಯಿನಿಗ್ ಹೀಗೆ ಹೇಳಿದ್ದಾರೆ. "ಸಾರ್ವಜನಿಕ ಆಡಳಿತವು ಒಂದು ಅಧ್ಯಯನ ವಿಷಯದಂತೆ ಕಾನೂನನ್ನು ಜಾರಿಗೆ ತರುವ ಹಾಗೂ ಸಾರ್ವಜನಿಕ ನೀತಿಯನ್ನು ಕಾರ್ಯಗತಗೊಳಿಸುವಲ್ಲಿ ಸರ್ಕಾರ ನಡೆಸುವ ಎಲ್ಲ ಪ್ರಯತ್ನಗಳನ್ನು ಪರಿಶೀಲಿಸಿದ್ದಾರೆ, ಒಂದು ಪ್ರಕ್ರಿಯೆಯಂತೆ ಒಂದು ಜಾರಿ ನಿರ್ದೇಶನಾಲಯ ಕಾರ್ಯಕ್ಷೇತ್ರ ವಹಿಸಿಕೊಂಡ ಸಮಯದಿಂದ ಅಂತಿಮ ಹಂತದ ವರೆಗಿನ

ಎಲ್ಲ ಕ್ರಮಗಳು ಒಳಗೊಳ್ಳುತ್ತವೆ ಹಾಗೂ ಒಂದು ವೃತ್ತಿಯಂತೆ ಒಂದು ಸಾರ್ವಜನಿಕ ಸಂಸ್ಥೆಯಲ್ಲಿಯ ಇತರ ಚಟುವಟಿಕೆಗಳನ್ನು ಸಂಘಟಿಸುವುದು ಹಾಗೂ ನಿರ್ದೇಶಿಸುವುದಾಗಿದೆ.

## 1.4 ಸಾರ್ವಜನಿಕ ಆಡಳಿತದ ವ್ಯಾಪ್ತಿ

ಸಾರ್ವಜನಿಕ ಆಡಳಿತದ ವ್ಯಾಪ್ತಿ ಕುರಿತಂತೆ ಸಾಕಷ್ಟು ಭಿನ್ನಾಭಿಪ್ರಾಯಗಳು ಕಂಡುಬರುತ್ತವೆ. ಈ ಬಗ್ಗೆ ವಿವಿಧ ಲೇಖಕರು ವಿಭಿನ್ನ ದೃಷ್ಟಿಕೋನಗಳನ್ನು ಹೊಂದಿದ್ದಾರೆ. ಕೆಲವರು ಸಾರ್ವಜನಿಕ ಆಡಳಿತವನ್ನು ಸರ್ಕಾರದ ಮೂರು ಅಂಗಗಳ (ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ) ವ್ಯಾಪ್ತಿಯಲ್ಲಿ ಬರುವ ಸಮಸ್ತ ಕಾರ್ಯ ಚಟುವಟಿಕೆಗಳೊಂದಿಗೆ ಗುರುತಿಸಿದರೆ, ಮತ್ತೆ ಕೆಲವರು ಇದರ ವ್ಯಾಪ್ತಿಯನ್ನು ಸರ್ಕಾರದ ಕಾರ್ಯಾಂಗದ ಕಾರ್ಯಕಲಾಪಗಳಿಗೆ ಮಾತ್ರ ಸೀಮಿತಗೊಳಿಸಿದ್ದಾರೆ.

ಎಲ್. ಡಿ. ವೈಟ್, ವುಡ್ರೊ ವಿಲ್ಸನ್, ಡಿಮಾಕ್, ಫಿಫ್ನರ್ ಮುಂತಾದವರು ಸಾರ್ವಜನಿಕ ಆಡಳಿತ ವ್ಯಾಪ್ತಿಯನ್ನು ಕುರಿತಂತೆ ವ್ಯಾಪಕ ದೃಷ್ಟಿಕೋನ ಹೊಂದಿದ್ದು, ಇವರ ಅಭಿಪ್ರಾಯದಲ್ಲಿ ಸಾರ್ವಜನಿಕ ಆಡಳಿತವು ಸರ್ಕಾರದ ಎಲ್ಲ ಅಂಗಗಳ ಕಾರ್ಯ ಕಲಾಪಗಳನ್ನು ಒಳಗೊಂಡಿದೆ. ಇವರ ಅಭಿಪ್ರಾಯದಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗದ ಚಟುವಟಿಕೆಗಳು ಸಾರ್ವಜನಿಕ ಆಡಳಿತದ ಕಾರ್ಯ ನಿರ್ವಹಣೆಯ ಮೇಲೆ ಗಣನೀಯ ಪ್ರಭಾವ ಬೀರುತ್ತವೆ. ವಾಸ್ತವಿಕವಾಗಿ ಆಡಳಿತದ ಎಲ್ಲಾ ಪ್ರಮುಖ ನೀತಿಗಳು ಶಾಸಕಾಂಗದಿಂದ ಕಾನೂನುಗಳ ರೂಪದಲ್ಲಿ ವ್ಯಕ್ತವಾಗುತ್ತವೆ. ಹಾಗೆಯೇ ನ್ಯಾಯಾಂಗವು ಸಹ ತನ್ನ ನ್ಯಾಯಿಕ ವಿಮರ್ಶಾಧಿಕಾರದ ಮೂಲಕ ಆಡಳಿತವು ಸಂವಿಧಾನ ಬಾಹಿರವಾಗಿ, ಕಾನೂನು ಬಾಹಿರವಾಗಿ ಹಾಗೂ ನಿರಂಕುಶವಾಗಿ ವರ್ತಿಸುವುದನ್ನು ತಡೆಗಟ್ಟುತ್ತದೆ. ಆದುದರಿಂದ ನಿಗ್ರೊ ಮತ್ತು ನಿಗ್ರೊ ಹೇಳಿರುವಂತೆ ಸರ್ಕಾರದ ಮೂರು ಅಂಗಗಳು ಆಡಳಿತದ ಅಧ್ಯಯನದ ಹಾಗೂ ಕಾರ್ಯಾಚರಣೆಯ ಭಾಗವಾಗಿವೆ.

ಲೂಥರ್ ಗಲ್ಲಿಕ್, ಸೈಮನ್, ಮರ್ಸನ್ ಮುಂತಾದ ಲೇಖಕರು ಸಾರ್ವಜನಿಕ ಆಡಳಿತದ ಬಗ್ಗೆ ಸಂಕುಚಿತ ದೃಷ್ಟಿಕೋನ ಹೊಂದಿದ್ದಾರೆ. ಇವರ ಅಭಿಪ್ರಾಯದಂತೆ ಸಾರ್ವಜನಿಕ ಆಡಳಿತದ ವ್ಯಾಪ್ತಿ ಕಾರ್ಯಾಂಗದ ಕಾರ್ಯಕಲಾಪಗಳಿಗೆ ಮಾತ್ರ ಸೀಮಿತವಾಗಿದೆ. ಅಂದರೆ ಸಾರ್ವಜನಿಕ ಆಡಳಿತವು ಈ ದೃಷ್ಟಿಕೋನದ ಪ್ರಕಾರ ನೌಕರಶಾಹಿಯ ರಚನೆ, ಕಾರ್ಯಗಳು ಮತ್ತು ವರ್ತನೆಯ ಅಧ್ಯಯನವಾಗಿದೆ. ಶಾಸಕಾಂಗ ಮತ್ತು ನ್ಯಾಯಾಂಗದ ಕಾರ್ಯಕಲಾಪಗಳಲ್ಲಿ ಸಾರ್ವಜನಿಕ ಆಡಳಿತದ ಪಾತ್ರವಿರುವುದಿಲ್ಲ. ಆದರೆ ಸಾರ್ವಜನಿಕ ಆಡಳಿತದ ವ್ಯಾಪ್ತಿಯ ಬಗ್ಗೆ ಇರುವ ಸಾಂಪ್ರದಾಯಿಕ ದೃಷ್ಟಿ ಕೋನವು ಅನಾವಶ್ಯಕವಾಗಿ ಸೀಮಿತವಾಗಿದೆ.

ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ಈ ಕೆಳಗಿನಂತೆ ಚರ್ಚಿಸ ಬಹುದು.

### 1.4.1 ಪೋಸ್ಡ್ ಕಾರ್ಬ್ ದೃಷ್ಟಿಕೋನ

ಕೆಲವು ಲೇಖಕರ ಅಭಿಪ್ರಾಯದಲ್ಲಿ ಸಾರ್ವಜನಿಕ ಆಡಳಿತವು ನಿರ್ವಹಣಾ ಕಾರ್ಯಗಳಿಗೆ ಮಾತ್ರ ಸಂಬಂಧಿಸಿದೆ, ಆದ್ದರಿಂದ ಸಾರ್ವಜನಿಕ ಆಡಳಿತವೆಂದರೆ ಕೇವಲ ನಿರ್ವಹಣೆ ಎಂದು ಅರ್ಥವಾಗುತ್ತದೆ. ಹೆನ್ರಿ ಫಾಯಲ್ ಪ್ರಕಾರ ಯೋಜನೆ, ಸಂಘಟನೆ, ಆಜ್ಞಾಪನೆ, ಸಂಯೋಜನೆ ಹಾಗೂ ನಿಯಂತ್ರಣ-ಇವುಗಳನ್ನು ಸಾರ್ವಜನಿಕ ಆಡಳಿತ ಒಳಗೊಂಡಿದೆ. ಫೆಯಾಲ್‌ರ ಈ ಅಭಿಪ್ರಾಯವನ್ನು ಉರ್ವಿಕ್ ಸಮರ್ಥಿಸಿದ್ದಾರೆ.

ಲೂಥರ್ ಗಲ್ಲಿಕ್ ಅವರು ಇದನ್ನು ಮತ್ತಷ್ಟು ಸಂಸ್ಕರಿಸುವ ಉದ್ದೇಶದಿಂದ ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು 'ಪೋಸ್ಡ್ ಕಾರ್ಬ್' (POSD CORB) ಎಂಬ ಇಂಗ್ಲೀಷ್ ಪದದಲ್ಲಿ ಸೂಚಿಸಿದ್ದಾರೆ. ಈ ಇಂಗ್ಲೀಷ್ ಪದದ ಪ್ರತಿಯೊಂದು ಅಕ್ಷರವೂ ಸಾರ್ವಜನಿಕ ಆಡಳಿತದ ಒಂದೊಂದು ಕಾರ್ಯವನ್ನು ಸೂಚಿಸುತ್ತದೆ.

1) P ಎಂಬ ಅಕ್ಷರ 'ಯೋಜನೆ' (Planning) ಯನ್ನು ಸೂಚಿಸುತ್ತದೆ. ಸರ್ಕಾರಿ ಆಡಳಿತದ ಯಂತ್ರವು ಕೈಗೊಳ್ಳಬೇಕಾಗಿರುವ ಕಾರ್ಯ ಕ್ರಮಗಳು ಮತ್ತು ಅವುಗಳನ್ನು ಕಾರ್ಯರೂಪಕ್ಕಿಳಿಸುವ ವಿಧಾನಗಳನ್ನು ಯೋಜಿಸಿ ರೂಪಿಸುವುದು.

2) 'O' ಎಂಬ ಅಕ್ಷರ 'ಸಂಘಟನೆ' (organisation) ಯನ್ನು ಸೂಚಿಸುತ್ತದೆ. ಕಾರ್ಯ ನಿರ್ವಹಣೆಗೆ ಅಗತ್ಯವಾದ ಇಲಾಖೆ, ನಿಗಮ, ವಿಭಾಗ, ಉಪ ವಿಭಾಗ ಮುಂತಾದ ಆಡಳಿತ ವ್ಯವಸ್ಥೆಯನ್ನು ರೂಪಿಸುವುದು ಮತ್ತು ನಿರ್ವಹಿಸಬೇಕಾದ ಕಾರ್ಯಗಳನ್ನು ವಿವಿಧ ಇಲಾಖೆಗಳಿಗೆ ಹಂಚುವುದು.

3) 'S' ಎಂಬ ಅಕ್ಷರ ಸಿಬ್ಬಂದಿಯನ್ನು (Staffing) ಸೂಚಿಸುತ್ತದೆ. ಆಡಳಿತ ಕಾರ್ಯಗಳನ್ನು ನಿರ್ವಹಿಸಲು ಅಗತ್ಯವಾದ ಸಿಬ್ಬಂದಿಯ ನೇಮಕ, ತರಬೇತಿ ಹಾಗೂ ಸೇವಾ ನಿಯಮಗಳನ್ನು ನಿರ್ಧರಿಸುವುದು.

4) 'D' ಅಕ್ಷರ ನಿರ್ದೇಶನವನ್ನು (Direction) ಸೂಚಿಸುತ್ತದೆ. ಸರ್ಕಾರದ ವಿವಿಧ ಇಲಾಖೆಗಳಿಗೆ ಆದೇಶ ಹಾಗೂ ನಿರ್ದೇಶನ ನೀಡುವುದು ಮತ್ತು ತೀರ್ಮಾನ ಕೈಗೊಳ್ಳುವುದು.

5) 'Co' ಎಂಬ ಅಕ್ಷರ ಸಂಯೋಜನೆಯನ್ನು (Coordination) ಸೂಚಿಸುವುದು. ಸರ್ಕಾರದ ವಿವಿಧ ಇಲಾಖೆಗಳಲ್ಲಿ ಘರ್ಷಣೆ, ಭಿನ್ನಾಭಿಪ್ರಾಯಗಳನ್ನು ನಿವಾರಿಸಿ ಅವುಗಳ ಕಾರ್ಯಗಳನ್ನು ಸಂಯೋಜಿಸುವುದು.

6) R ಅಕ್ಷರ ವರದಿಯನ್ನು (Reporting) ಸೂಚಿಸುತ್ತದೆ. ವರಿಷ್ಠ ಅಧಿಕಾರಿಗಳಿಗೆ ವಿವಿಧ ಇಲಾಖೆಗಳ ಕಾರ್ಯಚಟುವಟಿಕೆಗಳ ಬಗ್ಗೆ ವರದಿ ಸಲ್ಲಿಸುವುದು, ಆಡಳಿತದ ಆಗು ಹೋಗುಗಳ ಬಗ್ಗೆ ಶಾಸಕಾಂಗಕ್ಕೆ ಮಾಹಿತಿ, ವರದಿಯನ್ನು ನೀಡುವುದು.

7) B ಎಂಬ ಅಕ್ಷರ ಮುಂಗಡ ಪತ್ರ (Budget) ವನ್ನು ಸೂಚಿಸುತ್ತದೆ. ಹಣಕಾಸಿನ ಯೋಜನೆ ಆಯವ್ಯಯ, ಲೆಕ್ಕಾಚಾರ, ಲೆಕ್ಕ ಪರಿಶೋಧನೆ ಮುಂತಾದವುಗಳ ನಿರ್ವಹಣೆ- ಇವು 'ಪೋಸ್ಡ್‌ಕಾರ್ಬ್' ದೃಷ್ಟಿ ಕೋನದಂತೆ ಸಾರ್ವಜನಿಕ ಆಡಳಿತ ವ್ಯಾಪ್ತಿಯಲ್ಲಿ ಬರುತ್ತವೆ.

**1.4.2 ವಿಷಯ ದೃಷ್ಟಿಕೋನ (subject Matter view)**

ಪೋಸ್ಡ್‌ಕಾರ್ಬ್ ದೃಷ್ಟಿಕೋನ ಕೆಲವೊಂದು ದೋಷಗಳಿಂದ ಕೂಡಿದೆ. ಇದು ವಿಷಯ ದೃಷ್ಟಿಕೋನ ಹೊಂದಿರದೆ ಕೇವಲ ತಾಂತ್ರಿಕ ದೃಷ್ಟಿಕೋನ ಹೊಂದಿರುವುದು ಪೋಸ್ಡ್‌ಕಾರ್ಬ್ ದೃಷ್ಟಿಕೋನದ ದೋಷವಾಗಿದೆ. ಆಡಳಿತದ ವಿಭಿನ್ನ ಇಲಾಖೆಗಳು ವಿಭಿನ್ನ ಕಾರ್ಯಗಳನ್ನು ನಿರ್ವಹಿಸುತ್ತಿದ್ದು, ವಿಭಿನ್ನ ಸಮಸ್ಯೆಗಳನ್ನು ಎದುರಿಸುತ್ತಿವೆ. ಪೋಸ್ಡ್‌ಕಾರ್ಬ್ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೆ ಇರುವುದು ಇದರ ನ್ಯೂನತೆಯಾಗಿದೆ.

ಪೋಸ್ಡ್‌ಕಾರ್ಬ್ ದೃಷ್ಟಿಕೋನ ನಿರ್ವಹಣಾ ಕಾರ್ಯಗಳಿಗೆ ಪ್ರಾಮುಖ್ಯತೆ ಕೊಟ್ಟು ವಿವಿಧ ಕ್ಷೇತ್ರಗಳ ಆಡಳಿತ ಕಾರ್ಯ ತಂತ್ರಗಳನ್ನು ನಿರ್ಲಕ್ಷಿಸುತ್ತದೆ. ಉದಾಹರಣೆಗೆ, ಪೋಲಿಸ್ ಇಲಾಖೆ ಅಪರಾಧಿಗಳನ್ನು ಪತ್ತೆ ಹಚ್ಚುವಲ್ಲಿ ಹಾಗೂ ಶಾಂತಿ ಸುವ್ಯವಸ್ಥೆ ಕಾಪಾಡುವಲ್ಲಿ ಕಾನೂನು ಉಲ್ಲಂಘನೆ ತಡೆಗಟ್ಟುವಲ್ಲಿ ವಿವಿಧ ವಿಧಾನಗಳನ್ನು ಬಳಸುತ್ತದೆ. ಆದರೆ ಪೋಸ್ಡ್‌ಕಾರ್ಬ್ ದೃಷ್ಟಿಕೋನ ಇಂತಹ ವಿಧಾನಗಳನ್ನು ಉಪೇಕ್ಷಿಸುತ್ತದೆ. ಅಂದರೆ ಪೋಸ್ಡ್‌ಕಾರ್ಬ್ ದೃಷ್ಟಿಕೋನ ತಾಂತ್ರಿಕ ದೃಷ್ಟಿಕೋನ ಹೊಂದಿದೆಯೇ ಹೊರತು, ವಸ್ತು ವಿಷಯ ದೃಷ್ಟಿಕೋನ ಹೊಂದಿಲ್ಲ.

ಪೋಸ್ಡ್‌ಕಾರ್ಬ್ ದೃಷ್ಟಿಕೋನದಲ್ಲಿರುವ ಇನ್ನೊಂದು ದೋಷವೆಂದರೆ, ಅದು ಆಡಳಿತ ನಿರ್ವಹಣೆಯಲ್ಲಿ ಮಾನವೀಯ ಅಂಶ ಅಥವಾ ಸಿಬ್ಬಂದಿಯ ಪಾತ್ರವನ್ನು ಅಲಕ್ಷಿಸಿದೆ. ಆದುದರಿಂದ ಇದನ್ನು ಮಾನವೀಯ ಸಂಬಂಧ ದೃಷ್ಟಿಕೋನದ ಬೆಂಬಲಿಗರು ಟೀಕಿಸಿದ್ದಾರೆ. ಇದರ ಮತ್ತೊಂದು ದೋಷವೆಂದರೆ ನಿರಂತರವಾಗಿ ವಿಸ್ತಾರಗೊಳ್ಳುತ್ತಿರುವ ಮಾನವ ಜ್ಞಾನಕ್ಕೆ ಪ್ರಾಮುಖ್ಯತೆ ನೀಡದೆ ಇರುವುದು. ಲೆವಿಸ್ ಮೆರಿಯಮ್ ಎಂಬುವರು "ಸಾರ್ವಜನಿಕ ಆಡಳಿತವನ್ನು ಎರಡು ಅಲಗುಗಳ ಕತ್ತರಿಗೆ ಹೋಲಿಸಿದ್ದಾರೆ. ಒಂದು ಅಲಗು ಪೋಸ್ಡ್‌ಕಾರ್ಬ್ ಹೇಳುವ ಕ್ಷೇತ್ರಗಳ ಜ್ಞಾನವನ್ನು ಪ್ರತಿನಿಧಿಸಿದರೆ, ಇನ್ನೊಂದು ಕಾರ್ಯ ತಂತ್ರಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಂಬಂಧಿಸಿದ ವಿಷಯದ ಜ್ಞಾನವಾಗಿದೆ. ಅದು ಪರಿಣಾಮಕಾರಿಯಾದ ಸಾಧನವಾಗಬೇಕಾದರೆ ಅದರ ಎರಡು ಅಲಗುಗಳೂ ಹರಿತವಾಗಿರಬೇಕು."

### 1.4.3 ಕಲ್ಯಾಣ ಅಥವಾ ಆದರ್ಶ ದೃಷ್ಟಿಕೋನ

ಇಂದಿನ ರಾಜ್ಯಗಳು ಕಲ್ಯಾಣ ರಾಜ್ಯಗಳಾಗಿರುವುದರಿಂದ ಸಾರ್ವಜನಿಕ ಆಡಳಿತವು ಹಲವಾರು ಕಲ್ಯಾಣ ಪರ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಸಾಮಾಜಿಕ ಅಭಿವೃದ್ಧಿ ಮತ್ತು ಹಿತರಕ್ಷಣೆಯ ಕಾರ್ಯ ಇದರ ಜವಾಬ್ದಾರಿಯಾಗಿದೆ. ಇಂದು ಸಾರ್ವಜನಿಕ ಆಡಳಿತ ಕೇವಲ ನಾಗರಿಕ ಜೀವನದ ಕಾವಲು ನಾಯಿಯಾಗಿರದೆ, ಸಾಮಾಜಿಕ ನ್ಯಾಯವನ್ನು ಒದಗಿಸುವ ಹಾಗೂ ಸಾಮಾಜಿಕ ಪರಿವರ್ತನೆಯ ಒಂದು ಸಾಧನವಾಗಿದೆ. ಸಾರ್ವಜನಿಕ ಕಲ್ಯಾಣ ಸಾಧನೆ ಸಾರ್ವಜನಿಕ ಆಡಳಿತದ ಮುಖ್ಯ ಗುರಿಯಾಗಿದೆ. ಆದುದರಿಂದ ಸಾರ್ವಜನಿಕ ಆಡಳಿತದ ವ್ಯಾಪ್ತಿಯು ಸಾರ್ವಜನಿಕ ಕಲ್ಯಾಣ ಸಾಧನೆಗಾಗಿ ಸರ್ಕಾರ ಕೈಗೊಳ್ಳುವ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ. ಈ ದೃಷ್ಟಿಕೋನದ ಪ್ರಕಾರ ಸಮಾಜ ಕಲ್ಯಾಣ ಕಾರ್ಯಗಳನ್ನು ನಿರ್ವಹಿಸುವುದು ಸಾರ್ವಜನಿಕ ಆಡಳಿತದ ಕರ್ತವ್ಯವಾಗಿದೆ.

ಫಿಫ್ನರ್ ಅವರು ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು 'ಸಾರ್ವಜನಿಕ ಆಡಳಿತ ತತ್ವಗಳು' ಹಾಗೂ 'ಸಾರ್ವಜನಿಕ ಆಡಳಿತದ ಕ್ಷೇತ್ರ' ಎಂದು ಎರಡು ವಿಭಾಗಗಳಲ್ಲಿ ವರ್ಗೀಕರಿಸಿದ್ದಾರೆ. ಮೊದಲನೆಯ ವಿಭಾಗದಲ್ಲಿ ಸಂಘಟನೆ, ಸಿಬ್ಬಂದಿ ನಿರ್ವಹಣೆ, ವಿಧಾನ, ಸಾಮಾಗ್ರಿ ಮತ್ತು ಸರಬರಾಜು, ಸಾರ್ವಜನಿಕ ಹಣಕಾಸು ಹಾಗೂ ಆಡಳಿತದ ಜವಾಬ್ದಾರಿ ಒಳಗೊಂಡಿದ್ದರೆ, ಎರಡನೆಯ ವಿಭಾಗದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಇವುಗಳ ಸ್ಥಳೀಯ ಮತ್ತು ಸ್ಥಾನಿಕ ಪ್ರಾಧಿಕಾರಗಳು ಹಾಗೂ ಸಾರ್ವಜನಿಕ ನಿಗಮಗಳು ಬರುತ್ತವೆ. ಹೀಗೆ ಇವರ ದೃಷ್ಟಿಯಲ್ಲಿ ಆಡಳಿತದಲ್ಲಿಯ ಜನರ, ಸಾಮಾಗ್ರಿಗಳ ಹಾಗೂ ವಿಧಾನಗಳ ಅಧ್ಯಯನ ಇದರ ವ್ಯಾಪ್ತಿಯಲ್ಲಿ ಬರುತ್ತವೆ.

ವಾಕರ್ ಅವರು ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ಆಡಳಿತ ಸಿದ್ಧಾಂತ ಮತ್ತು 'ಅನ್ವಯಿಕ ಆಡಳಿತ' ಎಂದು ವಿಂಗಡಿಸಿದ್ದಾರೆ. ಆಡಳಿತ ಸಿದ್ಧಾಂತದಲ್ಲಿ ಎಲ್ಲ ಹಂತಗಳಲ್ಲಿನ ಆಡಳಿತದಲ್ಲಿ ತೊಡಗಿರುವ ಎಲ್ಲ ಬಗೆಯ ಪ್ರಾಧಿಕಾರಗಳ ಸಂಘಟನೆ, ರಚನೆ, ಕಾರ್ಯಗಳು ಹಾಗೂ ವಿಧಾನಗಳು-ಇವುಗಳ ಅಧ್ಯಯನ ಒಳಗೊಳ್ಳುತ್ತವೆ. ಅನ್ವಯಿಕ ಆಡಳಿತದಲ್ಲಿ ರಾಜಕೀಯ ಶಾಸನೀಯ ಹಣಕಾಸಿನ ರಕ್ಷಣೆಯ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ, ವಿದೇಶಿ, ರಾಷ್ಟ್ರೀಯ ಹಾಗೂ ಸ್ಥಳೀಯ ವಿಷಯಗಳಿಗೆ ಸಂಬಂಧಿಸಿದ ಕಾರ್ಯಗಳು ಬರುತ್ತವೆ. ವಾಕರ್ ಅವರ ಈ ವರ್ಗೀಕರಣದಲ್ಲಿ ವಿಷಯ ಹಾಗೂ ಕಾರ್ಯಗಳ ಪುನರಾವರ್ತನೆ ಕಂಡು ಬಂದರೂ ಇದೊಂದು ವ್ಯಾಪಕ ದೃಷ್ಟಿಕೋನವಾಗಿದೆ.

**ಸಮಾರೋಪ**

ಸಾರ್ವಜನಿಕ ಆಡಳಿತ ವ್ಯಾಪ್ತಿಯು ಅತ್ಯಂತ ವಿಶಾಲವಾದುದು. ಇಂದು ನಾವು ಈ ವಿಷಯದ ಕ್ಷೇತ್ರದಲ್ಲಿ ಸಾರ್ವಜನಿಕ ನೀತಿ ರೂಪಿಸುವುದು ಹಾಗೂ ಆ ಕುರಿತು ವಿಶ್ಲೇಷಣೆ, ಆಡಳಿತಾತ್ಮಕ ಪರಿಸರ, ಅಭಿವೃದ್ಧಿ ಆಡಳಿತ, ಸಾರ್ವಜನಿಕ ಹಣಕಾಸು ಆಡಳಿತ, ತುಲನಾತ್ಮಕ ಸಾರ್ವಜನಿಕ ಆಡಳಿತ, ಸಾರ್ವಜನಿಕ ಸಿಬ್ಬಂದಿ ಆಡಳಿತ ಕುರಿತು ಅಧ್ಯಯನ ಮಾಡುವುದು ಅಗತ್ಯ ಹಾಗೂ ಅನಿವಾರ್ಯವೆನಿಸಿದೆ.

ಸಾರ್ವಜನಿಕ ಆಡಳಿತದ ವ್ಯಾಪ್ತಿ ಇತ್ತೀಚಿನ ದಿನಗಳಲ್ಲಿ ವ್ಯಾಪಕವಾಗಿ ಹೆಚ್ಚುತ್ತಿವೆ. ಇದು ರಕ್ಷಣಾತ್ಮಕ ಹಾಗೂ ನಿಯಂತ್ರಣಾತ್ಮಕ ಚಟುವಟಿಕೆಗಳನ್ನು ನಿರ್ವಹಿಸುತ್ತದೆ. ಸಾಮಾಜಿಕ ಅಭಿವೃದ್ಧಿ ಮತ್ತು ಹಿತರಕ್ಷಣೆಯ ಕಾರ್ಯ ಇದರ ಜವಾಬ್ದಾರಿಯಾಗಿದೆ. ಇವುಗಳ ಜೊತೆಯಲ್ಲಿ ವಾಣಿಜ್ಯ ಮತ್ತು ಔದ್ಯೋಗಿಕ ಕ್ಷೇತ್ರಗಳನ್ನು ಕೂಡ ಸಾರ್ವಜನಿಕ ಆಡಳಿತ ನೋಡಿಕೊಳ್ಳಬೇಕಿದೆ. ಸಾರ್ವಜನಿಕ ಆಡಳಿತದ ಕಾರ್ಯವ್ಯಾಪ್ತಿ ಇಲ್ಲಿಗೆ ನಿಲ್ಲುವುದಿಲ್ಲ. ಆಡಳಿತ ಹೊಣೆ ಹೊತ್ತವರು ಶಾಸನೀಯ ಮತ್ತು ಸಾರ್ವಜನಿಕ ಸಂಪರ್ಕ, ಕಾರ್ಯೋದ್ದೇಶಗಳು

ಹಾಗೂ ಒತ್ತಡ ಗುಂಪುಗಳು ಮೊದಲಾದವುಗಳ ಕಡೆಗೆ ಗಮನ ಹರಿಸಬೇಕಾಗಿದೆ. ಪೌರರ ಸಮಸ್ಯೆಗಳು, ರಾಷ್ಟ್ರೀಯ ಅಭಿವೃದ್ಧಿ, ರಾಷ್ಟ್ರೀಯ ಸಮಗ್ರತೆ ಮೊದಲಾದವು ಕೂಡ ಸಾರ್ವಜನಿಕ ಆಡಳಿತದ ವ್ಯಾಪ್ತಿಯಲ್ಲಿ ಬರುತ್ತವೆ. ಜನರ ಅಪೇಕ್ಷೆ ಹಾಗೂ ಅಕಾಂಕ್ಷೆಗಳು ಇದರ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತೃತಗೊಳಿಸುತ್ತವೆ.

**ನಿಮ್ಮ ಪ್ರಗತಿ ಪರಿಶೀಲನೆ-2**

ಸೂಚನೆ : i) ಕೆಳಗಿನ ಸ್ಥಳವನ್ನು ನಿಮ್ಮ ಉತ್ತರಗಳಿಗೆ ಬಳಸಿರಿ.

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ

1) ಸಾರ್ವಜನಿಕ ಆಡಳಿತದ ಸ್ವರೂಪವನ್ನು ಕುರಿತಂತೆ ವಿವಿಧ ದೃಷ್ಟಿಕೋನಗಳನ್ನು ಚರ್ಚಿಸಿ.

....................................................................................................

....................................................................................................

....................................................................................................

....................................................................................................

....................................................................................................

....................................................................................................

2) ಪೋಸ್ನ್‌ಕಾರ್ಬ್ ದೃಷ್ಟಿಕೋನವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ

....................................................................................................

....................................................................................................

....................................................................................................

....................................................................................................

....................................................................................................

....................................................................................................

3) ಸಾರ್ವಜನಿಕ ಆಡಳಿತದ ವ್ಯಾಪ್ತಿಯನ್ನು ವಿವರಿಸಿ.

....................................................................................................

....................................................................................................

....................................................................................................

....................................................................................................

....................................................................................................

..........................................................................

..........................................................................

## 1.5 ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆ

ಆಧುನಿಕ ಕಾಲದಲ್ಲಿ ರಾಜ್ಯದ ಚಟುವಟಿಕೆ ಹಾಗೂ ಕಾರ್ಯಗಳು ಹೆಚ್ಚಾಗುತ್ತಿರುವುದರಿಂದ ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯೂ ಹೆಚ್ಚುತ್ತಿದೆ. ಹಲವಾರು ಬೆಳವಣಿಗೆಗಳಿಂದಾಗಿ ಹಿಂದಿನ ಕಾಲಕ್ಕಿಂತಲೂ ಆಧುನಿಕ ಕಾಲದಲ್ಲಿ ಇದರ ಪ್ರಾಮುಖ್ಯತೆ ಹೆಚ್ಚುತ್ತಲಿದೆ. ಇಂದಿನ ನಾಗರಿಕತೆ ಸಂಕೀರ್ಣವಾಗಿರುವುದರಿಂದ ಹಾಗೂ ಕೈಗಾರಿಕೀಕರಣ ಮತ್ತು ನಗರೀಕರಣ ವಿಸ್ತರಣೆಯಿಂದಾಗಿ ಅನೇಕ ಜಟಿಲ ಸಮಸ್ಯೆಗಳು ಉದ್ಭವವಾಗಿ, ಉಲ್ಬಣಗೊಂಡು ರಾಜ್ಯದ ಕಾರ್ಯಕ್ಷೇತ್ರ ವಿಸ್ತಾರಗೊಂಡಿದೆ. ಇದರಿಂದಾಗಿ ಸಾರ್ವಜನಿಕ ಆಡಳಿತ ಮಾನವ ಜೀವನದ ಎಲ್ಲ ಕ್ಷೇತ್ರಗಳನ್ನು ವ್ಯಾಪಿಸಿದೆ. ಕಲ್ಯಾಣ ರಾಜ್ಯದ ಉದಯದಿಂದಾಗಿ ಸಾರ್ವಜನಿಕ ಆಡಳಿತ ಅಸಂಖ್ಯಾತ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಇಡೀ ಸಮಾಜ ಹಾಗೂ ನಾಗರಿಕತೆಯು ಆಡಳಿತವನ್ನು ಅವಲಂಬಿಸಿದೆ. ವ್ಯಕ್ತಿಯ ಹುಟ್ಟಿನಿಂದ ಹಿಡಿದು ಅವನ ಮರಣದವರೆಗೆ ಒಂದಲ್ಲ ಒಂದು ರೀತಿಯ ಸಹಾಯ ಸಲ್ಲಿಸುತ್ತಿರುವ ಸಾರ್ವಜನಿಕ ಆಡಳಿತವು 'ರಾಜ್ಯದ ಹೃದಯ' ವಾಗಿದೆ. ಆಧುನಿಕ ರಾಜ್ಯದಲ್ಲಿ ಸಾರ್ವಜನಿಕ ಆಡಳಿತವು ವ್ಯಕ್ತಿಯ ಜೀವನದಲ್ಲಿ ಅದೆಷ್ಟು ಹಾಸುಹೊಕ್ಕಾಗಿದೆಯೆಂದರೆ ಸಾರ್ವಜನಿಕ ಆಡಳಿತ ಇಲ್ಲದ ರಾಜ್ಯದ ಕಲ್ಪನೆಯೇ ಅಸಾಧ್ಯವಾಗಿದೆ. ಆದ್ದರಿಂದಲೇ ಆಧುನಿಕ ರಾಜ್ಯವನ್ನು 'ಆಡಳಿತಾತ್ಮಕ ರಾಜ್ಯ' ಎಂದು ಪರಿಗಣಿಸಲಾಗಿದೆ. ಸಾರ್ವಜನಿಕ ಆಡಳಿತದ ಪಾತ್ರ ಹಾಗೂ ಪ್ರಾಮುಖ್ಯತೆಯನ್ನು ಈ ಕೆಳಗಿನ ಅಂಶಗಳಿಂದ ಚರ್ಚಿಸಬಹುದು.

### 1.5.1 ಸರ್ಕಾರದ ಅಡಿಪಾಯ

ಸಾರ್ವಜನಿಕ ಆಡಳಿತವು ಸರ್ಕಾರದ ಆಧಾರ ಸ್ತಂಭವಾಗಿದೆ. ಯಾವ ಸರ್ಕಾರವೂ ಸಾರ್ವಜನಿಕ ಆಡಳಿತವಿಲ್ಲದೆ ಅಸ್ತಿತ್ವದಲ್ಲಿರಲಾರದು. ಆಡಳಿತದ ಅಸ್ತಿತ್ವವು ಮುರಿದು ಬಿದ್ದರೆ ರಾಜ್ಯದ ಅಸ್ತಿತ್ವವೂ ಕುಸಿಯುತ್ತದೆ. ಆಡಳಿತವಿರದಿದ್ದರೆ ಜನತೆ ಸುವ್ಯವಸ್ಥಿತ ಜೀವನ ಸಾಗಿಸುವುದು ಸಾಧ್ಯವಿಲ್ಲ. ಒಂದು ರಾಜ್ಯದಲ್ಲಿ ಶಾಸಕಾಂಗ ಮತ್ತು ನ್ಯಾಯಾಂಗವಿಲ್ಲದೆ ಸರ್ಕಾರವಿರಬಹುದು, ಆದರೆ ಆಡಳಿತಾಂಗವಿಲ್ಲದ ಸರ್ಕಾರ ಅಥವಾ ರಾಜ್ಯ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. **ಪಾಲ್ ಆಪಲ್‌ಬಿ** ಅವರು, ಆಡಳಿತವಿಲ್ಲದ ಸರ್ಕಾರ ಕೇವಲ ಒಣ ಹರಟೆಯ ಕೂಟವಾಗುವುದು" ಎಂದು ಹೇಳಿದ್ದಾರೆ. ರಾಜ್ಯದ ಅಥವಾ ಸರ್ಕಾರದ ಯಶಸ್ಸು ಅಥವಾ ಅವನತಿ ಸಾರ್ವಜನಿಕ ಆಡಳಿತವನ್ನು ಅವಲಂಬಿಸಿದೆ. ಸರ್ಕಾರದ ನೀತಿ ಮತ್ತು ಕಾರ್ಯಕ್ರಮಗಳು ಎಷ್ಟೇ ಉತ್ತಮವಾಗಿದ್ದರೂ ಅವುಗಳನ್ನು ಕಾರ್ಯಗತಗೊಳಿಸಲು ದಕ್ಷ ಆಡಳಿತ ವ್ಯವಸ್ಥೆ ಇಲ್ಲದಿದ್ದರೆ ಅವು ನಿಷ್ಪ್ರಯೋಜನವಾಗುತ್ತವೆ.

### 1.5.2 ಸಾರ್ವಜನಿಕರ ಒಳಿತಿಗಾಗಿ ಹಲವು ರೀತಿಯ ಸೇವೆಗಳನ್ನು ಒದಗಿಸುತ್ತದೆ.

ಸುಖೀ ರಾಜ್ಯದ ಕಲ್ಪನೆ ಸಾಕಾರವಾಗುವಲ್ಲಿ ಸಾರ್ವಜನಿಕ ಆಡಳಿತ ಪ್ರಮುಖ ಪಾತ್ರ ವಹಿಸುತ್ತದೆ. ರಾಜ್ಯವು ವ್ಯಕ್ತಿಯ ಕಲ್ಯಾಣ ಹಾಗೂ ಒಳಿತಿಗಾಗಿ ಅನೇಕ ಕಾರ್ಯಗಳನ್ನು ನಿರ್ವಹಿಸುತ್ತದೆ. ಇದು ವ್ಯಕ್ತಿಯು ಗರ್ಭದಲ್ಲಿರುವಾಗಿನಿಂದ ಹಿಡಿದು ಮರಣದವರೆಗೂ ಅವನ ಹಿತವನ್ನು ಬಯಸುತ್ತದೆ. ಆಧುನಿಕ ಸಮಾಜದಲ್ಲಿ ಪ್ರಜೆಗಳು ತಮ್ಮ ಬೇಡಿಕೆಗಳ ಈಡೇರಿಕೆಗೆ ಆಡಳಿತದ ಸಹಾಯವನ್ನು ನಿರೀಕ್ಷಿಸುತ್ತಾರೆ. **ಎಲ್. ಡಿ. ವೈಟ್**‌ರ ಅಭಿಪ್ರಾಯದಲ್ಲಿ "ಆಡಳಿತಾಂಗದ ಗುರಿಗಳು ರಾಜ್ಯದ ಮೂಲಗುರಿಗಳೇ ಹೊರತು ಬೇರೆಯಲ್ಲ. ಸಮಾಜದಲ್ಲಿ ಶಾಂತಿ ವ್ಯವಸ್ಥೆಯನ್ನು ಕಾಪಾಡಿ ಜನರ ಪ್ರಾಣ ಹಾಗೂ ಆಸ್ತಿ ರಕ್ಷಣೆ, ನ್ಯಾಯ ಒದಗಿಸುವುದು, ಶಿಕ್ಷಣ ನೀಡುವುದು, ಉದ್ಯೋಗವಕಾಶ ಕಲ್ಪಿಸುವುದು, ಅಗತ್ಯ ವಸ್ತುಗಳ ಪೂರೈಕೆ, ಆರೋಗ್ಯ ರಕ್ಷಣೆ, ದೇಶ ಸಂರಕ್ಷಣೆ, ಯೋಜನೆಗಳನ್ನು ಸಿದ್ಧಪಡಿಸುವುದು ಹಾಗೂ ಕಾರ್ಯರೂಪಕ್ಕೆ ತರುವುದು, ಆರ್ಥಿಕ ಸಮಾನತೆಯನ್ನುಂಟು ಮಾಡುವುದು, ಹೀಗೆ ಹಲವು ರೀತಿಯ ಸೇವೆಗಳನ್ನು ಸಾರ್ವಜನಿಕ ಆಡಳಿತ ಒದಗಿಸುತ್ತದೆ. ಮಾನವ ಸಮುದಾಯದ ಅಸ್ತಿತ್ವ ಮತ್ತು ಸಾಮಾಜಿಕ ಅಭಿವೃದ್ಧಿ ಸಾರ್ವಜನಿಕ ಆಡಳಿತದ ದಕ್ಷ ಕಾರ್ಯ ನಿರ್ವಹಣೆಯನ್ನು ಅವಲಂಬಿಸಿದೆ. **ಡೊನ್‌ಹ್ಯಾಮ್** ಅವರು ಹೀಗೆ ಹೇಳಿದ್ದಾರೆ "ನಮ್ಮ ನಾಗರಿಕತೆಯೇನಾದರೂ ವಿಫಲಗೊಂಡರೆ ಅದಕ್ಕೆ ಸಾರ್ವಜನಿಕ ಆಡಳಿತದ ಕುಸಿತವೇ ಕಾರಣ".

### 1.5.3 ಸಮಾಜಿಕ ಭದ್ರತೆಯನ್ನು ರಕ್ಷಿಸುವ ಸಾಧನ

ಸಮಾಜದಲ್ಲಿ ಸ್ಥಿರತೆಯನ್ನು ಕಾಪಾಡಲು ಸಾರ್ವಜನಿಕ ಆಡಳಿತ ಅತ್ಯಾವಶ್ಯಕವಾಗಿದೆ. ಸಾರ್ವಜನಿಕ ಆಡಳಿತ ಶಾಶ್ವತ ವ್ಯವಸ್ಥೆಯಾಗಿರುವುದರಿಂದ ಇದು ಆಡಳಿತಕ್ಕೆ ಸ್ಥಿರತೆಯನ್ನು ಒದಗಿಸುತ್ತದೆ. ಸರ್ಕಾರಗಳು ಪದೇ ಪದೇ ಬದಲಾಗುತ್ತವೆ. ಆದರೆ ಆಡಳಿತ ಕಾರ್ಯಗಳು ಅವಿಚ್ಛಿನ್ನವಾಗಿ ಹಾಗೂ ಸುಗಮವಾಗಿ ನಡೆಯುವಂತೆ ಸಾರ್ವಜನಿಕ ಆಡಳಿತ ಮುಖ್ಯ ಪಾತ್ರವಹಿಸುತ್ತದೆ. ಸಾರ್ವಜನಿಕ ಆಡಳಿತವು ಸಮಾಜದ ವಿವಿಧ ವರ್ಗಗಳ ನಡುವೆ ಉಂಟಾಗಬಹುದಾದ ಪ್ರಕ್ಷುಬ್ಧತೆ, ಘರ್ಷಣೆ, ಅಸಮಾನತೆ ಮುಂತಾದ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸಿ ಸಮಾಜದಲ್ಲಿ ಒಗ್ಗಟ್ಟು ಹಾಗೂ ಸಾಮರಸ್ಯವನ್ನುಂಟು ಮಾಡುತ್ತದೆ. ಬ್ರೂಕ್ಸ್ ಆಡಮ್ಸ್ ಅವರು ಸಾರ್ವಜನಿಕ ಆಡಳಿತವು ಏಕರೂಪತೆಯನ್ನು ಹೊಂದಿರದೆ ಸಾಮಾಜಿಕ ಶಕ್ತಿಗಳನ್ನು ವ್ಯವಸ್ಥೆಗೊಳಿಸಿ ಒಂದೇ ವ್ಯವಸ್ಥಾ ಘಟಕವನ್ನಾಗಿ ಒಗ್ಗಟ್ಟಿನಿಂದ ತನ್ನ ಕರ್ತವ್ಯ ನಿರ್ವಹಿಸುವಂತೆ ಮಾಡುವ ವ್ಯವಸ್ಥೆ" ಎಂದಿದ್ದಾರೆ. ಉತ್ತಮ ಆಡಳಿತ ವ್ಯವಸ್ಥೆ ಇಲ್ಲವಾದಲ್ಲಿ ಅತ್ಯಂತ ಪ್ರಬಲ ರಾಷ್ಟ್ರವೂ ಕುಸಿದು ಬೀಳುತ್ತದೆ. ಇದಕ್ಕೆ ಪ್ರಾಚೀನ ರೋಮ್ ಸಾಮ್ರಾಜ್ಯವನ್ನು ಉದಾಹರಣೆಯನ್ನಾಗಿ ನೀಡಬಹುದು.

### 1.5.4 ಸಾಮಾಜಿಕ ಬದಲಾವಣೆ ಹಾಗೂ ಅಭಿವೃದ್ಧಿಯ ಸಾಧನ

ಸಾರ್ವಜನಿಕ ಆಡಳಿತವು ಸಾಮಾಜಿಕ ಬದಲಾವಣೆ ಹಾಗೂ ಪ್ರಗತಿಯ ಪ್ರಮುಖ ಸಾಧನವಾಗಿದೆ. ದೇಶವು ಪ್ರಗತಿ ಪಥದಲ್ಲಿ ಸಾಗುವಂತಹ ಎಲ್ಲಾ ಕಾರ್ಯಗಳನ್ನು ನಿರ್ವಹಿಸುತ್ತದೆ. ವಿಶೇಷವಾಗಿ ಅಭಿವೃದ್ಧಿ ಹೊಂದುತ್ತಿರುವ ಆಫ್ರೊ-ಏಶಿಯನ್ ಹಾಗೂ ಲ್ಯಾಟಿನ್ ಅಮೇರಿಕನ್ ರಾಷ್ಟ್ರಗಳಲ್ಲಿ ಸಾರ್ವಜನಿಕ ಆಡಳಿತದ ಪಾತ್ರ ಹಿರಿದು. ಸಾಮಾನ್ಯವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳು ಮುಖ್ಯವಾಗಿ ಸಾಂಪ್ರದಾಯಿಕ ಬಡತನದ ಹಾಗೂ ಕೃಷಿ ಆಧಾರಿತ ಸಮಾಜವನ್ನು ಹೊಂದಿವೆ. ಈ ರಾಷ್ಟ್ರಗಳು ಆಧುನೀಕರಣಗೊಳ್ಳಲು ತವಕಿಸುತ್ತವೆ. ಆರ್ಥಿಕ, ಸಮಾಜಿಕ ಹಾಗೂ ಕೈಗಾರಿಕಾ ಪ್ರಗತಿ ಸಾಧಿಸಲು ದಕ್ಷ, ಕಳಂಕ ರಹಿತ ಹಾಗೂ ಪ್ರಾಮಾಣಿಕ ಮತ್ತು ದಕ್ಷ ಆಡಳಿತ ಅಗತ್ಯ. ಅಭಿವೃದ್ಧಿ ಯೋಜನೆಗಳನ್ನು ದಕ್ಷತೆಯಿಂದ ಹಾಗೂ ಪ್ರಾಮಾಣಿಕವಾಗಿ ಕಾರ್ಯಾಚರಣೆಗೆ ತಂದು ಉತ್ತಮ ರೀತಿಯಲ್ಲಿ ಅಭಿವೃದ್ಧಿ ಸಾಧಿಸುವಲ್ಲಿ ಸಾರ್ವಜನಿಕ ಆಡಳಿತ ಪ್ರಮುಖ ಪಾತ್ರವಹಿಸುತ್ತದೆ. ಹೀಗಾಗಿ ಸಾರ್ವಜನಿಕ ಆಡಳಿತ ಸಮಾಜದಲ್ಲಿ ಬದಲಾವಣೆ ತರುವ ಹಾಗೂ ಆರ್ಥಿಕ ಅಭಿವೃದ್ಧಿಯ ಸಾಧನವಾಗಿದೆ. ಬ್ರೂಕ್ಸ್ ಆಡಮ್ಸ್ ಹೇಳಿರುವಂತೆ "ಸಮಾಜಿಕ ಕ್ರಾಂತಿಯ ಆಘಾತಗಳಿಗೆ ಮೆತ್ತೆಯಂತಿದ್ದು, ಸಾಮಾಜಿಕ ಬದಲಾವಣೆಗಳಿಗೆ ಅವಕಾಶ ಕಲ್ಪಿಸಿ ಕೊಡುತ್ತಿರುವ ಸಾರ್ವಜನಿಕ ಆಡಳಿತವು ಮಾನವ ಸಹಜ ಶಕ್ತಿಯಾಗಿದೆ".

### 1.5.5 ಕಾನೂನು ಮತ್ತು ನೀತಿಗಳ ಅನುಷ್ಠಾನದ ಸಾಧನ

ಸರ್ಕಾರ ರೂಪಿಸಿದ ಕಾನೂನು ಹಾಗೂ ನೀತಿಗಳನ್ನು ಜಾರಿಗೊಳಿಸುವಲ್ಲಿ ಸಾರ್ವಜನಿಕ ಆಡಳಿತ ಪ್ರಮುಖ ಪಾತ್ರ ವಹಿಸುತ್ತದೆ. ಕಾನೂನುಗಳನ್ನು ಜಾರಿಗೊಳಿಸುವುದರ ಮೂಲಕ ಸಾರ್ವಜನಿಕ ಆಡಳಿತವು ಸಮಾಜದಲ್ಲಿ ಜನರ ಚಟುವಟಿಕೆಗಳನ್ನು ನಿಯಂತ್ರಿಸಿ ಕಾನೂನು ಹಾಗೂ ಸುವ್ಯವಸ್ಥೆಯನ್ನು ಕಾಪಾಡುತ್ತದೆ. ಹೀಗೆ ಸಾರ್ವಜನಿಕ ಆಡಳಿತ ಕಾನೂನುಗಳನ್ನು ಕಾರ್ಯಗತಗೊಳಿಸಲು ಅವಶ್ಯಕವಾದ ಸಾಧನವಾಗಿದೆ. ಸಾರ್ವಜನಿಕ ಆಡಳಿತವು ಸರ್ಕಾರದ ದೈನಂದಿನ ಕಾರ್ಯಗಳ ಹೊಣೆಯನ್ನು ಹೊತ್ತಿದೆಯಲ್ಲದೆ, ಅದು ಅಭಿವೃದ್ಧಿ ಯೋಜನೆಗಳನ್ನು ಸಕಾಲದಲ್ಲಿ ಹಾಗೂ ನಿಗದಿತ ಅವಧಿಯಲ್ಲಿ ಯಶಸ್ವಿಯಾಗಿ ಅನುಷ್ಠಾನಕ್ಕೆ ತರುವಂತೆ ನೋಡುತ್ತದೆ. ಸಾರ್ವಜನಿಕ ಆಡಳಿತವು ನಿಷ್ಠೆ ಹಾಗೂ ದಕ್ಷತೆಯಿಂದ ಕಾರ್ಯನಿರ್ವಹಿಸದಿದ್ದರೆ ಉತ್ತಮ ನೀತಿಗಳ ಗುರಿಗಳು ಕೇವಲ ಕಾಗದದ ಘೋಷಣೆಗಳಾಗಿ ಉಳಿಯುತ್ತವೆ.

### 1.5.6 ರಾಷ್ಟ್ರೀಯ ಸಮಗ್ರತೆಯ ಸಾಧನ

ಸಾರ್ವಜನಿಕ ಆಡಳಿತವು ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ರಾಷ್ಟ್ರೀಯ ಸಮಗ್ರತೆಯನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ರಾಜಕೀಯ ಅಸ್ಥಿರತೆ, ಜನಾಂಗೀಯ ಕಲಹ, ವರ್ಗಸಂಘರ್ಷಣೆ ವಿಚ್ಛಿದ್ರಕಾರಕ ಶಕ್ತಿಗಳು ಪ್ರತ್ಯೇಕತಾ ಪ್ರವೃತ್ತಿ

ಮುಂತಾದವುಗಳು ಅಭಿವೃದ್ಧಿ ಶೀಲ ರಾಷ್ಟ್ರಗಳ ಲಕ್ಷಣಗಳಾಗಿವೆ. ಈ ರಾಷ್ಟ್ರಗಳಲ್ಲಿ ಸಾರ್ವಜನಿಕ ಆಡಳಿತವು ರಾಷ್ಟ್ರೀಯ ಸಮಗ್ರತೆ ಹಾಗೂ ಐಕ್ಯತೆಯನ್ನು ಕಾಪಾಡುವಲ್ಲಿ ಮುಖ್ಯ ಪಾತ್ರವಹಿಸುತ್ತಿದೆ. ದೇಶ ಸಂರಕ್ಷಣೆಗೆ ಮಾನವ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮುಖ್ಯ ಜವಾಬ್ದಾರಿ ಸಾರ್ವಜನಿಕ ಆಡಳಿತದ ಮೇಲಿದೆ.

### 1.5.7. ನೀತಿ ನಿರೂಪಣೆಯಲ್ಲಿ ಹೆಚ್ಚುತ್ತಿರುವ ಪಾತ್ರ

ಇಂದು ಸಾರ್ವಜನಿಕ ಆಡಳಿತದ ಪಾತ್ರ ಶಾಸಕಾಂಗ ಮತ್ತು ಕಾರ್ಯಾಂಗ ರೂಪಿಸಿದ ನೀತಿಗಳನ್ನು ಜಾರಿಗೊಳಿಸುವುದಕ್ಕೆ ಮಾತ್ರ ಸೀಮಿತವಾಗಿರದೆ, ಶಾಸಕಾಂಗ ಮತ್ತು ಸಚಿವ ಸಂಪುಟಕ್ಕೆ ನೀತಿ ನಿರೂಪಣಾ ಕಾರ್ಯದಲ್ಲಿ ಅಗತ್ಯವಾದ ಮಾಹಿತಿ, ಅಂಕಿ ಅಂಶಗಳು ಹಾಗೂ ಸಲಹೆಯನ್ನು ನೀಡುವುದರ ಮೂಲಕ ಸಹಾಯ ಮಾಡುತ್ತದೆ. ನೀತಿ ನಿರೂಪಣಾ ಕಾರ್ಯದಲ್ಲಿ ಆಡಳಿತ ಕೌಶಲ್ಯತೆ, ಪರಿಣಿತಿ ಹಾಗೂ ಅನುಭವ ಹೊಂದಿರುವ ಆಡಳಿತ ಸಿಬ್ಬಂದಿಯು ನೀಡುವ ಸಲಹೆ ಮತ್ತು ಮಾಹಿತಿ ಆಧಾರದ ಮೇಲೆಯೇ ನೀತಿ ಮತ್ತು ಸರ್ಕಾರದ ವಿವಿಧ ಧೋರಣೆಗಳು ರೂಪಿಸಲ್ಪಡುತ್ತವೆ. ಮಂತ್ರಿಗಳು ಮತ್ತು ಶಾಸಕರು ಹವ್ಯಾಸಿ ರಾಜಕಾರಣಿಗಳಾಗಿದ್ದು, ಆಡಳಿತಾತ್ಮಕ ಕೌಶಲ್ಯತೆ, ಜ್ಞಾನ ಮತ್ತು ಅನುಭವ ಹೊಂದಿರುವುದಿಲ್ಲ. ಆದ್ದರಿಂದ ಅವರು ಆಡಳಿತಾಧಿಕಾರಿಗಳು ನೀಡುವ ಸಲಹೆ ಸೂಚನೆಗಳ ಮೇಲೆ ಅವಲಂಬಿತರಾಗಿ ನೀತಿ ನಿರೂಪಿಸುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಸಾರ್ವಜನಿಕ ನೀತಿಗಳು ಹಾಗೂ ಶಾಸನಗಳು ಆಡಳಿತಾಂಗದಿಂದ ಉಪಕ್ರಮಿಸುತ್ತವೆ. ಏಕೆಂದರೆ ಆಡಳಿತಾಧಿಕಾರಿಗಳು ಸಾರ್ವಜನಿಕರೊಡನೆ ನಿರಂತರ ಹಾಗೂ ನೇರ ಸಂಪರ್ಕ ಹೊಂದಿರುವುದರಿಂದ ನೀತಿಯ ಅನುಷ್ಠಾನದಲ್ಲಿ ಉದ್ಭವಿಸುವ ಸಮಸ್ಯೆಗಳು ಹಾಗೂ ಎಡರು ತೊಡರುಗಳನ್ನು ಅವರು ಬಲ್ಲವರಾಗಿರುತ್ತಾರೆ. ಅಂತಹ ಸಮಸ್ಯೆಗಳು ಅಥವಾ ತೊಂದರೆಗಳ ನಿವಾರಣೆಗೆ ಸಲಹೆ ಸೂಚನೆಗಳನ್ನು ನೀಡಿ, ನೀತಿಯಲ್ಲಿ ಕೆಲವು ಹೊಸ ಪ್ರಸ್ತಾವನೆಗಳನ್ನು ರೂಪಿಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಆಡಳಿತಾಧಿಕಾರಿಗಳು ಅಸ್ತಿತ್ವದಲ್ಲಿರುವ ಕಾನೂನುಗಳಲ್ಲಿ ತಿದ್ದುಪಡಿ ತರಬಹುದು ಅಥವಾ ಹೊಸ ಕಾನೂನು ರಚನೆಗೆ ಸಲಹೆ ನೀಡುತ್ತಾರೆ. ಇಂತಹ ಸಂದರ್ಭದಲ್ಲಿ ನೀತಿಯ ಪ್ರಸ್ತಾವನೆಗಳು (Policy proposals) ಆಡಳಿತಾಂಗದಿಂದ ಹುಟ್ಟುತ್ತವೆ. ಶಾಸಕಾಂಗ ಅವುಗಳಿಗೆ ಕೇವಲ ಔಪಚಾರಿಕವಾಗಿ ತನ್ನ ಸಮ್ಮತಿ ನೀಡುತ್ತದೆ. ಹೀಗೆ ಆಡಳಿತಾಂಗವು ಕೇವಲ ನೀತಿ ಅನುಷ್ಠಾನವಲ್ಲದೆ, ಅದರ ನಿರೂಪಣಾ ಕಾರ್ಯದಲ್ಲೂ ಪ್ರಮುಖ ಪಾತ್ರವಹಿಸುತ್ತದೆ.

### 1.5.8 ಅಭಿವೃದ್ಧಿ ಮತ್ತು ಕಲ್ಯಾಣ ಸಾಧನ

ಸಾರ್ವಜನಿಕ ಆಡಳಿತ ಹೆಚ್ಚು ಮಹತ್ವ ಪಡೆದಿದ್ದು ಸುಖೀ ರಾಜ್ಯದ ಉದಯದೊಂದಿಗೆ ಎಂದು ಹೇಳಬಹುದು. ಇಂದಿನ ಸುಖೀ ರಾಜ್ಯವು ಪ್ರಜೆಗಳ ಹಿತದೃಷ್ಟಿಯಿಂದ ಅಸಂಖ್ಯಾತ ಕಾರ್ಯಗಳನ್ನು ನಿರ್ವಹಿಸಬೇಕಾಗಿದೆ. ಆಧುನಿಕ ಸಮಾಜದಲ್ಲಿ ಪ್ರಜೆಗಳು ಪ್ರತಿಯೊಂದು ಬೇಡಿಕೆಯ ಈಡೇರಿಕೆಗೂ ಆಡಳಿತ ಸಹಾಯವನ್ನು ನಿರೀಕ್ಷಿಸುತ್ತಾರೆ. ಆರ್ಥಿಕ ಅಸಮಾನತೆ, ದಾರಿದ್ರ್ಯ, ನಿರುದ್ಯೋಗ ಮೊದಲಾದವುಗಳನ್ನು ಮಹತ್ತರವಾದ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ತರುವ ಜವಾಬ್ದಾರಿ ಸಾರ್ವಜನಿಕ ಆಡಳಿತದ ಮೇಲಿದೆ. ಹೀಗೆ ಸಾರ್ವಜನಿಕ ಆಡಳಿತವು ಅಭಿವೃದ್ಧಿ ಮತ್ತು ಸುಖೀ ರಾಜ್ಯ ಸ್ಥಾಪನೆಯ ಒಂದು ಉತ್ತಮ ಸಾಧನವೆಂದು ಹೇಳಬಹುದು.

ಸಾರ್ವಜನಿಕ ಆಡಳಿತದ ಪಾತ್ರ ಮತ್ತು ಪ್ರಾಮುಖ್ಯತೆಯನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ವಿಶ್ಲೇಷಿಸಬಹುದು

1) ಸಾರ್ವಜನಿಕ ಆಡಳಿತವು ಪ್ರತಿಯೊಂದು ಸರ್ಕಾರಕ್ಕೂ ಮೂಲಾಧಾರವಾಗಿದೆ.
2) ಅದು ಸರ್ಕಾರ ರೂಪಿಸಿದ ಕಾನೂನುಗಳು, ನೀತಿಗಳು ಮತ್ತು ಕಾರ್ಯ ಕ್ರಮಗಳನ್ನು ಅನುಷ್ಠನಗೊಳಿಸುವ ಒಂದು ಮುಖ್ಯ ಸಾಧನ
3) ಅದು ಸಾಮಾಜಿಕ ಬದಲಾವಣೆ ಹಾಗೂ ಆರ್ಥಿಕ ಅಭಿವೃದ್ಧಿಯ (ವಿಶೇಷವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ) ಸಾಧನವಾಗಿದೆ.

N61-5F

4) ಅನೈಕ್ಯತೆ, ವರ್ಗ ಸಂಘರ್ಷಣೆ, ಪ್ರತ್ಯೇಕತಾ ಪ್ರವೃತ್ತಿ ಮೊದಲಾದ ಸವಾಲುಗಳನ್ನು ಎದುರಿಸುತ್ತಿರುವ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಸಮಗ್ರತೆ ಹಾಗೂ ಐಕ್ಯತೆಯನ್ನುಂಟು ಮಾಡುವ ಸಾಧನವಾಗಿದೆ.

5) ಸಾರ್ವಜನಿಕ ಆಡಳಿತವು ಜನತೆಗೆ ಶಿಕ್ಷಣ, ಆರೋಗ್ಯರಕ್ಷಣೆ ಸಾರಿಗೆ ಸಂಪರ್ಕ ಸೌಲಭ್ಯಗಳು ಮೊದಲಾದ ಹಲವಾರು ಸೇವೆಗಳನ್ನು ಒದಗಿಸುವ ಸಾಧನವಾಗಿದೆ.

6) ಅದು ಸಾಮಾಜಿಕ ಸ್ಥಿರತೆಯನ್ನು ಕಾಪಾಡುವ ಒಂದು ಸಾಧನ.

ಗೆರಾಲ್ಡ್ ಕೈಡನ್ (Gerald caiden) ಅವರು ಆಧುನಿಕ ಸಮಾಜದಲ್ಲಿ ಸಾರ್ವಜನಿಕ ಆಡಳಿತ ವಹಿಸುತ್ತಿರುವ ಪಾತ್ರವನ್ನು ತಮ್ಮ "ದಿ ಡೈನಾಮಿಕ್ಸ್ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್" ಎಂಬ ಕೃತಿಯಲ್ಲಿ ಹೀಗೆ ಹೇಳಿದ್ದಾರೆ.

1) ರಾಜಕೀಯ ವ್ಯವಸ್ಥೆಯ ರಕ್ಷಣೆ ಮಾಡುತ್ತದೆ.

2) ಸಮಾಜದಲ್ಲಿ ಸ್ಥಿರತೆ ಹಾಗೂ ಸುವ್ಯವಸ್ಥೆಯನ್ನ ಕಾಪಾಡುವುದು

3) ಸಾಮಾಜಿಕ-ಆರ್ಥಿಕ ಬದಲಾವಣೆಗಳ ಸಾಂಸ್ಥೀಕರಣ

4) ಬೃಹತ್ ಗಾತ್ರದ ವಾಣಿಜ್ಯ ಸೇವೆಗಳ ನಿರ್ವಹಣೆ

5) ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿಯನ್ನು ಸಾಧಿಸುವುದು.

6) ಸಮಾಜದ ದುರ್ಬಲ ವರ್ಗಗಳ ರಕ್ಷಣೆ.

7) ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವುದು.

8) ಸಾರ್ವಜನಿಕ ನೀತಿಗಳ ಹಾಗೂ ರಾಜಕೀಯ ಪ್ರವೃತ್ತಿಗಳ ಮೇಲೆ ಪ್ರಭಾವ ಬೀರುವುದು.

## 1.6. ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವಿನ ಹೋಲಿಕೆಗಳು ಮತ್ತು ವ್ಯತ್ಯಾಸಗಳು

ಸಮಾನ್ಯವಾಗಿ ಆಡಳಿತದ ಕಾರ್ಯಚಟುವಟಿಕೆಗಳು ನಿರ್ವಹಣೆಯು ಸರ್ಕಾರಿ ಸಂಸ್ಥೆಗಳಿಂದ ನಿರ್ವಹಿಸಲ್ಪಟ್ಟಾಗ ಸಾರ್ವಜನಿಕ ಆಡಳಿತವೆಂದೂ ಆಡಳಿತ ಕಾರ್ಯಚಟುವಟಿಕೆಗಳ ನಿರ್ವಹಣೆಯು ಖಾಸಗಿ ಸಂಸ್ಥೆಗಳಿಂದ ನಿರ್ವಹಿಸಲ್ಪಟ್ಟರೆ ಅದನ್ನು ಖಾಸಗಿ ಆಡಳಿತವೆಂದು ಕರೆಯುತ್ತಾರೆ. ಅಂದರೆ ಕೇಂದ್ರ, ರಾಜ್ಯ, ಸ್ಥಳೀಯ ಸರ್ಕಾರಗಳು, ಸರ್ಕಾರಿ ನಿಗಮಗಳು ನಿರ್ವಹಿಸುವ ಆಡಳಿತ ಸಾರ್ವಜನಿಕ ಆಡಳಿತವಾಗುತ್ತದೆ. ಖಾಸಗಿ ವ್ಯಕ್ತಿಗಳು, ಸಂಘ-ಸಂಸ್ಥೆಗಳು, ಖಾಸಗಿ ಕಂಪನಿಗಳು ಇತ್ಯಾದಿ ನಿರ್ವಹಿಸುವ ಆಡಳಿತ ಖಾಸಗಿ ಆಡಳಿತ ಎನಿಸುತ್ತದೆ.

ಆದರೆ ಆಡಳಿತದ ಈ ವರ್ಗೀಕರಣದ ಬಗ್ಗೆ ಲೇಖಕರಲ್ಲಿ ಭಿನ್ನಾಭಿಪ್ರಾಯಗಳಿವೆ. ಹೆನ್ರಿ ಫಾಯಲ್, ಎಂ.ಪಿ. ಫಾಲೆಟ್, ಉರ್ವಿಕ್ ಮತ್ತು ಈರ್ವಿನ್ ಮುಂತಾದ ಲೇಖಕರ ಅಭಿಪ್ರಾಯದಲ್ಲಿ ಎಲ್ಲಾ ಆಡಳಿತವು ಏಕರೀತಿಯ ಮೂಲ ಲಕ್ಷಣಗಳನ್ನು ಹೊಂದಿರುವುದರಿಂದ ಆಡಳಿತವೆಲ್ಲಾ ಒಂದೇ. ಆಡಳಿತದ ಮುಖ್ಯ ತತ್ವಗಳಾದ ಯೋಜನೆ, ಸಂಘಟನೆ, ಸಂಯೋಜನೆ, ಹಣಕಾಸು, ನಿಯಂತ್ರಣಗಳು ಖಾಸಗಿ ಹಾಗೂ ಸಾರ್ವಜನಿಕ ಆಡಳಿತಗಳೆರಡಲ್ಲಿಯೂ ಕಂಡು ಬರುವುದರಿಂದ ಖಾಸಗಿ ಹಾಗೂ ಸಾರ್ವಜನಿಕ ಆಡಳಿತಗಳ ಮಧ್ಯೆ ಯಾವುದೇ ವ್ಯತ್ಯಾಸವಿಲ್ಲವೆಂದು ಈ ಲೇಖಕರು ಅಭಿಪ್ರಾಯಪಟ್ಟಿದ್ದಾರೆ.

ಆದರೆ ಇನ್ನು ಕೆಲವು ಲೇಖಕರ ಅಭಿಪ್ರಾಯದಲ್ಲಿ ಸಾರ್ವಜನಿಕ ಮತ್ತು ಖಾಸಗಿ ಆಡಳಿತದ ನಡುವೆ ಅನೇಕ ವ್ಯತ್ಯಾಸಗಳಿರುವುದರಿಂದ ಅವೆರಡೂ ಒಂದೇ ಅಲ್ಲ. ಸೈಮನ್, ಪಾಲ್ ಹೆಚ್ ಅಪ್ಲೆಬಿ, ಸರ್ ಜೊಸಿಯಾ ಸ್ಟ್ಯಾಂಪ್ ಮತ್ತು ಡ್ರಕರ್ ಮುಂತಾದ ಲೇಖಕರು

ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳು ತಮ್ಮ ನಿರ್ದಿಷ್ಟ ಗುರಿ ಸಾಧನೆಗಾಗಿ ತಮ್ಮದೇ ಆದ ವಿಧಾನಗಳನ್ನು ಅನುಸರಿಸುವುದರಿಂದ ಅವೆರಡರ ನಡುವೆ ಅನೇಕ ವ್ಯತ್ಯಾಸಗಳಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೊದಲು ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವಿನ ವ್ಯತ್ಯಾಸಗಳನ್ನು ಚರ್ಚಿಸೋಣ.

### 1.6.1 ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತ ನಡುವಿನ ವ್ಯತ್ಯಾಸಗಳು

**1) ರಾಜಕೀಯ ನಿರ್ದೇಶನ**

ಸಾರ್ವಜನಿಕ ಆಡಳಿತವು ಯಾವಾಗಲೂ ರಾಜಕೀಯ ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಡುತ್ತವೆ. ಮಂತ್ರಿಮಂಡಲ ರೂಪಿಸಿದ ನೀತಿಗಳನ್ನು ಸರ್ಕಾರಿ ನೌಕರರು ಕಾರ್ಯಕತಗೊಳಿಸಬೇಕು. ಆದರೆ ಖಾಸಗಿ ಆಡಳಿತ ಗುರಿಗಳು ಮತ್ತು ಉದ್ದೇಶಗಳು ರಾಜಕೀಯ ನಿರ್ದೇಶನವನ್ನು ಅವಲಂಬಿಸಿರುವುದಿಲ್ಲ.

**2) ಸೇವೆ-ಲಾಭಗಳಿಕೆ**

ಸಾರ್ವಜನಿಕ ಆಡಳಿತದ ಪ್ರಮುಖ ಉದ್ದೇಶ ಸಾರ್ವಜನಿಕ ಸೇವೆ. ಆದರೆ, ಖಾಸಗಿ ಆಡಳಿತದ ಮುಖ್ಯ ಉದ್ದೇಶ ಲಾಭಗಳಿಕೆ ಆಗಿದೆ. ಕೆಲವು ಕಾರ್ಯಗಳು ಜನರಿಗೆ ಉಪಯುಕ್ತವಾಗಿದ್ದರೆ, ಅವುಗಳಿಂದ ನಷ್ಟ ಸಂಭವಿಸಿದರೂ ಸರ್ಕಾರವು ಆ ಕೆಲಸಗಳನ್ನು ಕೈಗೊಳ್ಳುತ್ತದೆ. ಮೇಲಾಗಿ ಸರ್ಕಾರದ ಕೆಲವಾರು ಕಾರ್ಯಗಳು ಬರೀ ವೆಚ್ಚದಾಯಕವಾಗಿವೆ. ಇಂತಹವುಗಳಿಂದ ಲಾಭ ದೊರಕದಿದ್ದರೂ ಅವುಗಳನ್ನು ಸರ್ಕಾರ ನಿರ್ವಹಿಸುತ್ತದೆ. ಆದರೆ ಖಾಸಗಿ ಆಡಳಿತವು ಒಂದು ನಿರ್ದಿಷ್ಟ ಕಾರ್ಯದಲ್ಲಿ ಲಾಭ ದೊರಕುವುದಿಲ್ಲವೆಂದು ಕಂಡು ಬಂದರೆ, ಜನರಿಗೆ ಎಷ್ಟೇ ಉಪಯೋಗವಾಗುತ್ತಿದ್ದರೂ ಆ ಕಾರ್ಯವನ್ನು ಕೈಗೊಳ್ಳುವುದಿಲ್ಲ.

**3) ಸೇವೆಯ ಬೆಲೆ (ಆದಾಯ-ಖರ್ಚು)**

ಸಾರ್ವಜನಿಕ ಆಡಳಿತವು ಒದಗಿಸುವ ಸೇವೆಗೂ ಮತ್ತು ಅದಕ್ಕಾಗಿ ಆಗುವ ಖರ್ಚಿಗೂ ನಿಕಟ ಸಂಬಂಧವಿದೆ. ಒದಗಿಸುವ ಸೇವೆಗೆ ಆಗುವ ಖರ್ಚನ್ನು ಮಾತ್ರ ಸಾರ್ವಜನಿಕರಿಂದ ತೆರಿಗೆ ರೂಪದಲ್ಲಿ ಪಡೆಯಲಾಗುತ್ತದೆ. ಆದುದರಿಂದಲೇ ಸರ್ಕಾರದ ಆಯವ್ಯಯ ಕೊರತೆಯಿಂದ ಕೂಡಿರುತ್ತದೆ. ಅಂದರೆ ಆದಾಯಕ್ಕಿಂತ ಖರ್ಚು ಹೆಚ್ಚಾಗಿರುತ್ತದೆ. ಆದರೆ ಖಾಸಗಿ ಆಡಳಿತದಲ್ಲಿ ಖರ್ಚಿಗಿಂತ ಆದಾಯ ಹೆಚ್ಚಾಗಿರುತ್ತದೆ.

**4) ಕಾರ್ಯಗಳ ಸ್ವರೂಪ**

ಸಾರ್ವಜನಿಕ ಆಡಳಿತದ ಕಾರ್ಯಕ್ಷೇತ್ರವು ಖಾಸಗಿ ಆಡಳಿತದ ಕಾರ್ಯಕ್ಷೇತ್ರಕ್ಕಿಂತ ವ್ಯಾಪಕವಾದುದು. ಸಾರ್ವಜನಿಕ ಆಡಳಿತದ ಕಾರ್ಯ ಚಟುವಟಿಕೆಗಳು ಇಡೀ ರಾಷ್ಟ್ರವನ್ನು ವ್ಯಾಪಿಸಿದೆ. ಇದಕ್ಕೆ ಪ್ರತಿಯಾಗಿ ಖಾಸಗಿ ಆಡಳಿತದ ಕಾರ್ಯಕ್ಷೇತ್ರವು ಸೀಮಿತವಾಗಿರುತ್ತದೆ. ಅದರ ಕಾರ್ಯಚಟುವಟಿಕೆಗಳು ಒಂದು ನಿರ್ದಿಷ್ಟ ವಲಯವನ್ನು ಮಾತ್ರ ವ್ಯಾಪಿಸಿರುತ್ತದೆ.

ಸಾರ್ವಜನಿಕ ಆಡಳಿತವು ನಾಗರಿಕ ಜೀವನ ನಡೆಸಲು ಅತ್ಯಾವಶ್ಯಕವಾದ ಕಾರ್ಯಗಳನ್ನೆಲ್ಲಾ ನಿರ್ವಹಿಸುತ್ತದೆ. ಉದಾ. ದೇಶ ರಕ್ಷಣೆ, ಆರೋಗ್ಯ, ಕಾನೂನು ಮತ್ತು ವ್ಯವಸ್ಥೆ, ಸಾರಿಗೆ ಸಂಪರ್ಕ ಇತ್ಯಾದಿ ಕಾರ್ಯಗಳು. ಇದಕ್ಕೆ ಪ್ರತಿಯಾಗಿ ಖಾಸಗಿ ವಲಯದ ಆಡಳಿತಗಾರನು ನಿರ್ವಹಿಸುವ ಕಾರ್ಯಗಳು ಇಷ್ಟು ಮಹತ್ವ ಪಡೆದಿರುವುದಿಲ್ಲ. ಮೇಲಾಗಿ ಸಾರ್ವಜನಿಕ ಆಡಳಿತವು ಹಲವಾರು ಸೇವೆಗಳಲ್ಲಿ ಏಕಸ್ವಾಮ್ಯ ಹೊಂದಿದೆ. ಉದಾ : ರೇಲ್ವೆ, ಸೇನೆ, ಕಾನೂನು ಸುವ್ಯವಸ್ಥೆ ಇತ್ಯಾದಿ, ಯಾವ ಖಾಸಗಿ ಉದ್ಯಮಿಯೂ ಈ ಸೇವೆಗಳನ್ನು ಕೈಗೊಳ್ಳಲಾರ.

**5) ಸಾರ್ವಜನಿಕ ಹೊಣೆಗಾರಿಕೆ**

ಸಾರ್ವಜನಿಕ ವಲಯದ ಆಡಳಿತಗಾರನು ತಾನು ನಿರ್ವಹಿಸುವ ಕಾರ್ಯಗಳಿಗೆ ಶಾಸಕಾಂಗದ ಮೂಲಕ ಸಾರ್ವಜನಿಕರಿಗೆ ಸಂಪೂರ್ಣವಾಗಿ ಜವಾಬ್ದಾರಿಯಾಗಿರುತ್ತಾನೆ. ಆಡಳಿತದ ಸಣ್ಣಪುಟ್ಟ ಲೋಪ ದೋಷಗಳ ಬಗ್ಗೆ ಶಾಸಕಾಂಗದಲ್ಲಿ ಪ್ರಶ್ನೆ ಕೇಳಬಹುದು. ಸಂಬಂಧ ಪಟ್ಟ ಸಚಿವರು ಇವುಗಳಿಗೆ ತೃಪ್ತಿಕರವಾದ ಉತ್ತರ ನೀಡಬೇಕಾಗುತ್ತದೆ. ಆದರೆ ಖಾಸಗಿ ವಲಯದಲ್ಲಿ ಇಂತಹ ಜವಾಬ್ದಾರಿಯಿರುವುದಿಲ್ಲ. ಅಲ್ಲದೆ ಸಾರ್ವಜನಿಕ ಆಡಳಿತವು ಪತ್ರಿಕೆ ಹಾಗೂ ರಾಜಕೀಯ ಪಕ್ಷಗಳ ಟೀಕೆಗಳನ್ನು ಎದುರಿಸಬೇಕಾಗುತ್ತದೆ. ಅದರ ಕಾರ್ಯಚಟುವಟಿಕೆ ಮತ್ತು ನಡತೆಯ ಮೇಲೆ ಯಾವಾಗಲೂ ಸಾರ್ವಜನಿಕರು, ಪತ್ರಿಕೆಗಳು ಮತ್ತು ರಾಜಕೀಯ ಪಕ್ಷಗಳು ಕಣ್ಣಿಟ್ಟಿರುತ್ತವೆ. ಅದು ಸಾರ್ವಜನಿಕ ಅಭಿಪ್ರಾಯವನ್ನು ಕಡೆಗಣಿಸಲಾರದು. ಆದರೆ ಖಾಸಗಿ ಆಡಳಿತದಲ್ಲಿ ಇಂತಹ ಪರಿಸ್ಥಿತಿ ಇರುವುದಿಲ್ಲ.

**6) ಕಾರ್ಯವಿಧಾನ - ಏಕರೂಪದ ನೀತಿ**

ಸಾರ್ವಜನಿಕ ಆಡಳಿತವು ಅನುಸರಿಸುವ ಕಾರ್ಯ ವಿಧಾನವು ಸ್ಥಿರವಾಗಿದ್ದು, ಸಾರ್ವಜನಿಕರ ಜತೆ ವ್ಯವಹರಿಸುವಾಗ ಏಕರೂಪದ ನೀತಿಯನ್ನು ಅನುಸರಿಸುತ್ತದೆ. ಭಿನ್ನಭೇದ ಅಥವಾ ಪಕ್ಷಪಾತ ಮಾಡುವಂತಿಲ್ಲ. ಸಾರ್ವಜನಿಕರೊಡನೆ ವ್ಯವಹರಿಸುವಾಗ ನಿಷ್ಪಕ್ಷಪಾತವಾಗಿರುತ್ತಾರೆ.

ಆದರೆ ಖಾಸಗಿ ಆಡಳಿತದ ಕಾರ್ಯವಿಧಾನ ಅಥವಾ ಅದರ ವ್ಯವಹಾರವು ಸ್ಥಿರವಾಗಿಲ್ಲ ಹಾಗೂ ಏಕರೂಪದ ನೀತಿಯನ್ನು ಹೊಂದಿರುವುದಿಲ್ಲ.

**7) ಕಾನೂನಿನ ನಿಯಂತ್ರಣ ಮತ್ತು ಅನಮ್ಯತೆ**

ಸಾರ್ವಜನಿಕ ಆಡಳಿತವು ಖಾಸಗಿ ಆಡಳಿತಕ್ಕಿಂತಲೂ ಕಾನೂನು ಮತ್ತು ನಿಯಮ ನಿಬಂಧನೆಗಳ ಪೂರ್ಣ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಸಾರ್ವಜನಿಕ ಆಡಳಿತಗಾರನು ಖಾಸಗಿ ಆಡಳಿತಗಾರನಿಗಿಂತ ಹೆಚ್ಚು ಅನಮ್ಯ ನೀತಿಯನ್ನು ಅನುಸರಿಸಬೇಕಾಗುತ್ತದೆ. ಏಕೆಂದರೆ ಸಾರ್ವಜನಿಕ ಆಡಳಿತಗಾರನು ಕಾನೂನಿನ ಚೌಕಟ್ಟಿನಲ್ಲಿಯೇ ಕಾರ್ಯ ನಿರ್ವಹಿಸ ಬೇಕಾಗಿರುವುದರಿಂದ ಹೆಚ್ಚಿನ ನಮ್ಯತೆಗೆ ಅವಕಾಶವಿರುವುದಿಲ್ಲ. ಆದರೆ ಖಾಸಗಿ ಆಡಳಿತಗಾರನಿಗೆ ಸ್ವಂತ ವಿವೇಚನಾಧಿಕಾರವಿರುವುದರಿಂದ ತನ್ನ ಕರ್ತವ್ಯ ನಿರ್ವಹಣೆಯಲ್ಲಿ ನಮ್ಯತೆ ನೀತಿಯನ್ನು ಅನುಸರಿಸಬಹುದು.

**8) ಹಣಕಾಸಿನ ನಿಯಂತ್ರಣ**

ಸಾರ್ವಜನಿಕ ಆಡಳಿತವು ಹಣಕಾಸಿನ ವಿಷಯದಲ್ಲಿ ಶಾಸಕಾಂಗದ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಕಾರ್ಯಾಂಗವು ಸ್ವೇಚ್ಛೆಯಾಗಿ ಹಣ ವಸೂಲ್ಮಾಡುವುದಾಗಲಿ, ಖರ್ಚು ಮಾಡುವುದಾಗಲಿ ಸಾಧ್ಯವಿಲ್ಲ. ಅದಕ್ಕೆ ಶಾಸಕಾಂಗದ ಒಪ್ಪಿಗೆ ಅಗತ್ಯ. ಆದರೆ ಖಾಸಗಿ ಆಡಳಿತದ ಹಣಕಾಸಿನ ಮೇಲೆ ಇಂತಹ ನಿಯಂತ್ರಣ ಇರುವುದಿಲ್ಲ. ಏಕೆಂದರೆ ಖಾಸಗಿ ಉದ್ಯಮಿ ತನ್ನ ಸಂಸ್ಥೆಯ ಕಾರ್ಯಗಳನ್ನು ತನ್ನ ಇಚ್ಛೆಯಂತೆ ನಿರ್ವಹಿಸುವುದಲ್ಲದೆ, ಅದರಲ್ಲಿ ಪೂರ್ಣ ಬಂಡವಾಳವನ್ನು ಆತನೇ ಹೂಡಿರುತ್ತಾನೆ.

**9) ದಕ್ಷತೆ**

ಖಾಸಗಿ ಆಡಳಿತವು ಸಾರ್ವಜನಿಕ ಆಡಳಿತಕ್ಕಿಂತ ಹೆಚ್ಚು ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯ ನಿರ್ವಹಿಸುತ್ತದೆ. ಏಕೆಂದರೆ, ಖಾಸಗಿ ಆಡಳಿತದಲ್ಲಿ ಹೆಚ್ಚಿನ ಲಾಭಗಳಿಸಬೇಕೆಂಬ ಪ್ರೇರಣೆಯು ನೌಕರನನ್ನು ಪೂರ್ಣ ಇಚ್ಛೆಯಿಂದ ಕಾರ್ಯನಿರ್ವಹಿಸಲು ಪ್ರೋತ್ಸಾಹ ನೀಡುತ್ತದೆ. ಇಂತಹ ಪ್ರೇರಣೆಯ ಉತ್ತೇಜನವು ಸಾರ್ವಜನಿಕ ಆಡಳಿತದಲ್ಲಿ ಕಂಡು ಬರುವುದಿಲ್ಲ.

**10) ಭದ್ರತೆ, ಚುರುಕು, ಶಿಸ್ತು**

ಸಾರ್ವಜನಿಕ ಆಡಳಿತವು ಖಾಸಗಿ ಆಡಳಿತಕ್ಕಿಂತ ಶ್ರೇಷ್ಠ ಮಟ್ಟದ ಸೇವಾ ಭದ್ರತೆ ಮತ್ತು ಸೇವಾ ಸ್ಥಿತಿಗತಿಗಳನ್ನು ಒದಗಿಸುತ್ತದೆ. ಖಾಸಗಿ ಆಡಳಿತವು ಅಸ್ಥಿರತೆ, ತಾರತಮ್ಯಗಳಿಂದ ಕೂಡಿದೆ. ಆದರೂ ಖಾಸಗಿ ಆಡಳಿತವು ಕ್ಷಿಪ್ರ ನಿರ್ಧಾರ, ಉತ್ತಮ ಶಿಸ್ತು ಮತ್ತು ಹಿರಿದಾದ ದಕ್ಷತೆಯ ಗುಣಗಳನ್ನು ಹೊಂದಿದೆ. ಸಾರ್ವಜನಿಕ ಆಡಳಿತವು ಅಶಿಸ್ತು, ವಿಳಂಬ, ಅರಕ್ಷತೆ ಮತ್ತು ಜಟಿಲವಾದ ಕಾರ್ಯ ವಿಧಾನದ ಗುಣಗಳನ್ನು ಹೊಂದಿದೆ.

ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವಿನ ವ್ಯತ್ಯಾಸವು ಪ್ರತಿಯೊಂದು ರಾಷ್ಟ್ರವು ನಂಬಿರುವ ರಾಜಕೀಯ ತತ್ತ್ವ ಸರಣಿ ಹಾಗೂ ವ್ಯವಸ್ಥೆಯಿಂದ ನಿರ್ಧರಿಸಲ್ಪಡುತ್ತದೆ. ಉದಾ: ಅಮೆರಿಕದಲ್ಲಿ ಖಾಸಗಿ ವಲಯವು ಆ ದೇಶದ ಆರ್ಥಿಕ ವ್ಯವಸ್ಥೆ ಮತ್ತು ಸಮಾಜದಲ್ಲಿ ಪ್ರಮುಖ ಪಾತ್ರವಹಿಸಿದೆ. ಸಮಾಗ್ರಿ ಹಾಗೂ ಸೇವೆಗಳ ಪೂರೈಕೆಗಾಗಿ ಸಾರ್ವಜನಿಕ ವಲಯವು ಹೆಚ್ಚಾಗಿ ಖಾಸಗಿ ವಲಯವನ್ನು ಅವಲಂಬಿಸಿದೆ. ಹೀಗಾಗಿ ಅಲ್ಲಿ ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವಿನ ವ್ಯತ್ಯಾಸ ಅಸ್ಪಷ್ಟವಾಗಿದೆ.

### 1.6.2 ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವಿನ ಹೋಲಿಕೆಗಳು

**1) ಕಾನೂನಿನ ಆಧಾರ**

ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು ಕಾನೂನಿನ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತವೆ. ಸಾರ್ವಜನಿಕ ಸಂಸ್ಥೆಗಳು ತಮ್ಮ ಕಾರ್ಯ ಚಟುವಟಿಕೆಗಳ ನಿರ್ವಹಣೆಗೆ ಸಂವಿಧಾನ, ಕಾನೂನು ಅಥವಾ ಮುಖ್ಯ ಕಾರ್ಯನಿರ್ವಾಹಕನ ಆಜ್ಞೆಗಳಿಂದ ಅಧಿಕಾರವನ್ನು ಪಡೆಯುತ್ತವೆ. ಖಾಸಗಿ ಸಂಸ್ಥೆಗಳು ಕೂಡ ಕಾನೂನಿಗೆ ಅನುಸಾರವಾಗಿಯೇ ಕಾರ್ಯ ನಿರ್ವಹಿಸುತ್ತವೆ. ಇವೆರಡೂ ಸಂಸ್ಥೆಗಳ ಕಾರ್ಯ ಚಟುವಟಿಕೆಗಳನ್ನು ಕಾನೂನಿನ ನಿಯಂತ್ರಣದಲ್ಲಿ ನಿರ್ವಹಿಸಲಾಗುತ್ತದೆ.

**2) ಬೇಡಿಕೆಗಳನ್ನು ಪೂರೈಸುವುದು.**

ಆರ್ಥಿಕ ರಂಗದಲ್ಲಿ ಜನತೆಯ ಬೇಡಿಕೆಗಳನ್ನು ಸಾರ್ವಜನಿಕ ಮತ್ತು ಖಾಸಗಿ ಆಡಳಿತಗಳೆರಡೂ ತಮ್ಮದೇ ಆದ ರೀತಿಯಲ್ಲಿ ಪೂರೈಸುತ್ತವೆ. ಇದಕ್ಕಾಗಿ ಜನತೆಗೆ ಉಪಯೋಗಕ್ಕೆ ಅಗತ್ಯವಿರುವ ವಸ್ತುಗಳನ್ನು ಉತ್ಪಾದಿಸುತ್ತವೆ.

**3) ಪ್ರಯೋಗಗಳ ಫಲಿತಾಂಶಗಳ ಪ್ರಯೋಜನ**

ಕೈಗಾರಿಕಾ ಮತ್ತು ಕೃಷಿ ಕ್ಷೇತ್ರಗಳಲ್ಲಿ ನಡೆಸಿದ ಪ್ರಯೋಗಗಳ ಫಲಿತಾಂಶಗಳನ್ನು ಈ ಉಭಯ ಆಡಳಿತ ವ್ಯವಸ್ಥೆಗಳು ಲಾಭದಾಯಕವಾಗಿ ಬಳಸಿಕೊಳ್ಳುತ್ತವೆ. ಇದೂ ಅಲ್ಲದೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಉದ್ದೇಶಿತ ಪ್ರಯೋಗಗಳನ್ನು ನಡೆಸಿ ಅವುಗಳಿಂದ ದೊರೆಯುವ ಫಲಿತಾಂಶಗಳನ್ನು ಪರಸ್ಪರ ಉಪಯೋಗಿಸಿಕೊಂಡು ಲಾಭ ಪಡೆಯುತ್ತವೆ.

**4) ಒಂದೇ ಬಗೆಯ ಕೌಶಲ**

ಒಂದೇ ಬಗೆಯ ಕುಶಲತೆ ಸಾರ್ವಜನಿಕ ಮತ್ತು ಖಾಸಗಿ ಆಡಳಿತಗಳೆರಡರಲ್ಲೂ ಕಂಡು ಬರುತ್ತದೆ. ಉದಾ: ವೈದ್ಯರ ಸೇವೆ, ಉಪಾಧ್ಯಾಯರ ಸೇವೆ ಈ ಉಭಯ ಆಡಳಿತ ವ್ಯವಸ್ಥೆಯಲ್ಲೂ ಪ್ರಯೋಜನಕಾರಿಯಾಗಿದೆ. ಇದೇ ರೀತಿ ಒಂದು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಅಂಕಿಅಂಶಗಳ ತಜ್ಞನ ಸೇವೆಯನ್ನು ಸರ್ಕಾರಿ ಸಂಸ್ಥೆಯೂ ಪಡೆಯ ಬಹುದು. ಹೀಗೆ ಒಂದೇ ಬಗೆಯ ಕೌಶಲಗಳನ್ನು ಹೊಂದಿರುವ ನೌಕರರ ಸೇವೆಯನ್ನು ಎರಡೂ ಕ್ಷೇತ್ರಗಳಲ್ಲಿ ಉಪಯೋಗಿಸಿಕೊಳ್ಳ ಬಹುದು.

**5) ಒಂದೇ ಬಗೆಯ ಸಮಸ್ಯೆಗಳು**

ಈ ಉಭಯ ಆಡಳಿತ ವ್ಯವಸ್ಥೆಯಲ್ಲಿ ಬರುವ ಕೆಲವು ನಿರ್ದಿಷ್ಟ ಸಂಸ್ಥೆಗಳು ಒಂದೇ ಬಗೆಯ ಸಮಸ್ಯೆಗಳನ್ನು ಎದುರಿಸುತ್ತವೆ.

ಆಡಳಿತ ವ್ಯವಸ್ಥೆಯ ಅಧಿಕಾರ ಶ್ರೇಣಿ, ಶಿಸ್ತು, ಅರ್ಹತೆ, ತತ್ವ, ಬಡ್ತಿ, ನೇಮಕ ಇವೇ ಮೊದಲಾದ ವಿಷಯಗಳಲ್ಲಿ ಅವೆರಡೂ ಒಂದೇ ರೀತಿಯ ಸಮಸ್ಯೆಗಳನ್ನು ಎದಿರಿಸುತ್ತವೆ.

**6) ಬಳಕೆದಾರರ ಮೇಲಿನ ಹೊರೆ**

ಈ ಎರಡೂ ಕ್ಷೇತ್ರಗಳಲ್ಲಿ ಬಳಕೆದಾರನೆ ಹೊರೆಯನ್ನು ಹೊರ ಬೇಕಾಗುತ್ತದೆ.

**7) ಲಾಭಗಳಿಕೆಯೇ ಖಾಸಗಿ ಆಡಳಿತದ ಮುಖ್ಯ ಉದ್ದೇಶವಲ್ಲ** ಅದೂ ಸಹ ಒಂದಲ್ಲ ಒಂದು ರೀತಿಯ ಸಾರ್ವಜನಿಕರಿಗೆ ಸೇವೆ ಸಲ್ಲಿಸುತ್ತದೆ. ವ್ಯಾಪಾರಿ ಸಂಸ್ಥೆ ಕಾರ್ಯಚಟುವಟಿಕೆಗಳನ್ನು ಸಮಾಜದ ಹಿತದೃಷ್ಟಿಯಿಂದ ಸರ್ಕಾರವು ನಿಯಂತ್ರಿಸುತ್ತದೆ. ಜನರ ಆರೋಗ್ಯಕ್ಕೆ ಹಾನಿಕಾರಕವಾದ ಚಟುವಟಿಕೆಗಳಿಗೆ ಅವಕಾಶ ಕೊಡುವುದಿಲ್ಲ. ಅಪ್ರಮಾಣಿಕ ವ್ಯವಹಾರ ಮೊದಲಾದವುಗಳನ್ನು ನಿಷೇಧಿಸಲಾಗಿದೆ. ಇಂದು ಆ ವಲಯ ಕೂಡ ರಾಜ್ಯದ ಉದ್ದೇಶಕ ಗುರಿ ಸಾಧನೆಗೆ ಸಹಾಯಕಾರಿ ಯಾಗಿರಬೇಕಾಗಿದೆ.

ಸಾರ್ವಜನಿಕ ಮತ್ತು ಖಾಸಗಿ ಆಡಳಿತದ ನಡುವೆ ವ್ಯತ್ಯಾಸಗಳಿರುವುದು ನಿಜವಾದರೂ ಅವುಗಳು ಸಂಪೂರ್ಣ ಭಿನ್ನವಾದ ಎರಡು ವ್ಯವಸ್ಥೆಗಳು ಎಂದು ಪರಿಗಣಿಸಬಾರದು. ಅವುಗಳನ್ನು ಆಡಳಿತ ಎಂಬ ಒಂದೇ ವೃಕ್ಷದ ಎರಡು ರೆಂಬೆಗಳು ಎಂದು ಹೇಳಬಹುದು.

**ನಿಮ್ಮ ಪ್ರಗತಿ ಪರಿಶೀಲನೆ - 3**

ಸೂಚನೆ : i) ಕೆಳಗಿನ ಸ್ಥಳವನ್ನು ನಿಮ್ಮ ಉತ್ತರಗಳಿಗೆ ಬಳಸಿ

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ

1) ಆಧುನಿಕ ರಾಜ್ಯದಲ್ಲಿ ಸಾರ್ವಜನಿಕ ಆಡಳಿತದ ಪಾತ್ರ ಮತ್ತು ಪ್ರಾಮುಖ್ಯತೆಯನ್ನು ಚರ್ಚಿಸಿರಿ.

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

2) ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವಿನ ವ್ಯತ್ಯಾಸಗಳನ್ನು ತಿಳಿಸಿ.

..........................................................................................................

..........................................................................................................

..........................................................................................................

..........................................................................................................

..........................................................................................................

..........................................................................................................

3) ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವಿನ ಹೋಲಿಕೆಗಳನ್ನು ವಿವರಿಸಿ.

........................................................................................................................

........................................................................................................................

........................................................................................................................

........................................................................................................................

........................................................................................................................

## 1.7 ಸಾರಾಂಶ

ಸಮಕಾಲೀನ ಸಮಾಜಗಳಲ್ಲಿ ಸಾರ್ವಜನಿಕ ಆಡಳಿತದ ಪಾತ್ರ ಮತ್ತು ಪ್ರಾಮುಖ್ಯತೆಯು ಹಿಂದಿನ ಕಾಲಕ್ಕಿಂತಲೂ ಇಂದು ಹೆಚ್ಚುತ್ತಲಿದೆ. ಅದರ ವ್ಯಾಪ್ತಿಯೂ ವಿಸ್ತರಿಸಿದೆ. ಸಾರ್ವಜನಿಕ ಆಡಳಿತವು, ಸಾರ್ವಜನಿಕರ ಒಳಿತಿಗಾಗಿ ಸರ್ಕಾರ ಕೈಗೊಳ್ಳುವ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಒಳಗೊಂಡಿದೆ. ಸರ್ಕಾರದ ಕಾರ್ಯ ಚಟುವಟಿಕೆಗಳು ಹೆಚ್ಚಾದಂತೆಲ್ಲ ಸಾರ್ವಜನಿಕ ಆಡಳಿತದ ಕಾರ್ಯಗಳು ಹೆಚ್ಚಾಗಿವೆ. ಸಾರ್ವಜನಿಕ ಆಡಳಿತ ಮತ್ತು ಖಾಸಗಿ ಆಡಳಿತಗಳ ನಡುವೆ ಅನೇಕ ಹೋಲಿಕೆಗಳಿದ್ದಾಗ್ಯೂ ಅವೆರಡರ ನಡುವೆ ವ್ಯತ್ಯಾಸಗಳೂ ಇವೆ.

ಈ ಘಟಕದಲ್ಲಿ ನಾವು ಸಾರ್ವಜನಿಕ ಆಡಳಿತದ ಅರ್ಥ, ಸ್ವರೂಪ, ವ್ಯಾಪ್ತಿ ಹಾಗೂ ಸಾರ್ವಜನಿಕ ಆಡಳಿತ ಮತ್ತು ಖಾಸಗೀ ಆಡಳಿತದ ನಡುವಿನ ವ್ಯತ್ಯಾಸಗಳನ್ನು ಚರ್ಚಿಸಲಾಗಿದೆ. ಅಲ್ಲದೆ ಸಾರ್ವಜನಿಕ ಆಡಳಿತದ ಮಹತ್ವವನ್ನು ವಿವರವಾಗಿ ಚರ್ಚಿಸಲಾಗಿದೆ.

## 1.8 ಕಠಿಣ ಪದಗಳು

**ಬಂಡವಾಳಶಾಹಿರಾಜ್ಯ** - ಬಂಡವಾಳ ಮತ್ತು ಸಂಪನ್ಮೂಲಗಳ ಒಡೆತನ ಮತ್ತು ನಿಯಂತ್ರಣ ಖಾಸಗಿ ವ್ಯಕ್ತಿಗಳಲ್ಲಿರುವುದು

**ಸಮಾಜವಾದಿರಾಜ್ಯ** - ಉತ್ಪಾದನಾ ಸಾಧನಗಳು, ವಿತರಣೆ ಹಾಗೂ ವಿನಿಯಮ ಇಡೀ ಸಮುದಾಯದ ಒಡೆತನ ಹಾಗೂ ನಿಯಂತ್ರಣದಲ್ಲಿರುವ ವ್ಯವಸ್ಥೆ

**ಕಲ್ಯಾಣ ರಾಜ್ಯ** - ಪ್ರಜಾಕಲ್ಯಾಣ ರಾಜ್ಯ, ಆರೋಗ್ಯ, ಸಮಾಜಕಲ್ಯಾಣ ಮೊದಲಾದ ಸರ್ಕಾರದ ಯೋಜನೆಗಳಿಂದ ಎಲ್ಲಾ ಪ್ರಜೆಗಳ ಹಿತರಕ್ಷಣೆ ಮಾಡಲುದ್ದೇಶಿಸುವ ರಾಜ್ಯ ಅಥವಾ ವ್ಯವಸ್ಥೆ.

**ಲೆಸೇಫೇರ್** - ವ್ಯಕ್ತಿಯ ವ್ಯವಹಾರದಲ್ಲಿ ಸರ್ಕಾರ ಪ್ರವೇಶಿಸದಿರುವುದು.

## 1.9 ಕೆಲವು ಉಪಯುಕ್ತ ಗ್ರಂಥಗಳು


1. ಮೋಹಿತ್ ಭಟ್ಟಾಚಾರ್ಯ-ಪಬ್ಲಿಕ್ ಅಡ್ಮಿನಿಸ್ಟ್ರೇಷನ್
2. ಎಲ್.ಡಿ. ವೈಟ್-ಇಂಟ್ರಡಕ್ಷನ್ ಮದಿ ಸ್ಟಡಿ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್
3. ಪ್ರೊ. ಎನ್. ಹಾಲಪ್ಪ-ಸಾರ್ವಜನಿಕ ಆಡಳಿತ-ಆಡಳಿತಾತ್ಮಕ ಸಿದ್ಧಾಂತ
4. ಪ್ರೊ. ಎನ್. ಹಾಲಪ್ಪ-ಸಾರ್ವಜನಿಕ ಆಡಳಿತ-ನಾಗರಿಕ ಸೇವೆಗಳ ಪೂರ್ವಭಾವಿ ಪರೀಕ್ಷೆಗಾಗಿ
5. ಡಾ. ಟಿ.ಡಿ. ದೇವೇಗೌಡ-ಸಾರ್ವಜನಿಕ ಆಡಳಿತ

6. ಎಂ.ವಿ. ಕೃಷ್ಣರಾವ್-ಸಾರ್ವಜನಿಕ ಆಡಳಿತ

7. ಮಾಲಿಮದ್ದಣ್ಣ-ಸಾರ್ವಜನಿಕ ಆಡಳಿತ

## 1.10 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು ಅಭ್ಯಾಸ

**ನಿಮ್ಮ ಪ್ರಗತಿ ಪರಿಶೀಲನೆ-1**

1) ನೋಡಿ, ವಿಭಾಗ- 41.2

2.ನೋಡಿ, ವಿಭಾಗ-

**ನಿಮ್ಮ ಪ್ರಗತಿ ಪರಿಶೀಲನೆ-2**

1) ನೋಡಿ, ವಿಭಾಗ-1.3, 1.3.1ಮತ್ತು 1.3.2

2) ನೋಡಿ, ವಿಭಾಗ - 1.4.1

3) ನೋಡಿ ವಿಭಾಗ - 1.4

**ನಿಮ್ಮ ಪ್ರಗತಿ ಪರಿಶೀಲನೆ-3**

1) ನೋಡಿ ವಿಭಾಗ- 1.5

2) ನೋಡಿ ವಿಭಾಗ - 1.6.1

3) ನೋಡಿ ವಿಭಾಗ - 1.6.2

ಪ್ರೊ. ಎನ್. ಹಾಲಪ್ಪ

## ಘಟಕ - 2 ಸಾರ್ವಜನಿಕ ಆಡಳಿತದ ವಿಕಾಸ-ಸಾರ್ವಜನಿಕ ಆಡಳಿತದ ಬೆಳವಣಿಗೆಯಲ್ಲಿನ ವಿವಿಧ ಹಂತಗಳು

ರಚನೆ


2.0 ಉದ್ದೇಶಗಳು

2.1 ಪೀಠಿಕೆ

2.2 ಸಾರ್ವಜನಿಕ ಆಡಳಿತದ ಬೆಳವಣಿಗೆಗೆ ಕಾರಣವಾದ ಅಂಶಗಳು

2.3 ಸಾರ್ವಜನಿಕ ಆಡಳಿತದ ಬೆಳವಣಿಗೆಯಲ್ಲಿನ ಹಂತಗಳು

- 2.3.1 ಪ್ರಥಮ ಹಂತ-ರಾಜಕಾರಣ-ಆಡಳಿತದ ದ್ವಿಭಜನೆ (1887-1926)
- 2.3.2 ದ್ವಿತೀಯ ಹಂತ-ಆಡಳಿತ ತತ್ವಗಳ ಕಾಲ (1927-1937)
- 2.3.3 ತೃತೀಯ ಹಂತ-ಆಡಳಿತ ತತ್ವಗಳಿಗೆ ಸವಾಲು (1938-1947
- 2.3.4 ನಾಲ್ಕನೆಯ ಹಂತ- ಬಿಕ್ಕಟ್ಟಿನ ಕಾಲ (1948-1970)
- 2.3.5 ಐದನೇ ಹಂತ-ಸಾರ್ವಜನಿಕ ನೀತಿಯ ದೃಷ್ಟಿಕೋನ (1971 ರ ನಂತರ)

2.4 ಸಾರಾಂಶ

2.5 ಕಠಿಣ ಪದಗಳು

2.6 ಕೆಲವು ಉಪಯುಕ್ತಗಳು

2.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು ಅಭ್ಯಾಸ

## 2.0 ಉದ್ದೇಶಗಳು

ಸಾರ್ವಜನಿಕ ಆಡಳಿತದ ಬೆಳವಣಿಗೆಯನ್ನು ಅಥವಾ ಅದರ ವಿಕಾಸದ ವಿವಿಧ ಹಂತಗಳನ್ನು ವಿವರಿಸುವುದು ಈ ಘಟಕದ ಉದ್ದೇಶವಾಗಿದೆ. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳನ್ನು ಉತ್ತರಿಸಬಹುದು.

ಸಾರ್ವಜನಿಕ ಆಡಳಿತದ ಬೆಳವಣಿಗೆಗೆ ಕಾರಣವಾದ ಅಂಶಗಳು

ಸಾರ್ವಜನಿಕ ಆಡಳಿತದ ವಿಕಾಸದಲ್ಲಿನ ವಿವಿಧ ಹಂತಗಳಾವುವು.

## 2.1 ಪೀಠಿಕೆ

ಸಾರ್ವಜನಿಕ ಆಡಳಿತ ಒಂದು ಅಧ್ಯಯನಶಾಸ್ತ್ರವಾಗಿ ಇತ್ತೀಚಿಗೆ ಬೆಳವಣಿಗೆಯಾದರೂ, ಸಾರ್ವಜನಿಕ ಆಡಳಿತದ ಕಾರ್ಯ ಚಟುವಟಿಕೆಗಳು ಮಾನವ ಸಮಾಜದಷ್ಟೇ ಪುರಾತನವಾದವು. ಕೌಟಿಲ್ಯನ ಅರ್ಥಶಾಸ್ತ್ರ, ಮೆಕೆವೆಲ್ಲಿಯ 'ಪ್ರಿನ್ಸ್' ಗ್ರಂಥಗಳು ಸಾರ್ವಜನಿಕ ಆಡಳಿತದ ಬಗ್ಗೆ ಮಾಹಿತಿ ನೀಡುತ್ತವೆ. ನಮ್ಮ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತ ರಾಜಕೀಯ ವಿಷಯಗಳ ಜೊತೆಗೆ ಆಡಳಿತಕ್ಕೆ ಸಂಬಂಧಿಸಿದ ಅನೇಕ ವಿಷಯಗಳನ್ನು ಒಳಗೊಂಡಿವೆ. ಅಲ್ಲದೆ ಪ್ರಾಚೀನ ಭಾರತದ ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ಗ್ರೀಕ್ ನಗರ ರಾಜ್ಯಗಳ ವ್ಯವಸ್ಥೆ ಮುಂತಾದವುಗಳು ಸಾರ್ವಜನಿಕ ಆಡಳಿತ ಬಹು ಹಿಂದಿನಿಂದಲೂ ಅಸ್ತಿತ್ವದಲ್ಲಿದ್ದಿತ್ತು ಎಂಬುದಕ್ಕೆ ಉದಾಹರಣೆಗಳಾಗಿವೆ. ಆದರೆ ಇದು ಒಂದು ಪ್ರತ್ಯೇಕ ಅಧ್ಯಯನ ಮತ್ತು ಬೋಧನಾ ವಿಷಯ ವಸ್ತುವಾದದ್ದು ಇತ್ತೀಚಿನ ವರ್ಷಗಳಲ್ಲಿ ಅಂದರೆ 19ನೇ ಶತಮಾನದ ಕೊನೆ ಭಾಗದಲ್ಲಿ ಎಂದು ಹೇಳಲಾಗಿದೆ. ಸಾರ್ವಜನಿಕ ಆಡಳಿತದ ಅಧ್ಯಯನದ ಬೆಳವಣಿಗೆ ವಿಶೇಷವಾಗಿ ಅಮೆರಿಕದಲ್ಲಿ ಪ್ರಾರಂಭವಾಯಿತು.

ಸಾರ್ವಜನಿಕ ಆಡಳಿತದ ಬೆಳವಣಿಗೆಯ ಅಥವಾ ವಿಕಾಸದ ವಿವಿಧ ಹಂತಗಳನ್ನು ತಿಳಿಯುವ ಮೊದಲು ಅದರ ಅಧ್ಯಯನದ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ಸಂಕ್ಷಿಪ್ತವಾಗಿ ಪರಿಶೀಲಿಸುವುದು ಅವಶ್ಯಕ.

## 2.2 ಸಾರ್ವಜನಿಕ ಆಡಳಿತದ ಬೆಳವಣಿಗೆಗೆ ಕಾರಣವಾದ ಅಂಶಗಳು

ರುಕ್ಮಿ ಬಸು ಅವರು ಸಾರ್ವಜನಿಕ ಆಡಳಿತದ ಬೆಳವಣಿಗೆಗೆ ಕಾರಣವಾದ ಈ ಕೆಳಗಿನ ಅಂಶಗಳನ್ನು ಗುರುತಿಸಿದ್ದಾರೆ.

**1) ಕಲ್ಯಾಣ ರಾಜ್ಯದ ಉದಯ**

ಹಿಂದಿನ ದಿನಗಳಲ್ಲಿ ರಾಜ್ಯಗಳು ಪೋಲಿಸ್ ರಾಜ್ಯಗಳಾಗಿದ್ದು, ಕಾನೂನು ವ್ಯವಸ್ಥೆ, ಪ್ರಜೆಗಳ ಪ್ರಾಣ, ಆಸ್ತಿ ಪಾಸ್ತಿಗಳ ರಕ್ಷಣೆ ಹಾಗೂ ಬಾಹ್ಯ ಧಾಳಿಯಿಂದ ದೇಶ ರಕ್ಷಣೆ ಇವೇ ಮುಂತಾದ ವಿಷಯಗಳಿಗೆ ಮಾತ್ರ ರಾಜ್ಯದ ಕಾರ್ಯಗಳು ಸೀಮಿತವಾಗಿದ್ದವು. ಇಂದು ಸುಖೀ ರಾಜ್ಯದ ಕಲ್ಪನೆ ರಾಜ್ಯದ ಸ್ವರೂಪವನ್ನೇ ಬದಲಾಯಿಸಿದೆ. ಇಂದು ರಾಜ್ಯವು ವ್ಯಕ್ತಿ ಮತ್ತು ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾದ ಎಲ್ಲ ಸುವ್ಯವಸ್ಥಿತ ಆಡಳಿತ ಯಂತ್ರ ಅತ್ಯಾವಶ್ಯಕವಾಗಿದೆ. ಈ ಕಾರ್ಯಗಳನ್ನು ನಿರ್ವಹಿಸಲು ಇರುವ ಪ್ರಮುಖ ಸಾಧನವೆಂದರೆ ಸಾರ್ವಜನಿಕ ಆಡಳಿತ. ಇದರಿಂದಾಗಿ ಸಾರ್ವಜನಿಕ ಆಡಳಿತ ಬೆಳವಣಿಗೆಯಾಗಿದೆ.

**2) ಔದ್ಯೋಗೀಕರಣ**

19ನೇ ಶತಮಾನದ ಉತ್ತರಾರ್ಧದಲ್ಲಿ ಔದ್ಯೋಗೀಕರಣವು ಬೃಹತ್ ಗಾತ್ರದ ಆಡಳಿತ ವ್ಯವಸ್ಥೆಗಳ ಸ್ಥಾಪನೆಗೆ ಕಾರಣವಾಯಿತು. ಇದು ಸಂಯೋಜನೆ, ಸಹಕಾರ ಮುಂತಾದ ಸಂಘಟನೆಯ ಸಂಕೀರ್ಣ ಹಾಗೂ ಕ್ಲಿಷ್ಟಕರ ಸಮಸ್ಯೆಗಳನ್ನು ಹುಟ್ಟುಹಾಕಿತು. ಆದುದರಿಂದ ವಿದ್ವಾಂಸರು ವ್ಯವಸ್ಥಾಪಕರ ಸಮಸ್ಯೆಗಳನ್ನು ಹುಟ್ಟು ಹಾಕಿತು. ಆದುದರಿಂದ ವಿದ್ವಾಂಸರು ವ್ಯವಸ್ಥಾಪನಾ ಹಾಗೂ ನಿರ್ವಹಣೆ ಯಂತಹ

ಸಮಸ್ಯೆಗಳನ್ನು ಬಗೆಹರಿಸಲು ತಮ್ಮ ಗಮನ ಹರಿಸಬೇಕಾಯಿತು. ಇದು ಸಾರ್ವಜನಿಕ ಆಡಳಿತದ ಬೆಳವಣಿಗೆಗೆ ಕಾರಣವಾಯಿತು.

**3) ವೈಜ್ಞಾನಿಕ ನಿರ್ವಹಣಾ ಚಳುವಳಿ**

19ನೇ ಶತಮಾನದ ಕೊನೆಯ ಭಾಗದಲ್ಲಿ ವೈಜ್ಞಾನಿಕ ಪದ್ಧತಿಯ ಕಾರ್ಯಾಚರಣೆ ಪ್ರಾರಂಭವಾಯಿತು. ಈ ಚಳುವಳಿಯು ಫ್ರೆಡ್ರಿಕ್ ಡಬ್ಲ್ಯೂ. ಟೇಲರ್ ಅವರ ನಾಯಕತ್ವದಲ್ಲಿ ಅಮೆರಿಕದ ಪೆನ್ಸಿಲ್‌ವೇನಿಯಾ ಉಕ್ಕಿನ ಕಾರ್ಖಾನೆಯಲ್ಲಿ ಪ್ರಾರಂಭವಾಯಿತು. ವೈಜ್ಞಾನಿಕ ನಿರ್ವಹಣಾ ಪದ್ಧತಿಯು ಕಾಲಕ್ರಮೇಣ ಎಲ್ಲ ಕಾರ್ಖಾನೆಗಳಿಗೂ ವಿಸ್ತರಿಸಿ ಆಡಳಿತ ರಂಗವನ್ನು ಪ್ರವೇಶಿಸಿತು. ಆಡಳಿತಕ್ಕೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕೆ ವೈಜ್ಞಾನಿಕ ಪದ್ಧತಿ ಹಾಗೂ ತತ್ವಗಳನ್ನು ಬಳಸಿಕೊಳ್ಳಲು ತೊಡಗಿದ ಪರಿಣಾಮವಾಗಿ ಸಾರ್ವಜನಿಕ ಆಡಳಿತ ಅಧ್ಯಯನಕ್ಕೆ ಪ್ರಾಮುಖ್ಯತೆ ಕೊಡುವುದು ಅನಿವಾರ್ಯವಾಯಿತು.

**4) ಪ್ರಜಾಪ್ರಭುತ್ವದ ಬೆಳವಣಿಗೆ**

ಇಂದು ವಿಶ್ವದ ಜನತೆ ಪ್ರಜಾಪ್ರಭುತ್ವದತ್ತ ತಮ್ಮ ಒಲವು ತೋರುತ್ತಿದ್ದಾರೆ. ಪ್ರಜೆಗಳಿಗೆ ಆಡಳಿತ ಜ್ಞಾನ ಅಗತ್ಯ. ಪ್ರಜಾಪ್ರಭುತ್ವ ಆಡಳಿತಕ್ಕೆ ಹೊಸ ಸ್ವರೂಪ ನೀಡುವುದರ ಜೊತೆಯಲ್ಲಿ ಇದರ ಪಾತ್ರವನ್ನು ಬದಲಾಯಿಸಿದೆ. ಆದುದರಿಂದಲೇ ಪ್ರಜೆಗಳು ಸಾರ್ವಜನಿಕ ಆಡಳಿತ ಅಧ್ಯಯನಕ್ಕೆ ಆಸಕ್ತಿ ತೋರುತ್ತಿದ್ದಾರೆ.

**5) ಮಾನವೀಯ ಸಂಬಂಧಕ್ಕೆ ಮಹತ್ವ**

ಇತ್ತೀಚಿನ ದಿನಗಳವರೆಗೂ ರಾಜ್ಯದ ಗುರಿಸಾಧನೆಯಲ್ಲಿ ವ್ಯಕ್ತಿಯನ್ನು ಒಂದು ಸಾಧನವೆಂದು ಪರಿಗಣಿಸಲಾಗಿತ್ತು. ಈಗ ರಾಜ್ಯದ ವಿಕಾಸದಲ್ಲಿ ವ್ಯಕ್ತಿಯ ಪಾತ್ರವನ್ನು ಗುರುತಿಸಲಾಗಿದ್ದು, ರಾಜ್ಯದ ವಿಕಾಸಕ್ಕೆ ವ್ಯಕ್ತಿಯ ವಿಕಾಸವೂ ಅವಶ್ಯವೆಂದು ಹೇಳಲಾಗಿದೆ. ವ್ಯಕ್ತಿಯ ವಿಕಾಸದ ಹೊಣೆ ಆಡಳಿತದ ಗುರುತರ ಜವಾಬ್ದಾರಿಯಾಗಿದೆ.

**6) ಬದಲಾಗುತ್ತಿರುವ ಮೌಲ್ಯಗಳು**

ಜಾಗತಿಕ ಯುದ್ಧಾ ನಂತರ ಸಾಮಾಜಿಕ ಹಾಗೂ ಆರ್ಥಿಕ ಮೌಲ್ಯಗಳು ಬದಲಾಗಿದ್ದು ರಾಜಕೀಯ ಹಾಗೂ ಆರ್ಥಿಕ ಸ್ಥಿರತೆಗೆ ಪ್ರಾಮುಖ್ಯತೆ ನೀಡಲಾಗುತ್ತಿದೆ. ಇವಕ್ಕಾಗಿ ಆಡಳಿತ ವರ್ಗಕ್ಕೆ ಹೆಚ್ಚಿನ ಅಧಿಕಾರ ಅಗತ್ಯವೆನ್ನುವುದನ್ನು ಮನಗಾಣಲಾಗಿದ್ದು, ಇಂತಹ ಅಧಿಕಾರ ಪಡೆದ ಸಾರ್ವಜನಿಕ ಆಡಳಿತ ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಂಡಿದೆ.

**ನಿಮ್ಮ ಪ್ರಗತಿ ಪರಿಶೀಲನೆ-1**

ಸೂಚನೆ: i) ಕೆಳಗೆ ನೀಡಿರುವ ಸ್ಥಳವನ್ನು ನಿಮ್ಮ ಉತ್ತರಗಳಿಗೆ ಉಪಯೋಗಿಸಿರಿ

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ

1) ಸಾರ್ವಜನಿಕ ಆಡಳಿತದ ಬೆಳವಣಿಗೆಗೆ ಕಾರಣವಾದ ಅಂಶಗಳನ್ನು ವಿವರಿಸಿ

...........................................................................................................

...........................................................................................................

...........................................................................................................

...........................................................................................................

...........................................................................................................

## 2.3 ಸಾರ್ವಜನಿಕ ಆಡಳಿತದ ಬೆಳವಣಿಗೆಯಲ್ಲಿನ ಹಂತಗಳು

ಶೈಕ್ಷಣಿಕ ವಿಷಯವಾಗಿ ಸಾರ್ವಜನಿಕ ಆಡಳಿತದ ಬೆಳವಣಿಗೆಯನ್ನು ಈ ಕೆಳಗಿನ ವಿವಿಧ ಹಂತಗಳಲ್ಲಿ ಕಾಣಬಹುದು.

### 2.3.1 ಪ್ರಥಮ ಹಂತ-ರಾಜಕಾರಣ-ಆಡಳಿತದ ದ್ವಿಭಜನೆ (1887-1926)

ಸಾರ್ವಜನಿಕ ಆಡಳಿತದ ಅಧ್ಯಯನದ ಬೆಳವಣಿಗೆ ವಿಶೇಷವಾಗಿ ಅಮೆರಿಕಾದಲ್ಲಿ ಪ್ರಾರಂಭವಾಯಿತು. ರಾಜಕೀಯ ಸುಧಾರಕರು, ಮುತ್ಸದ್ದಿಯೂ, ವಿದ್ವಾಂಸರೂ ಹಾಗೂ ಆಡಳಿತಗಾರರೂ ಆದ ಅಮೆರಿಕಾದ ಅಧ್ಯಕ್ಷರಾಗಿದ್ದ ವುಡ್ರೊ ವಿಲ್ಸನ್‌ರು 1887ರಲ್ಲಿ ಪ್ರಕಟವಾದ 'ಆಡಳಿತ ಅಧ್ಯಯನ (The study of Administration) ಎಂಬ ತಮ್ಮ ಪ್ರಬಂಧದಲ್ಲಿ ಸಾರ್ವಜನಿಕ ಆಡಳಿತದ ಕ್ರಮಬದ್ಧ ಅಧ್ಯಯನಕ್ಕೆ ತಳಹದಿ ಹಾಕಿದರು. ಆದುದರಿಂದಲೇ ವುಡ್ರೊ ವಿಲ್ಸನ್‌ರನ್ನು ಸಾರ್ವಜನಿಕ ಆಡಳಿತದ ಪಿತಾಮಹರೆಂದು ಪರಿಗಣಿಸಲಾಗಿದೆ. ಹೀಗೆ ಸಾರ್ವಜನಿಕ ಆಡಳಿತದ ಬೆಳವಣಿಗೆಯ ಪ್ರಥಮ ಹಂತವು, 1887ರಲ್ಲಿ ವಿಲ್ಸನ್‌ರ ಪ್ರಬಂಧದ ಪ್ರಕಟಣೆಯೊಂದಿಗೆ ಪ್ರಾರಂಭವಾಯಿತೆಂದು ಹೇಳಬಹುದು.

'ರಾಜಕಾರಣ-ಆಡಳಿತ ದ್ವಿಭಜನೆ'ಯು ಸಾರ್ವಜನಿಕ ಆಡಳಿತದ ಬೆಳವಣಿಗೆಯ ಪ್ರಥಮ ಹಂತದ ಪ್ರಧಾನ ಲಕ್ಷಣವಾಗಿದೆ. ವುಡ್ರೊ ವಿಲ್ಸನ್‌ರು ಸಾರ್ವಜನಿಕ ಆಡಳಿತದ ಪ್ರತ್ಯೇಕ ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ವುಡ್ರೊ ವಿಲ್ಸನ್‌ರನ್ನು ಸಾರ್ವಜನಿಕ ಆಡಳಿತದ ಸಂಸ್ಥಾಪಕರೆಂದೂ ಹಾಗೂ ರಾಜಕಾರಣ-ಆಡಳಿತದ ದ್ವಿಭಜನೆಯ ಮೂಲ ಪ್ರವರ್ತಕರೆಂದೂ ಪರಿಗಣಿಸಲಾಗಿದೆ. 1880 ರ ದಶಕದಲ್ಲಿ ಪ್ರಥಮ ಬಾರಿಗೆ ರಾಜಕೀಯ ಮತ್ತು ಆಡಳಿತ ನಡುವಿನ ತಾತ್ವಿಕ ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸಿದವರೇ ವುಡ್ರೊ ವಿಲ್ಸನ್ ಅವರು. ವುಡ್ರೋ ವಿಲ್ಸನ್ಸ್‌ರು ಸಾರ್ವಜನಿಕ ಆಡಳಿತವನ್ನು "ಸಾರ್ವಜನಿಕ ಕಾನೂನಿನ ವಿವರವಾದ ಹಾಗೂ ಕ್ರಮಬದ್ಧವಾದ ಅನುಷ್ಠಾನ, ಪ್ರತಿಯೊಂದು ನಿರ್ದಿಷ್ಟ ಕಾನೂನಿನ ಅನ್ವಯವು ಆಡಳಿತದ ಕ್ರಿಯೆಯಾಗಿದೆ" ಎಂದು ಅರ್ಥೈಸಿದ್ದಾರೆ. ಅವರೇ ಹೇಳಿರುವಂತೆ "ಆಡಳಿತವು ರಾಜಕಾರಣದಿಂದ ಹೊರಗುಳಿಯುತ್ತದೆ. ಆಡಳಿತಾತ್ಮಕ ಪ್ರಶ್ನೆಗಳು ರಾಜಕೀಯ ಪ್ರಶ್ನೆಗಳಾಗಿರುವುದಿಲ್ಲ. ಆಡಳಿತದ ಧ್ಯೇಯಗಳನ್ನು ರಾಜಕಾರಣವೇ ರೂಪಿಸಿದರೂ, ಆಡಳಿತದ ಕಾರ್ಯಾಚರಣೆಯನ್ನು ತನ್ನ ಅಧೀನಪಡಿಸಿಕೊಳ್ಳಬಾರದು, ರಾಜಕಾರಣವು ರಾಜಕಾರಿಣಿಯ ಕ್ಷೇತ್ರವಾದರೆ, ಆಡಳಿತವು ತಾಂತ್ರಿಕ ಕೌಶಲ ಹೊಂದಿರುವ ಅಧಿಕಾರಿಗಳ ಕಾರ್ಯಕ್ಷೇತ್ರವಾಗಿದೆ." ಎಂದು ಹೇಳಿ ರಾಜಕಾರಣ ಮತ್ತು ಆಡಳಿತದ ಪ್ರತ್ಯೇಕತೆಗೆ ಒತ್ತು ನೀಡಿದ್ದಾರೆ.

ಈ ಅವಧಿಯಲ್ಲಿ (1887-1926) ಸಂಭವಿಸಿದ ಮತ್ತೊಂದು ಬೆಳವಣಿಗೆ ಎಂದರೆ 1900ರಲ್ಲಿ ಜೆ. ಗೂಡ್ನೊ ಅವರು ಬರೆದ "ರಾಜಕಾರಣ ಮತ್ತು ಆಡಳಿತ" (Politics and Administration) ಎಂಬ ಗ್ರಂಥದ ಪ್ರಕಟಣೆ. ವುಡ್ರೊ ವಿಲ್ಸನ್‌ರ ಸಮಕಾಲೀನರಾದ ಪ್ರೊ. ಜೆ. ಗುಡ್ನೊರವರು ತಮ್ಮ ಗ್ರಂಥದಲ್ಲಿ "ರಾಜ್ಯದ ಇಚ್ಛೆಯನ್ನು ಕಾರ್ಯಗತಗೊಳಿಸುವಿಕೆಯೇ ಆಡಳಿತ" ಎಂದು ಅರ್ಥೈಸಿ ಶಾಸ್ತ್ರ ಬದ್ಧವಾಗಿ ರಾಜಕಾರಣ ಮತ್ತು ಆಡಳಿತಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿದ್ದಾರೆ. ವಿಲ್ಸನ್ ರಿಂದ ಶಾಸ್ತ್ರೀಯವಾಗಿ ನಿರೂಪಿತವಾದ ಆಡಳಿತ-ರಾಜಕಾರಣ ದ್ವಿಭಜನೆಯು ವಿಲ್ಲೊಬಿ, ಫಿಫ್ನರ್ ಮುಂತಾದ ತಜ್ಞರಿಂದ ಬೆಂಬಲ ಪಡೆಯಿತು. ವಿಲ್ಲೊಬಿಯವರು ಆಡಳಿತವನ್ನು ರಾಜಕಾರಣದಿಂದ ಪ್ರತ್ಯೇಕಿಸಿದ್ದು ಅಲ್ಲದೆ ಅದನ್ನು ಸರ್ಕಾರದ ನಾಲ್ಕನೆಯ ಅಂಗವೆಂದು ಪರಿಗಣಿಸಿ ಅದಕ್ಕೆ ಪ್ರತ್ಯೇಕ ಸ್ಥಾನವನ್ನು ಕಲ್ಪಿಸಿ ಕೊಟ್ಟಿದ್ದಾರೆ. ಸಾರ್ವಜನಿಕ ನೀತಿಯನ್ನು ರೂಪಿಸುವುದು ರಾಜಕೀಯ ಕಾರ್ಯವಾಗಿದೆ. ಅದನ್ನು ಕಾರ್ಯರೂಪಕ್ಕೆ ತರುವುದು ಆಡಳಿತದ ಕಾರ್ಯವಾಗಿದೆ. ಅವೆರಡರ ಸಾಂಸ್ಥಿಕ ನೆಲೆಯೂ ಭಿನ್ನವಾಗಿದೆ. ರಾಜಕೀಯವನ್ನು ಶಾಸಕಾಂಗದಲ್ಲಿ ಕಾಣಬಹುದಾದರೆ, ಆಡಳಿತದ ನೆಲೆಯನ್ನು ಆಡಳಿತಾಂಗದಲ್ಲಿ ಕಾಣಬಹುದು.

ಸಾರ್ವಜನಿಕ ಆಡಳಿತದ ವಿಕಾಸಕ್ಕೆ ಇನ್ನೊಂದು ಪೂರಕ ಗ್ರಂಥ ಎಂದರೆ 1926ರಲ್ಲಿ ಎಲ್. ಡಿ. ವೈಟ್‌ರಿಂದ ರಚಿತಗೊಂಡ "ಸಾರ್ವಜನಿಕ ಆಡಳಿತ ಅಧ್ಯಯನದ ಪ್ರಸ್ತಾವನೆ" (An Introduction to the Study of Public Administration) ಈ

ಗ್ರಂಥವು ಸಮಕಾಲೀನ ವರ್ಷದ ಅತ್ಯಂತ ಪ್ರಮುಖ ರಚನೆ ಎಂದು ಪರಿಗಣಿಸಲ್ಪಟ್ಟಿದೆ. ಈ ಗ್ರಂಥವು ಆ ಕಾಲದ ಪ್ರಧಾನ ವಸ್ತು ವಿಷಯಗಳಾದ

1) ರಾಜಕಾರಣ-ಆಡಳಿತದ ಪ್ರತ್ಯೇಕತೆ, 2) ಸಾರ್ವಜನಿಕ ಆಡಳಿತವು ಮೌಲ್ಯಯುಕ್ತ ವಿಜ್ಞಾನವಾಗಬಹುದಾದ ಸಾಮರ್ಥ್ಯ ಮತ್ತು 3) ಸಾರ್ವಜನಿಕ ಆಡಳಿತದ ಅಡಕ ಪದಗಳಾದ 'ದಕ್ಷತೆ' ಮತ್ತು 'ಮಿತವ್ಯಯ' ಇವುಗಳನ್ನು ಪ್ರತಿ ಬಿಂಬಿಸುತ್ತದೆ.

### 2.3.2 ದ್ವಿತೀಯ ಹಂತ-ಆಡಳಿತ ತತ್ವಗಳ ಕಾಲ (1927-1937)

ಸಾರ್ವಜನಿಕ ಆಡಳಿತದ ಬೆಳವಣಿಗೆಯ ದ್ವಿತೀಯ ಹಂತವು 1927ರಲ್ಲಿ ವಿಲ್ಲೋಬಿಯವರ "ಸಾರ್ವಜನಿಕ ಆಡಳಿತದ ತತ್ವಗಳು" (Principles of Public Administration) ಎಂಬ ಗ್ರಂಥದ ಪ್ರಕಟಣೆಯೊಂದಿಗೆ ಪ್ರಾರಂಭವಾಯಿತೆಂದು ಹೇಳಬಹುದು. ವಿಲ್ಲೋಬಿಯವರು ತಮ್ಮ ಈ ಗ್ರಂಥದಲ್ಲಿ 'ಆಡಳಿತ ತತ್ವಗಳಿಗೆ' ಹೆಚ್ಚು ಒತ್ತು ನೀಡಿದ್ದಾರೆ. ಸಾರ್ವಜನಿಕ ಆಡಳಿತದ ದ್ವಿತೀಯ ಹಂತದ ವಿಕಾಸದಲ್ಲಿ ರಾಜಕಾರಣ-ಆಡಳಿತ ದ್ವಿಭಜನೆಯ ಸಮರ್ಥನೆ ಮತ್ತು ಮೌಲ್ಯಯುಕ್ತ ವಿಜ್ಞಾನವನ್ನು ಬೆಳೆಸುವ ಪ್ರಯತ್ನ ನಡೆಯಿತು. ಸರ್ವಕಾಲಕ್ಕೂ ಅನ್ವಯವಾಗುವಂತಹ ಕೆಲವು ತತ್ವಗಳ ಆಧಾರದ ಮೇಲೆಯೇ ಸಾರ್ವಜನಿಕ ಆಡಳಿತದ ಅಧ್ಯಯನ ನಡೆಯಬೇಕೆಂದು ಈ ಹಂತದ ಪ್ರಧಾನ ವಿಷಯವಾಗಿದ್ದಿತು. ಅಂದರೆ ಆಡಳಿತಕ್ಕೆ ಕೆಲವೊಂದು ತತ್ವಗಳಿದ್ದು ಅವುಗಳನ್ನು ಕಂಡು ಹಿಡಿದು ಅನ್ವಯಿಸುವ ಕೆಲಸ ವಿದ್ವಾಂಸರದಾಗಿದ್ದಿತು. ಆಡಳಿತ ತತ್ವಗಳನ್ನು ಪ್ರತಿಪಾದಿಸುವ ಅನೇಕ ಗ್ರಂಥಗಳು ಈ ಅವಧಿಯಲ್ಲಿಯೇ ಪ್ರಕಟವಾದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ-

1) **ಹೆನ್ರಿಫಾಯಲ್‌ರ** -"ಕೈಗಾರಿಕೆ ಮತ್ತು ಸಾಮಾನ್ಯ ನಿರ್ವಹಣೆ "(Industrial and General Management (1916)
2) **ಮೇರಿ ಪಾರ್ಕರ್ ಫಾಲೆಟ್‌ರ** - "ರಚನಾತ್ಮಕ ಅನುಭವ "(Creative Experience-1924)
3) **ಗಲ್ಲಿಕ್ ಮತ್ತು ಉರ್‍ವಿಕ್‌ರ** - ಆಡಳಿತದ ವಿಜ್ಞಾನ ಪತ್ರಿಕೆಗಳು (Papers on the Science of Administration-1937)
4) **ಮೂನೆ ಮತ್ತು ರೀಲಿಯರವರ** - "ಸಂಘಟನೆಯ ತತ್ವಗಳು "(Priniciples of Organisation- 1939) ಮತ್ತು ಆನ್‌ವಾರ್ಡ್ ಇಂಡಸ್ಟ್ರಿ - 1931.

ಲೂಥರ್ ಗಲ್ಲಿಕ್ ಮತ್ತು ಉರ್‍ವಿಕ್ ರವರ "ಆಡಳಿತದ ವಿಜ್ಞಾನ ಪತ್ರಿಕೆಗಳು" (Papers on the Science of Administration) 1937ರಲ್ಲಿ ಪ್ರಕಟಗೊಂಡಾಗ ಸಾರ್ವಜನಿಕ ಆಡಳಿತದ ಬೆಳವಣಿಗೆಯ ಹಂತ ಪರಾಕಾಷ್ಠೆಗೆ ತಲುಪಿತು. 'ವಿಜ್ಞಾನ' ಎಂಬ ಪದ ಪ್ರಯೋಗ ಬಹಳ ಮಹತ್ವ ಪಡೆಯಿತು. ಏಕೆಂದರೆ ಆಡಳಿತವು ಒಂದು ವಿಜ್ಞಾನವೆಂದು ಪರಿಗಣಿಸಲ್ಪಟ್ಟಿತು. ಲೂಥರ್ ಗಲ್ಲಿಕ್ ಮತ್ತು ಉರ್‍ವಿಕ್‌ರವರು 'ಪೋಸ್ಡ್ ಕಾರ್ಬ್' (POSDCORB) ಎಂಬ ಪದವನ್ನು ಆಡಳಿತದ ಏಳು ತತ್ವಗಳನ್ನು ಸೂಚಿಸಲು ರೂಪಿಸಿದ್ದಾರೆ. ಈ ಏಳು ತತ್ವಗಳು ಸಾರ್ವತ್ರಿಕವಾಗಿ ಸಂಘಟನೆಗೆ /ವ್ಯವಸ್ಥೆಗೆ ಅನ್ವಯಿಸಬಹುದಾದ ತತ್ವಗಳಾದವು.

ಆಡಳಿತ ಬೆಳವಣಿಗೆಯ ದ್ವಿತೀಯ ಹಂತವನ್ನು (1927-1937) ಸಾರ್ವಜನಿಕ ಆಡಳಿತದ ಇತಿಹಾಸದಲ್ಲಿ 'ಆಡಳಿತ ತತ್ವಗಳ ಸುವರ್ಣಕಾಲ' (Golden Years of Principles of Administration) ಎಂದು ಪರಿಗಣಿಸಲಾಯಿತು. ಈ ಅವಧಿಯಲ್ಲಿ ಸಾರ್ವಜನಿಕ ಆಡಳಿತವು ಹೆಚ್ಚಿನ ಗೌರವಯುತ ಸ್ಥಾನ ಪಡೆಯಿತು ಮತ್ತು ಸರ್ಕಾರ ಹಾಗೂ ಖಾಸಗಿ ಕ್ಷೇತ್ರದ ನಿರ್ವಹಣೆಯಲ್ಲಿ ಇದರ ಬೇಡಿಕೆ ಹೆಚ್ಚಾಯಿತು.

### 2.3.3 ತೃತೀಯ ಹಂತ- ಆಡಳಿತ ತತ್ವಗಳಿಗೆ ಸವಾಲಿನ ಕಾಲ (1938-1947)

ಸಾರ್ವಜನಿಕ ಆಡಳಿತದ ಬೆಳವಣಿಗೆಯ ತೃತೀಯ ಹಂತದಲ್ಲಿ ರಾಜಕಾರಣ-ಆಡಳಿತದ ಪ್ರತ್ಯೇಕತೆ ಮತ್ತು ಆಡಳಿತ ತತ್ವಗಳಿಗೆ ಪ್ರತಿಭಟನೆ ಹಾಗೂ ವಿರೋಧ ವ್ಯಕ್ತವಾಯಿತು. ಆಡಳಿತ ತತ್ವಗಳ ಯುಕ್ತಾಯುಕ್ತತೆಯನ್ನು ಪ್ರಶ್ನಿಸಲಾಯಿತು. ಆದುದರಿಂದಲೇ ಈ

ಅವಧಿಯನ್ನು (1938-1947) ಆಡಳಿತ ತತ್ವಗಳಿಗೆ ಸವಾಲೊಡ್ಡಿದ ಕಾಲ ಅಥವಾ ಅವುಗಳನ್ನು ಪ್ರಶ್ನಿಸುವ ಕಾಲ ಎಂದು ಕರೆಯಲಾಗಿದೆ. 1938 ರಲ್ಲಿ ಚೆಸ್ಟರ್ ಬರ್ನಾರ್ಡ್ ಅವರು ಬರೆದ "ಕಾರ್ಯಾಂಗದ ಕಾರ್ಯಗಳು" (The Functions of the Exemtive) ಎಂಬ ಗ್ರಂಥದಲ್ಲಿ ವಿಲ್ಲೊಬಿ, ಗಲ್ಲಿಕ್, ಉರ್‍ವಿಕ್ ಮುಂತಾದವರ ಅಭಿಪ್ರಾಯಗಳಿಗೆ ಬೆಂಬಲ ವ್ಯಕ್ತಪಡಿಸಲಿಲ್ಲ. ಸಂಘಟನೆಯ ವಿಶ್ಲೇಷಣೆಯಲ್ಲಿ ಬರ್ನಾರ್ಡ್‌ರವರು ಮಾನಸಿಕ ಹಾಗೂ ವರ್ತನೆಯ ಅಂಶಗಳಿಗೆ ಹೆಚ್ಚು ಒತ್ತು ನೀಡಿದ್ದಾರೆ. 1946ರಲ್ಲಿ ಹರ್ಬರ್ಟ್ ಸೈಮನ್‌ರ ಬರೆದ "ದಿ ಪ್ರಾವರ್ಬ್ಸ್ ಆಫ್ ಅಡ್ಮಿನಿಸ್ಟ್ರೇಷನ್" ಎಂಬ ಲೇಖನದಲ್ಲಿ ಆಡಳಿತ ತತ್ವಗಳ ಅಂಗೀಕಾರಾರ್ಹತೆ ಹಾಗೂ ಪ್ರಯೋಜಕತೆಯನ್ನು ಪ್ರಶ್ನಿಸಿದ್ದಾರೆ. ಆಡಳಿತ ತತ್ವಗಳು ಎಂಬವು ಯಾವೂ ಇಲ್ಲ, ಅವುಗಳು ಕೇವಲ 'ಗಾದೆಗಳೇ' ವಿನಃ ಮತ್ತೇನೂ ಅಲ್ಲ ಎಂದು ಸೈಮನ್ ಟೀಕಿಸಿದ್ದಾರೆ - 1947ರಲ್ಲಿ ಸೈಮನ್‌ರು ಬರೆದ "ಆಡಳಿತಾತ್ಮಕ ವರ್ತನೆ" ಎಂಬ ಗ್ರಂಥದಲ್ಲಿ ಆಡಳಿತ ತತ್ವಗಳನ್ನು ಮತ್ತು ರಾಜಕೀಯ-ಆಡಳಿತ ದ್ವಿಭಜನೆಯನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಾರೆ. ಅವರು ಸಂಘಟನೆಯ ತತ್ವಗಳಿಗೆ ಮಾತ್ರ ಪ್ರಾಶಸ್ತ್ಯ ನೀಡದೆ ವ್ಯಕ್ತಿಗಳ ವರ್ತನೆಯ ಬಗೆಗೆ ಚಿಂತನೆ ಪ್ರಧಾನವಾಗಿರಬೇಕೆಂದು ಹೇಳಿದ್ದಾರೆ. ಒಂದು ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವರ್ತನೆಗೆ ಕಾರಣವಾಗುವ ಹಾಗೂ ಪ್ರಭಾವ ಬೀರುವ ಅಂಶಗಳು, ಅವರ ಭಾವನೆ, ವಿಚಾರಗಳು, ಅವರು ಪ್ರತಿಕ್ರಿಯಿಸುವ ವಿಧಾನ ಅವರು ಕೆಲಸ ಮಾಡುವ ವಾತಾವರಣ ಇವೇ ಮುಂತಾದವುಗಳನ್ನು ಗಮನಿಸಬೇಕೆ ಹೊರತು ಕೇವಲ ವ್ಯವಸ್ಥೆಯ ತತ್ವಗಳಲ್ಲವೆಂದು ಸೈಮನ್ ಅಭಿಪ್ರಾಯಪಟ್ಟಿದ್ದಾರೆ. ಇದಲ್ಲದೆ, ಸಾರ್ವಜನಿಕ ಆಡಳಿತದ ಮೇಲೆ ಇತರ ಸಾಮಾಜಿಕ ಶಾಸ್ತ್ರಗಳ (ಮನಃಶಾಸ್ತ್ರ, ಸಮಾಜಶಾಸ್ತ್ರ, ಅರ್ಥಶಾಸ್ತ್ರ ಮುಂತಾದವು) ಪ್ರಭಾವವನ್ನು ಅವರು ಗುರುತಿಸಿದ್ದಾರೆ.

1924-1932ರಲ್ಲಿ ಎಲ್ಟನ್ ಮೆಯೊ ಮತ್ತು ಆತನ ಸಹೋದ್ಯೋಗಿಗಳು ನಡೆಸಿದ ಹಾಥೋರ್ನ್ ಅಧ್ಯಯನಗಳು ಆಡಳಿತ ತತ್ವಗಳಿಗೆ ಪ್ರತಿಕ್ರಿಯೆಯಾಗಿ ಮಾನವನ ಸಾಮಾಜಿಕ-ಮಾನಸಿಕ ಅಂಶಗಳಿಗೆ ಒತ್ತು ನೀಡುವ ಮಾನವ ಸಂಬಂಧಗಳ ಸಿದ್ಧಾಂತದ ಬೆಳವಣಿಗೆಗೆ ಕಾರಣವಾದವು. 1947ರಲ್ಲಿ ರಾಬರ್ಟ್ ಡ್ಹಾಲ್ ಅವರು "ಸಾರ್ವಜನಿಕ ಆಡಳಿತದ ವಿಜ್ಞಾನ" (The Science of public Administration) ಎಂಬ ತಮ್ಮ ಕೃತಿಯಲ್ಲಿ ಸಾರ್ವಜನಿಕ ಆಡಳಿತವು ಒಂದು ವಿಜ್ಞಾನ ಎಂಬುದನ್ನು ಅಲ್ಲಗಳೆದಿದ್ದಾರೆ. ಒಟ್ಟಾರೆ ಈ ಅವಧಿಯಲ್ಲಿ ಸಾರ್ವಜನಿಕ ಆಡಳಿತ ಅಂತರಶಾಸ್ತ್ರೀಯ ಮಾರ್ಗದ (Inter discriplinary Approach) ಮೂಲಕ ಮಾನವ ನಡತೆಯ ಅಧ್ಯಯನವಾಗಿದ್ದು, ಒಂದು ಪ್ರಮುಖ ಬೆಳವಣಿಗೆಯಾಗಿದೆ. ಅದು ವರ್ತನಾ ವಿಜ್ಞಾನ ಎಂದು ಸಾಮಾನ್ಯವಾಗಿ ಕಂಡು ಬರುತ್ತದೆಂದು ಹೇಳಿದರೆ ತಪ್ಪಾಗಲಾರದು.

### 2.3.4 ನಾಲ್ಕನೆಯ ಹಂತ-ಬಿಕ್ಕಟ್ಟಿನ ಕಾಲ (1948-1970)

ಸಾರ್ವಜನಿಕ ಆಡಳಿತದ ಬೆಳವಣಿಗೆಯ ನಾಲ್ಕನೆಯ ಹಂತವು ಬಿಕ್ಕಟ್ಟಿನ ಕಾಲವಾಗಿದ್ದಿತು. ಪ್ರಾರಂಭಿಕ ಹಂತದ ಸಾರ್ವಜನಿಕ ಆಡಳಿತದ ಎರಡು ಆಧಾರ ಸ್ತಂಭಗಳಂತಿದ್ದ 'ರಾಜಕಾರಣ-ಆಡಳಿತ ದ್ವಿಭಜನೆ' ಮತ್ತು 'ಆಡಳಿತ ತತ್ವಗಳು' ಇವುಗಳನ್ನು ತಿರಸ್ಕರಿಸಲ್ಪಟ್ಟ ಕಾರಣದಿಂದಾಗಿ ಸಾರ್ವಜನಿಕ ಆಡಳಿತವು ಬಿಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಸಾರ್ವಜನಿಕ ಆಡಳಿತದ ಭವಿಷ್ಯ ಅನಿಶ್ಚಿತವಾಯಿತು. ಸಾರ್ವಜನಿಕ ಆಡಳಿತದ ಅಸ್ತಿತ್ವಕ್ಕೆ ಧಕ್ಕೆವುಂಟಾಗಿ ಅದನ್ನು ಅಲುಗಾಡಿಸುವ ಮಟ್ಟಕ್ಕೆ ಹೋಯಿತು.

ಇಂತಹ ಪರಿಸ್ಥಿತಿಯಲ್ಲಿ ಸಾರ್ವಜನಿಕ ಆಡಳಿತವನ್ನು ಪುನಶ್ಚೇತನಗೊಳಿಸಿ ಅದಕ್ಕೆ ಮೊದಲಿನ ಸ್ಥಾನಮಾನವನ್ನು ದೊರಕಿಸಿ ಕೊಡಲು ಅನೇಕ ಪ್ರಯತ್ನಗಳು ಮುಂದುವರಿದವು. 1956ರಲ್ಲಿ "ಆಡಳಿತಾತ್ಮಕ ವಿಜ್ಞಾನ ತ್ರೈಮಾಸಿಕ " (Administrative Science Quantety) ಎಂಬ ನಿಯತ ಕಾಲಿಕ ಪತ್ರಿಕೆ ಹೊರ ಬಂದಿತು. ಸಾರ್ವಜನಿಕ ಆಡಳಿತದ ತುಲನಾತ್ಮಕ ಅಧ್ಯಯನವನ್ನು ಕೈಗೊಳ್ಳಲಾಯಿತು. 1960ರಲ್ಲಿ 'ತೌಲನಿಕ ಆಡಳಿತ ಸಮೂಹ' (Comparative Administrative Group) ಸ್ಥಾಪನೆಯೊಂದಿಗೆ ಸಾರ್ವಜನಿಕ ಆಡಳಿತದ ತುಲನಾತ್ಮಕ ಅಧ್ಯಯನಕ್ಕೆ ಮತ್ತಷ್ಟು ಉತ್ತೇಜನ ದೊರಕಿತು. ಈ ಸಮೂಹವು (CAG) ವಿವಿಧ ದೇಶಗಳ ಆಡಳಿತಾತ್ಮಕ ಪದ್ಧತಿಗಳ ಹಾಗೂ ಸಾರ್ವಜನಿಕ ಆಡಳಿತದ ವ್ಯವಹಾರಿಕ ಸಮಸ್ಯೆಗಳ ಬೌದ್ಧಿಕ ಅಧ್ಯಯಕ್ಕೆ ತನ್ನ ಗಮನವನ್ನು ಕೇಂದ್ರೀಕರಿಸಿತು. ಒಟ್ಟಾರೆ

ಅಂತರ ಶಾಸ್ತ್ರೀಯ (interdiscrplinary) ಮತ್ತು ಅನ್ವಯಿಕ ಶಾಸ್ತ್ರೀಯ (applied discipline) ವಿಧಾನದ ಮೂಲಕ ಸಾರ್ವಜನಿಕ ಆಡಳಿತದ ಬಿಕ್ಕಟ್ಟನ್ನು ನಿವಾರಿಸಲು ಪ್ರಯತ್ನಿಸಲಾಯಿತು.

1950ರ ದಶಕದಲ್ಲಿ ಸಾರ್ವಜನಿಕ ಆಡಳಿತದ ಗ್ರಂಥಗಳು 'ಆಡಳಿತಾತ್ಮಕ ವರ್ತನೆ' 'ಪರಿಸರ' 'ತುಲನಾತ್ಮಕ ಆಡಳಿತ' ಮುಂತಾದ ಪರಿಭಾವನೆಗಳಿಗೆ ಹೆಚ್ಚು ಒತ್ತು ನೀಡಿವೆ. ಕ್ರಿಸ್ ಅರ್ಗ್ರಿಸ್, ರೆನಿಸ್ ಲಿಕರ್ಟ್, ಮೆಕಾಗ್ರೆಗಾರ್ ಮುಂತಾದ ವಿದ್ವಾಂಸರು ನೂತನ ಮಾನವೀಯ ದೃಷ್ಟಿಕೋನವನ್ನು ಸಾರ್ವಜನಿಕ ಆಡಳಿತದಲ್ಲಿ ಜನಪ್ರಿಯಗೊಳಿಸಿದರು. ಆಡಳಿತ ವ್ಯವಸ್ಥೆಯ ಸದಸ್ಯರ ವ್ಯಕ್ತಿತ್ವದ ಬೆಳವಣಿಗೆಗೆ ಅವಕಾಶಗಳನ್ನು ಕಲ್ಪಿಸಿಕೊಡುವಂತಹ ವ್ಯವಸ್ಥೆಯ ಅಗತ್ಯತೆಯನ್ನು ಪ್ರತಿಪಾದಿಸಿದರು.

ಸಾರ್ವಜನಿಕ ಆಡಳಿತದ ವಿಕಾಸದಲ್ಲಿ 1960ರ ದಶಕದಲ್ಲಿ ಜರುಗಿದ ಎರಡು ಪ್ರಮುಖ ಬೆಳವಣಿಗೆಗಳೆಂದರೆ

1) ಎಡ್ವರ್ಡ್ ವೀಡ್ನರ್, ಅವರ 'ಅಭಿವೃದ್ಧಿ ಆಡಳಿತ' ಮತ್ತು ಎಫ್‌ಡಬ್ಲ್ಯೂ, ರಿಗ್ಸ್‌ರವರ 'ಆಡಳಿತಾತ್ಮಕ ಅಭಿವೃದ್ಧಿ' ಎಂಬ ಪರಿಭಾವನೆಗಳ ಬೆಳವಣಿಗೆ

2) ಡ್ವೈಟ್ ವಾಲ್ಡೊರವರ 'ನೂತನ ಸಾರ್ವಜನಿಕ ಆಡಳಿತದ ಪರಿಭಾವನೆಯ ಬೆಳವಣಿಗೆ

ನೂತನ ಸಾರ್ವಜನಿಕ ಆಡಳಿತದಲ್ಲಿ ಸಾಮಾಜಿಕ ಸವಾಲುಗಳನ್ನು ಎದುರಿಸುವಲ್ಲಿ ಹಾಗೂ ಸಾಮಾಜಿಕ ಬದಲಾವಣೆಯಲ್ಲಿ ಸಾರ್ವಜನಿಕ ಆಡಳಿತವು ನಿರ್ವಹಿಸಬೇಕಾದ ಪಾತ್ರದ ಬಗ್ಗೆ ಒತ್ತಿ ಹೇಳಲಾಗಿದೆ. ಸಾರ್ವಜನಿಕ ಆಡಳಿತದ ಮೇಲೆ ಪರಿಸರದ ಪ್ರಭಾವದ ಅಧ್ಯಯನವೂ ಸಹ ಈ ಹಂತದಲ್ಲಿ ಜರುಗಿದ ಮತ್ತೊಂದು ಬೆಳವಣಿಗೆ.

ಹೀಗೆ ಸಾರ್ವಜನಿಕ ಆಡಳಿತ ವಿಕಾಸದ ಈ ಹಂತವನ್ನು ಬಹುಮುಖಿ ಪರಿಭಾವನೆಗಳ ಕಾಲ ಎಂದು ಗುರುತಿಸಲಾಗಿದೆ. ಅಂದರೆ, ಸಾರ್ವಜನಿಕ ಆಡಳಿತದಲ್ಲಿ ವರ್ತನಾವಾದ ಮತ್ತು ಪರಿಸರವಾದ ಎಂಬ ಹೊಸ ಅಲೆಗಳು ಅಥವಾ ದೃಷ್ಟಿಕೋನಗಳು ಸೃಷ್ಟಿಯಾದವು, ಸಾರ್ವಜನಿಕ ಆಡಳಿತದ ಮೇಲೆ ಮತ್ತು ಅದರ ಕ್ರಿಯೆ ಮತ್ತು ಪ್ರತಿಕ್ರಿಯೆಯ ಮೇಲೆ ಮಾನವನ ವರ್ತನೆಗಳು ಮತ್ತು ಪರಿಸರ ಹೇಗೆ ತಮ್ಮ ಪ್ರಭಾವ ಬೀರುತ್ತವೆ ಎಂಬುದನ್ನು ವಿವರಿಸಿ ವಿಶ್ಲೇಷಣೆಗೆ ಒಳಪಡಿಸಲಾಯಿತು. ಹೀಗೆ ವಿವಿಧ ರೀತಿಯ ವಿಶ್ಲೇಷಣಾತ್ಮಕ ವಿಚಾರಾಂಶಗಳು ಹೊರಹೊಮ್ಮಿ ಸಾರ್ವಜನಿಕ ಆಡಳಿತವನ್ನು ವಿಕಾಸಗೊಳಿಸಿದವು.

ಸಾರ್ವಜನಿಕ ಆಡಳಿತದ ವಿಕಾಸದ ಈ ಹಂತದಲ್ಲಿನ ಮುಖ್ಯ ಬೆಳವಣಿಗೆಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು.

1) ತೌಲನಿಕ ಸಾರ್ವಜನಿಕ ಆಡಳಿತದ ಬೆಳವಣಿಗೆ

2) ಸಾರ್ವಜನಿಕ ಆಡಳಿತದ ಪರಿಸರದ ದೃಷ್ಟಿಕೋನದ ಪ್ರತಿಪಾದನೆ

3) ಅಭಿವೃದ್ಧಿ ಆಡಳಿತದ ಪರಿಕಲ್ಪನೆ

4) ರಿಗ್ಸ್ ಅವರ ಆಡಳಿತಾತ್ಮಕ ಅಭಿವೃದ್ಧಿ

5) ನೂತನ ಸಾರ್ವಜನಿಕ ಆಡಳಿತದ ಉದಯ ಇತ್ಯಾದಿ

### 2.3.5 ಐದನೇ ಹಂತ-ಸಾರ್ವಜನಿಕ ನೀತಿಯ ದೃಷ್ಟಿಕೋನ (1971ರ ನಂತರ)

1971ರ ನಂತರದ ಅವಧಿಯಲ್ಲಿ ಸಾರ್ವಜನಿಕ ಆಡಳಿತವು ಶ್ರೀಮಂತವಾಗಿ ಬೆಳೆಯಿತು. ಸಾರ್ವಜನಿಕ ಆಡಳಿತವು ವಿವಿಧ ವಿಷಯಗಳ ವಿದ್ವಾಂಸರನ್ನು ಸಾಕಷ್ಟು ಆಕರ್ಷಿಸಿತು. ಈ ಅವಧಿಯಲ್ಲಿ ಅದು ಅಂತರಶಾಸ್ತ್ರೀಯ ವಿಷಯವಾಗಿ ಬೆಳೆಯುತ್ತಿದೆ.

ಈ ಅವಧಿಯಲ್ಲಿ ಸಾರ್ವಜನಿಕ ಆಡಳಿತವನ್ನು ನೀತಿ ಅಥವಾ ಧೋರಣೆಯೊಂದಿಗೆ ಗುರುತಿಸಲಾಗಿದೆ.

ಇಂದು ಸರ್ಕಾರಗಳು ಹೆಚ್ಚು ಹೆಚ್ಚು ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಬೇಕಾಗಿರುವುದರಿಂದ ನೀತಿ ನಿರೂಪಣೆ ಮತ್ತು ತೀರ್ಮಾನ ಕೈಗೊಳ್ಳುವ ವಿಷಯಗಳು ಸಾರ್ವಜನಿಕ ಆಡಳಿತದ ಪ್ರಮುಖ ಅಧ್ಯಯನದ ಕ್ಷೇತ್ರಗಳಾಗಿವೆ. ಸಾರ್ವಜನಿಕ

ಆಡಳಿತದ ಲೇಖಕರು ನೀತಿ ವಿಜ್ಞಾನ (Policy Science), ರಾಜಕೀಯ ಆರ್ಥಿಕತೆ, ಸಾರ್ವಜನಿಕ ನೀತಿ ನಿರೂಪಣಾ ಪ್ರಕ್ರಿಯೆಗೆ ಸಂಬಂಧಿಸಿದ ಕ್ಷೇತ್ರಗಳ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದಾರೆ. ಸಾಂಪ್ರದಾಯಿಕ ತತ್ವವಾದ ರಾಜಕಾರಣ-ಆಡಳಿತದ ದ್ವಿಭಜನೆಯನ್ನು ಕೈಬಿಟ್ಟದ್ದರಿಂದ, ಸಾರ್ವಜನಿಕ ನೀತಿಯ ದೃಷ್ಟಿಕೋನ ಹೆಚ್ಚು ಮಹತ್ವ ಪಡೆದಿದೆ. ಡ್ವೈಟ್ ವಾಲ್ಡೊರವರು ರಾಜಕಾರಣ ಮತ್ತು ಆಡಳಿತದ ಪ್ರತ್ಯೇಕತೆಯು ಇಂದು 'ಸವಕಲಾದ ಸೂತ್ರ' (outworn credo) ಎಂದು ಬಣ್ಣಿಸಿದ್ದಾರೆ.

ರಾಬರ್ಟ್ ಟಿ ಗೋಲೆಂಬ್ಬಿಸ್ಕಿ ಅವರ ಪ್ರಕಾರ ಸಾರ್ವಜನಿಕ ಆಡಳಿತದ ವಿಕಾಸದಲ್ಲಿನ ಸಾರ್ವಜನಿಕ ನೀತಿ ದೃಷ್ಟಿಕೋನದ ಹಂತವು ಎರಡು ಸಂಗತಿಗಳನ್ನು ಆಧರಿಸಿದೆ. 1) ಎಲ್ಲ ಹಂತಗಳಲ್ಲಿ ರಾಜಕಾರಣ ಮತ್ತು ಆಡಳಿತಗಳ ಅಂತರ್ವ್ಯಾಪನೆ ಅಥವಾ ಅನ್ಯೋನ್ಯ ವ್ಯಾಪನೆ (interpenetration) 2) ಎಲ್ಲದರಲ್ಲಿಯೂ ಆಡಳಿತದ ಹಸ್ತಕ್ಷೇಪದ ಲಕ್ಷಣ. ನೀತಿ ವಿಶ್ಲೇಷಣೆಯ ದೃಷ್ಟಿಕೋನದ ಅಳವಡಿಕೆಯಿಂದ ಸಾರ್ವಜನಿಕ ಆಡಳಿತದ ವ್ಯಾಪ್ತಿ ವಿಸ್ತೃತವಾಗಿದೆಯಲ್ಲದೆ, ಅದು ಅಂತರಶಾಸ್ತ್ರೀಯ ವಿಷಯವಾಗಿದೆ.

ಹೀಗೆ ಸಾರ್ವಜನಿಕ ಆಡಳಿತವು 1887 ರಿಂದ ಇಲ್ಲಿಯವರೆಗೂ ದೀರ್ಘಕಾಲದ ಬೆಳವಣಿಗೆಯ ಹಾದಿಯನ್ನು ಸವೆಸಿರುವುದು ಮೇಲಿನ ವಿವರಣೆಯಿಂದ ನಮಗೆ ತಿಳಿದು ಬರುತ್ತಿದೆ. ಒಂದು ಸ್ವತಂತ್ರ ಅಧ್ಯಯನದ ವಿಷಯವಾಗಿ ಹಾಗೂ ವಿಸ್ತಾರಗೊಳ್ಳುತ್ತಿರುವ ಅದರ ಸಾಹಿತ್ಯ ಸಂಪತ್ತಿನೊಂದಿಗೆ ಸಾರ್ವಜನಿಕ ಆಡಳಿತವು ವಿಶ್ವಾಸಾರ್ಹತೆಯನ್ನು ಗಳಿಸಿದೆ. ಇಂದು ಸಾರ್ವಜನಿಕ ಆಡಳಿತವು ಹೆಚ್ಚು ಹೆಚ್ಚು ತನ್ನ ಗಮನವನ್ನು ಆಡಳಿತದ ಕ್ರಿಯಾಶೀಲತೆ ಕಡೆಗೆ ಹರಿಸುತ್ತಿದೆ. ಅಂದರೆ ಇಂದು ಸಾರ್ವಜನಿಕ ಆಡಳಿತವು ಹೆಚ್ಚು ಹೆಚ್ಚು ಜನರ ಭಾವನೆಗಳಿಗೆ ಮತ್ತು ಬೇಡಿಕೆಗಳಿಗೆ ಸ್ಪಂದಿಸುತ್ತಾ ಕ್ರಿಯಾಶೀಲವಾಗುತ್ತಿದೆ.

**ನಿಮ್ಮ ಪ್ರಗತಿ ಪರಿಶೀಲನೆ - 2**

ಸೂಚನೆ : i) ಕೆಳಗೆ ಕೊಟ್ಟಿರುವ ಸ್ಥಳವನ್ನು ನಿಮ್ಮ ಉತ್ತರಕ್ಕಾಗಿ ಬಳಸಿ

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವದೊಂದಿಗೆ ಪರಿಶೀಲಿಸಿ.

1) ಸಾರ್ವಜನಿಕ ಆಡಳಿತದ ವಿಕಾಸದಲ್ಲಿನ ವಿವಿಧ ಹಂತಗಳನ್ನು ವಿವರಿಸಿ.

................................................................................................................................

................................................................................................................................

................................................................................................................................

................................................................................................................................

................................................................................................................................

................................................................................................................................

## 2.4 ಸಾರಾಂಶ

ಸಾರ್ವಜನಿಕ ಆಡಳಿತದ ಚಟುವಟಿಕೆಗಳು ಮಾನವ ಸಮಾಜದಷ್ಟೇ ಪುರಾತನವಾದವು. ಆದರೆ ಇದು ಒಂದು ಪ್ರತ್ಯೇಕವಾದ ಅಧ್ಯಯನ ಮತ್ತು ಬೋಧನಾ ವಿಷಯ ವಸ್ತುವಾದದ್ದು ಈತ್ತೀಚಿನ ವರ್ಷಗಳಲ್ಲಿ, ಅಂದರೆ 19ನೇ ಶತಮಾನದ ಕೊನೆ ಭಾಗದಲ್ಲಿ. ಸಾರ್ವಜನಿಕ ಆಡಳಿತದ ಅಧ್ಯಯನದ ಬೆಳವಣಿಗೆ ವಿಶೇಷವಾಗಿ ಅಮೆರಿಕಾದಲ್ಲಿ ಪ್ರಾರಂಭವಾಯಿತೆಂದು ಹೇಳಬಹುದು. ಇದರ ಬೆಳವಣಿಗೆಗೆ ಕಲ್ಯಾಣ ರಾಜ್ಯದ ಉದಯ, ಔದ್ಯೋಗೀಕರಣದ ಕ್ರಾಂತಿ, ವೈಜ್ಞಾನಿಕ ನಿರ್ವಹಣಾ ಚಳುವಳಿ, ಪ್ರಜಾಪ್ರಭುತ್ವದ ಬೆಳವಣಿಗೆ ಮುಂತಾದ ಅಂಶಗಳು ಕಾರಣವಾಗಿವೆ.

1887ರಲ್ಲಿ ವುಡ್ರೊವಿಲ್ಸನ್ಸ್ ಅವರ 'ಆಡಳಿತದ ಅಧ್ಯಯನ' ಎಂಬ ಪ್ರಬಂಧವು ಸಾರ್ವಜನಿಕ ಆಡಳಿತದ ಕ್ರಮಬದ್ಧ ಅಧ್ಯಯನಕ್ಕೆ ತಳಹದಿ ಹಾಕಿತು. ಅಂದಿನಿಂದ ಇಂದಿನವರೆಗೂ ಸಾರ್ವಜನಿಕ ಆಡಳಿತದ ಬೆಳವಣಿಗೆಯು ಅನೇಕ ಹಂತಗಳನ್ನು ದಾಟಿ ಬಂದಿದೆ. ಪ್ರಥಮ ಹಂತವನ್ನು ರಾಜಕಾರಣ-ಆಡಳಿತದ ದ್ವಿಭಜನೆಯ ಕಾಲವೆಂದೂ, ದ್ವಿತೀಯ ಹಂತವನ್ನು ಆಡಳಿತದ ತತ್ವಗಳ ಕಾಲವೆಂದೂ, ತೃತೀಯ ಹಂತವನ್ನು ಮಾನವ ಸಂಬಂಧಗಳ ಹಾಗೂ ವರ್ತನಾ ದೃಷ್ಟಿಕೋನದ ಕಾಲವೆಂದೂ, ನಾಲ್ಕನೆಯ ಹಂತವನ್ನು ಸಾರ್ವಜನಿಕ ಆಡಳಿತದ ಬಿಕ್ಕಟ್ಟಿನ ಕಾಲವೆಂದೂ, ಕರೆಯಲಾಗಿದೆ.

ಈ ನಾಲ್ಕನೆಯ ಹಂತದಲ್ಲಿ ಸಾರ್ವಜನಿಕ ಆಡಳಿತವು ಅನೇಕ ಬೆಳವಣಿಗೆಯನ್ನು ಕಂಡಿದೆ. ತೌಲನಿಕ ಸಾರ್ವಜನಿಕ ಆಡಳಿತ ಅಭಿವೃದ್ಧಿ ಆಡಳಿತ, ಸಾರ್ವಜನಿಕ ಆಡಳಿತದ ಪರಿಸರ, ನೂತನ ಸಾರ್ವಜನಿಕ ಆಡಳಿತ ಮುಂತಾದ ಹೊಸ ಪರಿಕಲ್ಪನೆಗಳಿಗೆ ಒತ್ತು ನೀಡಲಾಗಿದೆ. ಸಾರ್ವಜನಿಕ ಆಡಳಿತದ ಕೊನೆಯ ಹಂತದಲ್ಲಿ ನೀತಿ ದೃಷ್ಟಿಕೋನದ ಬೆಳವಣಿಗೆಗೆ ಹೆಚ್ಚು ಒತ್ತು ನೀಡಲಾಗಿದೆ. ಸಾರ್ವಜನಿಕ ಆಡಳಿತವನ್ನು ನೀತಿ ಅಥವಾ ಧೋರಣೆ ವಿಜ್ಞಾನದೊಂದಿಗೆ ಗುರುತಿಸಲಾಗಿದೆ. 1971 ರಿಂದೀಚೆಗೆ ಸಾರ್ವಜನಿಕ ಆಡಳಿತವು ಶ್ರೀಮಂತವಾಗಿ ಬೆಳೆದಿದೆ. ಇಂದು ಸಾರ್ವಜನಿಕ ಆಡಳಿತವು ಹೆಚ್ಚು ಜನರ ಭಾವನೆಗಳಿಗೆ ಮತ್ತು ಬೇಡಿಕೆಗಳಿಗೆ ಸ್ಪಂದಿಸುತ್ತಾ ಕ್ರಿಯಾಶೀಲವಾಗುತ್ತಿದೆ.

## 2.5 ಕಠಿಣ ಪದಗಳು

ಅನುಭವಾತ್ಮಕ - ಅವಲೋಕನ ಹಾಗೂ ಪ್ರಯೋಗಾಧಾರಿತವಾದುದು

ಕೈಗಾರಿಕಾ ಕ್ರಾಂತಿ - 19ನೇ ಶತಮಾದನದಲ್ಲಿ ಇಂಗ್ಲೆಂಡಿನಲ್ಲಿ ಜರುಗಿದ ಕೃಷಿಯಿಂದ ಕೈಗಾರಿಕೆದೆಡೆಗೆ ಸಮಾಜ ಪರಿವರ್ತನೆ

ದ್ವಿಭಜನೆ - ಎರಡು ಪ್ರತ್ಯೇಕ ಭಾಗಗಳ - ದ್ವಿಭಾಗ

## 2.6 ಕೆಲವು ಉಪಯುಕ್ತ ಪುಸ್ತಕಗಳು

ಪ್ರೊ. ಎಸ್. ಹಾಲಪ್ಪ - ಆಡಳಿತಾತ್ಮಕ ಸಿದ್ಧಾಂತ

ಡಾ|| ಟಿ.ಡಿ. ದೇವೆಗೌಡ - ಸಾರ್ವಜನಿಕ ಆಡಳಿತ

ಪ್ರೊ. ಎಂ. ವಿ. ಕೃಷ್ಣರಾವ್-ಸಾರ್ವಜನಿಕ ಆಡಳಿತ

ರುಕ್ಮಿಬಸು - ಪಬ್ಲಿಕ್ ಅಡ್ಮಿನಿಸ್ಟ್ರೇಷನ್

ಹೊಷಿಯಾರ್‌ಸಿಂಗ್ - ಅಡ್ಮಿನಿಸ್ಟ್ರೇಟಿವ್ ಥಿಯರಿ

ಫಾಡಿಯಾ & ಪಬ್ಲಿಕ್ ಅಡ್ಮಿನಿಸ್ಟ್ರೇಷನ್

ಮೊಹಿತ್ ಭಟ್ಟಾಚಾರ್ಯ - ನ್ಯೂ ಹೊರೈಜಾನ್ಸ್ ಆಫ್ ಪಬ್ಲಿಕ್ ಅಡ್ಮನಿಸ್ಟ್ರೇಷನ್

## 2.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು

**ನಿಮ್ಮ ಪ್ರಗತಿ ಪರಿಶೀಲನೆ-1**

1) ನೋಡಿ, ವಿಭಾಗ-2.2

**ನಿಮ್ಮ ಪ್ರಗತಿ ಪರಿಶೀಲನೆ-2**

1) ನೋಡಿ ವಿಭಾಗ-2.3

## ಘಟಕ - 3 ಸಾರ್ವಜನಿಕ ಆಡಳಿತದ ಪರಿಸರ-ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವ

ರಚನೆ

3.0 ಉದ್ದೇಶಗಳು

3.1 ಪೀಠಿಕೆ

3.2 ಸಾರ್ವಜನಿಕ ಆಡಳಿತದ ಪರಿಸರದ ಅರ್ಥ ಮತ್ತು ಪ್ರಾಮುಖ್ಯತೆ

3.3 ರಾಯಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವ

3.3.1 ರಾಜಕೀಯ ಪರಿಸರ ಮತ್ತು ಸಾರ್ವಜನಿಕ ಆಡಳಿತ

3.3.2 ಆರ್ಥಿಕ ಪರಿಸರ ಮತ್ತು ಸಾರ್ವಜನಿಕ ಆಡಳಿತ

3.3.3 ಸಮಾಜಿಕ ಪರಿಸರ ಮತ್ತು ಸಾರ್ವಜನಿಕ ಆಡಳಿತ

3.3.4 ಸಾಂಸ್ಕೃತಿಕ ಪರಿಸರ ಮತ್ತು ಸಾರ್ವಜನಿಕ ಆಡಳಿತ

3.4 ಸಾರಾಂಶ

3.5 ಕಠಿಣ ಪದಗಳು

3.6 ಕೆಲವು ಉಪಯುಕ್ತ ಗ್ರಂಥಗಳು

3.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು ಅಭ್ಯಾಸ

## 3.0 ಉದ್ದೇಶಗಳು

ಈ ಘಟಕದಲ್ಲಿ ನಾವು ಸಾರ್ವಜನಿಕ ಆಡಳಿತದ ಪರಿಸರದ ಅರ್ಥ ಮತ್ತು ಪ್ರಾಮುಖ್ಯತೆಯನ್ನೂ ಹಾಗೂ ಸಾರ್ವಜನಿಕ ಆಡಳಿತವು ಹೇಗೆ ಪರಿಸರದಿಂದ ಪ್ರಭಾವಿತವಾಗುವುದು ಮತ್ತು ಅದು ಪರಿಸರದ ಮೇಲೆ ಯಾವ ರೀತಿ ಪ್ರಭಾವ ಬೀರುತ್ತದೆಂಬುದನ್ನು ಚರ್ಚಿಸುತ್ತೇವೆ. ಅಲ್ಲದೆ, ಸಾರ್ವಜನಿಕ ಆಡಳಿತದ ಮೇಲೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವವನ್ನು ಈ ಘಟಕದಲ್ಲಿ ಚರ್ಚಿಸುತ್ತೇವೆ. ಈ ಘಟಕದ ಅಧ್ಯಯನದ ನಂತರ ನೀವು ಈ ಕೆಳಗಿನವುಗಳನ್ನು ಉತ್ತರಿಸಬಹುದು.

ಸಾರ್ವಜನಿಕ ಆಡಳಿತದ ಪರಿಸರದ ಅರ್ಥವನ್ನು ವಿವರಿಸಿ.

ಸಾರ್ವಜನಿಕ ಆಡಳಿತದ ಮೇಲೆ ಪರಿಸರದ ಪ್ರಭಾವದ ಅಧ್ಯಯನದ ಅವಶ್ಯಕತೆಯನ್ನು ಚರ್ಚಿಸಿರಿ.

ಸಾರ್ವಜನಿಕ ಆಡಳಿತದ ಮೇಲೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವವನ್ನು ವಿವರಿಸಿರಿ.

## 3.1 ಪೀಠಿಕೆ

ಮಾನವನು ಪರಿಸರದ ಕೂಸು, ಹಾಗೆಯೇ ಅವನ ಸಾಮಾಜಿಕ, ರಾಜಕೀಯ, ಆರ್ಥಿಕ ಹಾಗೂ ಇತರ ಸಂಘ ಸಂಸ್ಥೆಗಳು ಸಹ. ಆದುದರಿಂದ ವಿವಿಧ ವಿದ್ವಾಂಸರು ಸಾರ್ವಜನಿಕ ಆಡಳಿತವು ಕಾರ್ಯನಿರ್ವಹಿಸುವ ಪರಿಸರದ ಹಿನ್ನೆಲೆಯ ಅಧ್ಯಯನದ ಆವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ. ಸಾರ್ವಜನಿಕ ಆಡಳಿತದ ಕಾರ್ಯನಿರ್ವಹಣೆಯ ಮೇಲೆ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಶಾಸನೀಯ, ಸಂವಿಧಾನಾತ್ಮಕ ಪರಿಸರ ಗಣನೀಯ ಪ್ರಭಾವ ಬೀರುತ್ತವೆ. ಓರ್ವ ವ್ಯಕ್ತಿ ಅವನು ಸರ್ಕಾರದ ಕಾರ್ಯದರ್ಶಿಯಾಗಿರಲಿ ಅಥವಾ ಕಾರಕೂನನಾಗಿರಲಿ, ತನ್ನ ಸಾರ್ವಜನಿಕ ಕಾರ್ಯಗಳನ್ನು ವಿವಿಧ ಬಗೆಯ ಪರಿಸರಗಳಲ್ಲಿ ನಿರ್ವಹಿಸಬೇಕಾಗುತ್ತದೆ. ಪರಿಸರದಲ್ಲಿ ಆಗುವ ಬದಲಾವಣೆಗೆ ತಕ್ಕಂತೆ ಸರ್ಕಾರವು ತನ್ನ ಕಾರ್ಯಕ್ರಮಗಳನ್ನು ಆಯಾ ಪರಿಸರಕ್ಕೆ ತಕ್ಕಂತೆ ರೂಪಿಸಬೇಕಾಗುತ್ತದೆ. ಮುಂದಿನ ಭಾಗಗಳಲ್ಲಿ ಸಾರ್ವಜನಿಕ ಆಡಳಿತದ ಮೇಲೆ ವಿವಿಧ ಪರಿಸರಗಳು ಯಾವ ರೀತಿ ಪ್ರಭಾವ ಬೀರುತ್ತವೆಂಬುದನ್ನು ಚರ್ಚಿಸೋಣ.

## 3.2 ಸಾರ್ವಜನಿಕ ಆಡಳಿತದ ಪರಿಸರದ ಅರ್ಥ ಮತ್ತು ಪ್ರಾಮುಖ್ಯತೆ

ಆಂಗ್ಲ ಭಾಷೆಯ ಪದ 'ಇಕಾಲಜಿ' (ಪರಿಸರ) ಎಂಬುದನ್ನು ಜೀವಶಾಸ್ತ್ರದಿಂದ ಪಡೆಯಲಾಗಿದೆ. ಜೀವಶಾಸ್ತ್ರದಲ್ಲಿ ಅದು ಪ್ರಾಣಿವರ್ಗಗಳು ಮತ್ತು ಅವುಗಳ ನೈಸರ್ಗಿಕ ಪರಸ್ಪರಾವಲಂಬನೆಯನ್ನು (inerdependence) ಸೂಚಿಸುತ್ತದೆ. ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ಈ ಪದವನ್ನು ಮೊಟ್ಟ ಮೊದಲಿಗೆ **ಜಾನ್‌ಗಾಸ್** (Jan Gaus) ಅವರು 1945ರಲ್ಲಿ ತಾವು ಬರೆದ "Reflections of Public Administration" ಎಂಬ ಕೃತಿಯಲ್ಲಿ ಬಳಸಿದರು. ಸರ್ಕಾರಿ ಕಾರ್ಯಗಳನ್ನು ಪರಿಸರಕ್ಕೆ ಸಂಬಂಧಿಸುವಂತಹ ಸಿದ್ಧಾಂತವನ್ನು ಜಾನ್‌ಗಾಸ್ ಪ್ರತಿಪಾದಿಸಿದರು. ಆದರೆ ಸಾರ್ವಜನಿಕ ಆಡಳಿತವು ಯಾವ ಪರಿಸರದಡಿಯಲ್ಲಿ ಕಾರ್ಯನಿರ್ವಹಿಸುತ್ತದೆಯೋ ಆ ಪರಿಸರಕ್ಕೂ ಮತ್ತು ಸಾರ್ವಜನಿಕ ಆಡಳಿತಕ್ಕೂ ನಡುವಿನ ಪಾರಸ್ಪರಿಕ ಕ್ರಿಯೆಯ ಕ್ರಮಬದ್ಧ ಅಧ್ಯಯನದ ಕಡೆಗೆ ಗಮನ ಸೆಳೆದವರೆಂದರೆ ಎಫ್, ಡಬ್ಲ್ಯೂ, ರಿಗ್ಸ್ ಅವರು. ರಿಗ್ಸ್ ಬರೆದ "(The Ecology of Public Administration) ಎಂಬ ಗ್ರಂಥದಲ್ಲಿ ಅವರು ಸಾರ್ವಜನಿಕ ಆಡಳಿತಕ್ಕೂ ಮತ್ತು ಪರಿಸರಕ್ಕೂ ಇರುವ ಸಂಬಂಧವನ್ನು ಕುರಿತು ಚರ್ಚಿಸಿದ್ದಾರೆ. ರಾಬರ್ಟ್‌ಡ್ಹಾಲ್ ಅವರು ತಮ್ಮ ಅಧ್ಯಯನದಲ್ಲಿ, ಸಾರ್ವಜನಿಕ ಆಡಳಿತದ ರಚನೆ ಮತ್ತು ವರ್ತನೆಯ ಮೇಲೆ ವಿವಿಧ ಸಂಸ್ಕೃತಿಗಳು ಬೀರಬಹುದಾದ ಪ್ರಭಾವಕ್ಕೆ ಹಾಗೂ ಪರಿಸರಕ್ಕೂ ಒತ್ತು ನೀಡಿದ್ದಾರೆ. ಸಾರ್ವಜನಿಕ ಆಡಳಿತವು ಅದು ಕಾರ್ಯ ನಿರ್ವಹಿಸುವ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪರಿಸರಗಳ ಪ್ರಭಾವದಿಂದ ಮುಕ್ತವಾಗಿರಲಾರದು ಎಂದು ಹೇಳಿದ್ದಾರೆ.

ಸಾರ್ವಜನಿಕ ಆಡಳಿತದ ಪರಿಸರ ಎಂದರೆ, ಆಡಳಿತಕ್ಕೂ ಅದರ ಪರಿಸರಕ್ಕೂ ಇರುವ ಸಂಬಂಧವನ್ನು ಕುರಿತ ಅಧ್ಯಯನವಾಗಿದೆ.

ಇಂದು ಸಾರ್ವಜನಿಕ ಆಡಳಿತದ ಮೇಲೆ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪರಿಸರದ ಪ್ರಭಾವನ್ನು ಯಾರೂ ಅಲ್ಲಗಳೆಯುವಂತಿಲ್ಲ. ಸಾಮಾಜಿಕ ವ್ಯವಸ್ಥೆಯಲ್ಲಿ ಪರಿಸರವು ಸಂಘ-ಸಂಸ್ಥೆಗಳು, ಇತಿಹಾಸ, ಕಾನೂನು, ಧರ್ಮ, ಶಿಕ್ಷಣ, ಪರಂಪರೆ, ಮೌಲ್ಯ, ನಂಬಿಕೆ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಎಲ್ಲಾ ಸಂಘ-ಸಂಸ್ಥೆಗಳು ಆಯಾ ಸಮಾಜದ ಪರಿಸರ ಮತ್ತು ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿರುತ್ತವೆ. ಸಾರ್ವಜನಿಕ ಆಡಳಿತವು ಸಮಾಜದಲ್ಲಿಯ ಒಂದು ಉಪ-ವ್ಯವಸ್ಥೆಯಾಗಿದೆ. ಹೀಗಾಗಿ ಅದು ಮತ್ತು ಸಾಮಾಜಿಕ ವ್ಯವಸ್ಥೆ ಪರಸ್ಪರ ಪ್ರಕ್ರಿಯಿಸುತ್ತವೆ. ಅಂದರೆ ಸಾರ್ವಜನಿಕ ಆಡಳಿತವು ಸಾಮಾಜಿಕ ಪರಿಸರದೊಂದಿಗೆ ರೂಪಿಸಲ್ಪಡುತ್ತದೆ. ಜೊತೆಗೆ ಸಾಮಾಜಿಕ ವ್ಯವಸ್ಥೆಯು ಅದರ ಪ್ರಭಾವಕ್ಕೆ ಈಡಾಗುವುದು. ಬಿ. ಪಿ. ಸಿಂಗ್ ಹೇಳಿರುವಂತೆ, ಆಡಳಿತವು ಆಯಾ ಸಮಯದ ಸಾಂಸ್ಕೃತಿಕ ಪ್ರವಾಹದ ಪ್ರಭಾವಕ್ಕೆ ಗುರಿಯಾಗಲೇ ಬೇಕು. ಎಫ್. ಡಬ್ಲ್ಯೂ ರಿಗ್ಸ್ ಸಹ ಹೇಳುವಂತೆ, ಯಾವುದೇ ಆಡಳಿತ ಸ್ವರೂಪದ ಪ್ರಾಮುಖ್ಯತೆ ಅದರ ಪರಿಸರವನ್ನೇ ಅವಲಂಬಿಸಿರುತ್ತದೆ. ಬಿ.ಗಯ್ ಪೀಟರ್ಸ್ ಅಭಿಪ್ರಾಯ ಪಡುವಂತೆ, ದೇಶದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳು ಸರ್ಕಾರದ ಆಡಳಿತ ವ್ಯವಸ್ಥೆಯ ಗಡಿಯನ್ನು ನಿರ್ಧರಿಸುತ್ತವೆ. ಇಂದು ಯಾವುದೇ ಒಂದು ಸಮಾಜದಲ್ಲಿ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಾಂಸ್ಕೃತಿಕ ಬೆಳವಣಿಗೆಗಳು ಮತ್ತು ಆಡಳಿತ ವ್ಯವಸ್ಥೆ ಪರಸ್ಪರ ಪ್ರಭಾವಕ್ಕೆ ಗುರಿಯಾಗುತ್ತವೆ ಅಥವಾ ಪರಸ್ಪರ ಪ್ರಕ್ರಿಯಿಸುತ್ತವೆ (interact). ಆದುದರಿಂದ ಸಾರ್ವಜನಿಕ ಆಡಳಿತವನ್ನು ಪ್ರತ್ಯೇಕವಾಗಿ ನೋಡದೆ, ಸಾರ್ವಜನಿಕ ಆಡಳಿತದ ಕಾರ್ಯವಿಧಾನವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವಹಿಸುವ ವಿವಿಧ ಆರ್ಥಿಕ ಸಂಸ್ಥೆಗಳು, ಸಾಂಸ್ಕೃತಿಕ ಹಿನ್ನೆಲೆ, ಶಾಸನೀಯ ಮತ್ತು ಸಂವಿಧಾನಾತ್ಮಕ ಪರಿಣಾಮಗಳು ಇವೇ ಮುಂತಾದ ಬಾಹ್ಯ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

ಸಾರ್ವಜನಿಕ ಆಡಳಿತದಲ್ಲಿ ಪರಿಸರ ದೃಷ್ಟಿಕೋನದ ಪ್ರಾಮುಖ್ಯತೆಯನ್ನು **ರಮೇಶ್ ಕೆ. ಅಶೋರಾ** ಮತ್ತು ಅಗಸ್ಟೋ ಫೆರಿರೋಸ್ (Austo Ferreros) ವಿವರಿಸಿದ್ದಾರೆ. ಅವರು ಹೇಳಿರುವಂತೆ, ಆಡಳಿತದ ಅಧಿಕಾರಿ ವರ್ಗದವರನ್ನು ಸಮಾಜದ ವಿವಿಧ ಮೂಲ ಸಂಸ್ಥೆಗಳಂತೆಯೇ ಒಂದು ಸಂಸ್ಥೆ ಎಂದೇ ಪರಿಗಣಿಸಬೇಕು. ಅದರ ರಚನೆ ಮತ್ತು ಕಾರ್ಯಗಳನ್ನು ಸಮಾಜದ ಇತರ ಸಂಸ್ಥೆಗಳೊಂದಿಗೆ ಹೊಂದಿರುವ ಬಾಂಧವ್ಯಗಳ ಹಿನ್ನೆಲೆಯಲ್ಲಿ ಅರಿಯಬಹುದು. ಅಧಿಕಾರಿ ವರ್ಗವು ಒಂದು ಸಾಮಾಜಿಕ ಸಂಸ್ಥೆಯಾಗಿ ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಸಂಸ್ಕೃತಿಯ ಉಪ ವ್ಯವಸ್ಥೆಗಳೊಂದಿಗೆ ಪ್ರತಿಕ್ರಿಯೆ ಹಾಗೂ ಪ್ರಭಾವವನ್ನು ಹೊಂದಿರುತ್ತದೆ. ಈ ಪರಸ್ಪರ ಪ್ರತಿಕ್ರಿಯೆಯಿಂದ ಆಡಳಿತವು ಸಮಾಜದ ಮೇಲೆ ಮತ್ತು ಸಮಾಜವು ಆಡಳಿತದ ಮೇಲೆ ಪ್ರಭಾವ ಬೀರಬಲ್ಲವು. ಹೀಗಾಗಿ ಸಾರ್ವಜನಿಕ ಆಡಳಿತವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕಾದರೆ, ಪರಿಸರದಲ್ಲಿಯ ಪರಸ್ಪರ ಸಂಬಂಧಗಳು ಹಾಗೂ ಅವುಗಳ ಪ್ರಭಾವವನ್ನು ಅರಿಯ ಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಧೋರಣೆಗಳನ್ನು ನಿರ್ಧರಿಸುವಲ್ಲಿ ಸಹಕಾರಿಯಾಗುತ್ತದೆ.

ಪರಿಸರದಲ್ಲಿ ಎರಡು ವಿಧವಾಗಿದೆ. ಒಂದು ಪ್ರಾಕೃತಿಕ ಮತ್ತು ಎರಡನೆಯದು ಮಾನವ ನಿರ್ಮಿತ. ಪ್ರಾಕೃತಿಕ ದೃಷ್ಟಿಯಿಂದ ಭೌಗೋಳಿಕ ಪರಿಸರವು ಆಡಳಿತದ ಮೇಲೆ ತನ್ನದೆ ಆದ ಪ್ರಭಾವ ಬೀರುತ್ತದೆ. ಇದು ಸಾರ್ವಜನಿಕ ಆಡಳಿತಾಧಿಕಾರಿಗಳ ಮನೋಸ್ಥೈರ್ಯ ಹಾಗೂ ಪ್ರೇರಣೆಗಳನ್ನು ನಿರ್ಧರಿಸುವುದರಲ್ಲಿ ಅಪಾರ ಪಾತ್ರವನ್ನು ಹೊಂದಿದೆ. ಉದಾಹರಣೆಗೆ ಮೂಲಭೂತ ಸೌಕರ್ಯಗಳ ಕೊರತೆ ಎಂಬ ಕಾರಣಕ್ಕಾಗಿ ಗ್ರಾಮಾಂತರ ಪ್ರದೇಶಗಳಿಗೆ ಉದ್ಯೋಗಿಗಳು ಹೋಗಲು ಇಚ್ಛಿಸುವುದಿಲ್ಲ.

ಹಾಗೆಯೇ ಮಾನವ ನಿರ್ಮಿತ ಪರಿಸರವೂ ಸಾರ್ವಜನಿಕ ಆಡಳಿತದ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಬೀರುತ್ತದೆ. ಮಾನವ ಪರಿಸರವು ಸಾಮಾಜಿಕ, ಸಂಸ್ಕೃತಿಕ, ಆರ್ಥಿಕ, ಮನೋವೈಜ್ಞಾನಿಕ, ರಾಜಕೀಯ ಹಾಗೂ ಆಡಳಿತ ವ್ಯವಸ್ಥೆಗಳ ವಿವಿಧ ಮುಖಗಳನ್ನು ಒಳಗೊಳ್ಳುತ್ತದೆ. ಆದುದರಿಂದ ಪರಿಸರ ದೃಷ್ಟಿಕೋನದ ಮೂಲಾಧಾರವೆಂದರೆ ಸಾರ್ವಜನಿಕ ಆಡಳಿತವು ಸಮಾಜದ ಹಲವಾರು ಸಂಸ್ಥೆಗಳಲ್ಲಿ ಒಂದು ಸಂಸ್ಥೆ; ಹೀಗಾಗಿ ಅದರ ರಚನೆ ಮತ್ತು ಕಾರ್ಯಗಳು ಈ ವಿವಿಧ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಮಾತ್ರವೇ ಅಧ್ಯಯನ ಮಾಡಬಹುದು. ಸಾರ್ವಜನಿಕ ಆಡಳಿತವು ಇತರೆ ಉಪ-ವ್ಯವಸ್ಥೆಗಳಾದ ಆರ್ಥಿಕ, ರಾಜಕೀಯ, ಶಾಸನೀಯ, ಸಾಮಾಜಿಕ-ಸಾಂಸ್ಕೃತಿಕ ಇತ್ಯಾದಿಗಳಿಂದ ಪ್ರಭಾವಿತವಾಗುತ್ತದೆ ಹಾಗೂ ಅವುಗಳ ಮೇಲೆ ಪ್ರಭಾವ ಬೀರುತ್ತದೆ; ಉತ್ತಮ ಪರಿಸ್ಥಿತಿಯ ಉದಯಕ್ಕೂ ಕಾರಣವಾಗುತ್ತದೆ.

**ನಿಮ್ಮ ಪ್ರಗತಿ ಪರಿಶೀಲನೆ -1**

ಸೂಚನೆ : i) ಕೆಳಗೆ ಕೊಟ್ಟಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿರಿ.

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ.

1) ಸಾರ್ವಜನಿಕ ಆಡಳಿತದ ಪರಿಸರ ಎಂದರೇನು? ಆಡಳಿತ ಪರಿಸರದ ಪ್ರಾಮುಖ್ಯತೆಯನ್ನು ವಿವರಿಸಿ.

........................................................................................................................

........................................................................................................................

........................................................................................................................

........................................................................................................................

........................................................................................................................

## 3.3 ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಪ್ರಭಾವ

ಸಾರ್ವಜನಿಕ ಆಡಳಿತದ ಕಾರ್ಯ ಮತ್ತು ಸಂಘಟನೆಯ ಮೇಲೆ ಸಾಮಾಜಿಕ, ಆರ್ಥಿಕ, ರಾಜಕೀಯ ಸಾಂಸ್ಕೃತಿಕ ಮತ್ತು ಶಾಸನೀಯ ಪರಿಸರದ ಆಳವಾದ ಪ್ರಭಾವವನ್ನು ಕಾಣಬಹುದು. ಸಾರ್ವಜನಿಕ ಆಡಳಿತವನ್ನು ಪ್ರತ್ಯೇಕವಾಗಿ ನೋಡದೆ, ಸಾರ್ವಜನಿಕ ಆಡಳಿತದ ಕಾರ್ಯ ವಿಧಾನವನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವಹಿಸುವ ವಿವಿಧ ರಾಜಕೀಯ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಸಂವಿಧಾನಾತ್ಮಕ ಪರಿಣಾಮಗಳು ಮುಂತಾದ ಬಾಹ್ಯ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

### 3.3.1 ರಾಜಕೀಯ ಪರಿಸರ ಮತ್ತು ಸಾರ್ವಜನಿಕ ಆಡಳಿತ

ಸಾರ್ವಜನಿಕ ಆಡಳಿತವು ರಾಜಕೀಯ ಪರಿಸರದ ಪ್ರಭಾವಕ್ಕೆ ಒಳಗಾಗಿ ಅದರೊಡನೆ ನಿಕಟ ಸಂಪರ್ಕ ಹೊಂದಿರುತ್ತದೆ. ಒಂದು ಸಮಾಜದ ಆಡಳಿತ ವ್ಯವಸ್ಥೆ, ಕಾರ್ಯ ವಿಧಾನ ಮತ್ತು ಪ್ರಕ್ರಿಯೆಗಳು ಆ ಸಮಾಜದ ರಾಜಕೀಯ ಪದ್ಧತಿಯ ಪ್ರಭಾವಕ್ಕೆ ಒಳಪಟ್ಟಿರುತ್ತದೆ. ರಾಜಕೀಯ ಕಾರ್ಯಾಂಗವು ಆಡಳಿತದ ಕಾರ್ಯ ಚಟುವಟಿಕೆಗಳನ್ನು ನಿರ್ಧರಿಸಿ ನಿರ್ದೇಶಿಸುತ್ತದೆ. ನೌಕರಶಾಹಿಯು ನೀತಿ ನಿರೂಪಣೆಯಲ್ಲಿ ಮುಖ್ಯ ಪಾತ್ರವಹಿಸುತ್ತದೆ. ಆದುದರಿಂದ ಆಡಳಿತಾತ್ಮಕ ಸಂಸ್ಥೆಗಳು ರಾಜಕೀಯ ಪರಿಸರ ಬದಲಾವಣೆಗೆ ತಕ್ಕಂತೆ ಪರಿವರ್ತಿತವಾಗುವುದು ಸಹಜವಾಗಿದೆ.

ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿ ಆಡಳಿತ ಜನರೊಡನೆ ಸ್ಪಂದಿಸುತ್ತ ಅವರಿಗೆ ಹೊಣೆಯಾಗಿರುತ್ತದೆ. ಜನರಿಂದ ಆಯ್ಕೆಯಾದ ಪ್ರತಿನಿಧಿಗಳು ಜನತೆಯ ಆಸೆ-ಆಕಾಂಕ್ಷೆಗಳಿಗೆ ಸ್ಪಂದಿಸಿ ಕಾರ್ಯನಿರ್ವಹಿಸುತ್ತಾರೆ ಹಾಗೂ ಆಡಳಿತಾಧಿಕಾರಿಗಳು ತಮ್ಮ ಕಾರ್ಯ ವೈಖರಿಗೆ ಹೊಣೆಯಾಗಿರುತ್ತಾರೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಡಳಿತದ ಮೇಲೆ ಆಂತರಿಕ ಹಾಗೂ ಬಾಹ್ಯವಾಗಿ ಅನೇಕ ನಿಯಂತ್ರಣಗಳಿರುತ್ತವೆ.

ಪ್ರಜಾಸತ್ತಾತ್ಮಕ ಸರ್ಕಾರದ ಪದ್ಧತಿಯಲ್ಲಿ ಆಡಳಿತ ನೀತಿ ಆದ್ಯತೆಗಳು ಅಧಿಕಾರದಲ್ಲಿರುವ ಪಕ್ಷಕ್ಕೆ ಅನುಗುಣವಾಗಿ ಇರುತ್ತವೆ. ಅಧಿಕಾರದಲ್ಲಿರುವ ಆಳುವ ಪಕ್ಷ ಬದಲಾದಂತೆ ನಾವು ನೀತಿ, ಆದ್ಯತೆಗಳಲ್ಲಿ ಬದಲಾವಣೆ ಕಾಣುತ್ತೇವೆ. ಆಡಳಿತದ ಆದ್ಯತೆಗಳು, ಧೋರಣೆಗಳು ಆಳುವ ಪಕ್ಷದ ಧೋರಣೆಗೆ ಅನುಗುಣವಾಗಿ ಇರುತ್ತವೆ. ಆಳುವ ಪಕ್ಷಗಳು ರೂಪಿಸಿದ ನೀತಿಗೆ ಅನುಗುಣವಾಗಿ ಮೂಲಭೂತ ಪ್ರಶ್ನೆಗಳಾದ ರಾಷ್ಟ್ರೀಯ ಭದ್ರತೆ, ಸೈನಿಕ ಸಿದ್ಧತೆ, ಆರ್ಥಿಕ ಪ್ರಗತಿ, ವಿದೇಶ ನೀತಿ ಮುಂತಾದ ಮಹತ್ವದ ಬದಲಾವಣೆಗಳಾಗುತ್ತವೆ.

ಸಾರ್ವಜನಿಕ ನೀತಿಯ ಸ್ವರೂಪ ಮತ್ತು ಲಕ್ಷಣಗಳನ್ನು ರಾಜಕೀಯ ಪಕ್ಷಗಳ ಸೈದ್ಧಾಂತಿಕ ವಿಚಾರಗಳು ರೂಪಿಸುತ್ತವೆ. ಹೀಗೆ ವಿವಿಧ ರಾಜಕೀಯ ಪಕ್ಷಗಳ ಸೈದ್ಧಾಂತಿಕ ವಿಚಾರಗಳು ಸಾರ್ವಜನಿಕ ನೀತಿಯ ರಚನೆಯ ಮೇಲೆ ಬೆಳಕನ್ನು ಚೆಲ್ಲುತ್ತವೆ.

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಆಡಳಿತದ ಸೇವಾ ವರ್ಗವು ಶಾಶ್ವತವಾಗಿದ್ದು, ಶ್ರೇಣಿಯಾತ್ಮಕ ವ್ಯವಸ್ಥೆಯ ಆಧಾರದ ಮೇಲೆ ರೂಪಿತವಾಗಿರುತ್ತದೆ. ರಾಜಕೀಯ ನಿರ್ದೇಶನ, ಸಲಹೆ ಸೂಚನೆಯಂತೆ ಆಡಳಿತದ ಕಾರ್ಯಾಚರಣೆ ನಡೆಯುತ್ತದೆ. ಪ್ರಜಾಸತ್ತಾತ್ಮಕ ರಾಜಕೀಯ ಪರಿಸರದಲ್ಲಿ ಸಿಬ್ಬಂದಿ ವರ್ಗ ಸಂವಿಧಾನಾತ್ಮಕ ಕಾನೂನಿನ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತದೆ. ಇಲ್ಲಿ ಆಡಳಿತವು ಜನತೆಯೊಂದಿಗೆ ಸ್ಪಂದಿಸುತ್ತಾ ಸಂವಿಧಾನಕ್ಕೆ ಅನುಗುಣವಾಗಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುತ್ತಿದೆ. ಇವರು ಸೇವಾ ಭದ್ರತೆ ಹಾಗೂ ಇತರ ಸೌಕರ್ಯಗಳನ್ನು ಹೊಂದಿರುತ್ತಾರೆ. ಒಟ್ಟಿನಲ್ಲಿ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಆಡಳಿತ ವ್ಯವಸ್ಥೆಯು ಹೆಚ್ಚು ವಿಕೇಂದ್ರೀಕರಣವಾಗಿರುವುದನ್ನು ನಾವು ಗಮನಿಸಬಹುದು.

ಆದರೆ ಸಮತಾವಾದ ರಾಜಕೀಯ ಪರಿಸರದಲ್ಲಿ ಆಡಳಿತಾಧಿಕಾರದ ಏಕಸ್ವಾಮ್ಯತೆಯನ್ನು ಕಮ್ಯುನಿಸ್ಟ್ ಪಕ್ಷ ಹೊಂದಿರುತ್ತದೆ. ಅಲ್ಲಿಯ ವಾಸ್ತವಿಕ ಆಳ್ವಿಕೆ ನಡೆಸುವ, ನೀತಿ ನಿರೂಪಿಸುವ, ಆದೇಶ ನೀಡುವ ಏಕೈಕ ಪಕ್ಷವಾಗಿದೆ. ನವಸಮಾಜದ ರಚನೆ, ಆಡಳಿತಾತ್ಮಕ ಚಲಾವಣೆ ಮತ್ತು ಸಂಪನ್ಮೂಲಗಳ ಬಳಕೆ ಇವೆಲ್ಲವನ್ನೂ ತಾನೇ ವಹಿಸಿಕೊಂಡು ತನ್ನ ನೇತೃತ್ವದಲ್ಲಿ ಆಡಳಿತ ನಡೆಸುವುದು. ಈ ತೆರನಾದ ಸ್ವರೂಪವನ್ನು ಸಮತಾವಾದಿ ಆಡಳಿತ ವ್ಯವಸ್ಥೆ ಹೊಂದಿರುವುದರ ಪರಿಣಾಮವಾಗಿ ಸಾರ್ವಜನಿಕ ಆಡಳಿತ ವ್ಯವಸ್ಥೆ ಹೆಚ್ಚಿನ ಬಲ ಹಾಗೂ ಅನುಕೂಲತೆಗಳನ್ನು ಹೊಂದಿದ್ದು, ಅತೀ ಕಡಿಮೆ ಅವಧಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬಲ್ಲದು. ಆಡಳಿತ ದೃಷ್ಟಿಯಿಂದ ಈ ವ್ಯವಸ್ಥೆಯು ಆಹಾರ, ಬಟ್ಟೆ, ವಸತಿ, ಶಿಕ್ಷಣ, ಉತ್ತಮ ವೇತನ, ಉದ್ಯೋಗ ಒದಗಿಸುವ ಮೂಲಭೂತ ಸೌಕರ್ಯಗಳ ಕಡೆಗೆ ಗಮನ ಕೊಡುವುದು.

ಆಡಳಿತ ಶಾಹಿಯು ಸಾರ್ವಜನಿಕ ಆಡಳಿತದಲ್ಲಿ ಪ್ರಮುಖ ಪಾತ್ರವಹಿಸಿದರೂ, ನೌಕರಶಾಹಿಯೇತರ (Non-bureaucratic) ಸಂಸ್ಥೆಗಳಾದ ರಾಜಕೀಯ ಪಕ್ಷಗಳು, ಶಾಸಕಾಂಗಗಳು, ಕಾರ್ಯಾಂಗ, ನ್ಯಾಯಾಲಯಗಳು ರಾಜಕೀಯದಲ್ಲಿ ತೊಡಗಿರುವಷ್ಟೇ ಸಾರ್ವಜನಿಕ ನೀತಿ ಅನುಷ್ಠಾನದಲ್ಲಿಯೂ ತೊಡಗಿರುತ್ತವೆ". ಎಂದು ರಿಗ್ಸ್ ಹೇಳಿದ್ದಾರೆ. ಸಾರ್ವಜನಿಕ ಆಡಳಿತ ಮತ್ತು ರಾಜಕಾರಣಗಳೆರಡೂ ಪರಸ್ಪರಾವಲಂಬಿಗಳಾಗಿವೆ ಎಂದು ರಿಗ್ಸ್ ಅಭಿಪ್ರಾಯಪಟ್ಟಿದ್ದಾರೆ. ರಾಜಕಾರಣವು ಆಡಳಿತದ ಕಾರ್ಯಾಚರಣೆಯ ಚೌಕಟ್ಟನ್ನು ಒದಗಿಸುತ್ತದೆ. ಆಡಳಿತವು ರಾಜಕಾರಣ ತೆಗೆದುಕೊಂಡ ನೀತಿಗಳನ್ನು ಅನುಷ್ಠಾನಕ್ಕೆ ತರುತ್ತದೆ. ಆದರೆ ಇಂದು ರಾಜಕಾರಣ-ಆಡಳಿತದ ದ್ವಿಭಜನೆಯನ್ನು ತಿರಸ್ಕರಿಸಲಾಗಿದೆ. ಆಡಳಿತವು ಇಂದು ಹೆಚ್ಚಾಗಿ ನೀತಿ ನಿರೂಪಣೆಯಲ್ಲಿ ತನ್ನನ್ನು ತೊಡಗಿಸಿಕೊಂಡಿರುವುದನ್ನು ಕಾಣುತ್ತೇವೆ. ಆಡಳಿತ ಸಿಬ್ಬಂದಿಯ ಸಹಾಯ, ಸಲಹೆ ಮತ್ತು ಸಹಕಾರವಿಲ್ಲದೆ ನೀತಿ ನಿರೂಪಣೆ ಸಾಧ್ಯವಿಲ್ಲದ ಮಾತು. ಪ್ರತಿ ಹೆಜ್ಜೆಗೂ ರಾಜಕಾರಣ ಆಡಳಿತದ ಸಂಬಂಧವನ್ನು ಕಾಣಬಹುದಾಗಿದೆ. ಪ್ರತಿ ಹಂತದಲ್ಲಿ ಆಡಳಿತಗಾರರು ನೀತಿ ರಚನಾಕಾರರ ಮೇಲೆ ಪ್ರಭಾವ ಬೀರುತ್ತಾರೆ. ಆದುದರಿಂದ ಸಾರ್ವಜನಿಕ ಆಡಳಿತವನ್ನು ರಾಜಕೀಯ ಪರಿಸರದಿಂದ ಪ್ರತ್ಯೇಕಿಸಿ ಅಧ್ಯಯನ ಮಾಡುವುದ ಅಸಾಧ್ಯ. ಹೀಗೆ ಆಯಾ ದೇಶದ ರಾಜಕೀಯ ಸಂಸ್ಕೃತಿಯು ಅಲ್ಲಿಯ ಆಡಳಿತ ವ್ಯವಸ್ಥೆಯ ರಚನೆ ಮತ್ತು ಕಾರ್ಯಗಳನ್ನು ನಿರ್ಧರಿಸುತ್ತದೆ.

### 3.3.2 ಆರ್ಥಿಕ ಪರಿಸರ ಮತ್ತು ಸಾರ್ವಜನಿಕ ಆಡಳಿತ

ಆರ್ಥಿಕ ಪರಿಸರವು ಸಾರ್ವಜನಿಕ ಆಡಳಿತದ ಮೇಲೆ ಪ್ರಭಾವ ಬೀರುವ ಒಂದು ಪ್ರಮುಖ ಅಂಶ. ಅದು ಸಾರ್ವಜನಿಕ ಆಡಳಿತದ ಸ್ವರೂಪ, ರಚನೆ ಹಾಗೂ ಕಾರ್ಯಗಳನ್ನು ಬಹು ಮಟ್ಟಿಗೆ ನಿರ್ಧರಿಸುತ್ತದೆ. ರಿಗ್ಸ್‌ರವರ ಪ್ರಕಾರ ಸಾರ್ವಜನಿಕ ಆಡಳಿತದ ಮೇಲೆ ಹೆಚ್ಚು ಪರಿಣಾಮಕಾರಿ ಪ್ರಭಾವ ಬೀರುವ ಅಂಶವೆಂದರೆ ಆರ್ಥಿಕ ಉತ್ಪಾದಕತೆಯೇ ಆಗಿದೆ. ಆಡಳಿತವು ಆರ್ಥಿಕ ವ್ಯವಸ್ಥೆಯ ಪರೋಕ್ಷ ಅಥವಾ ನೇರ ಪ್ರಭಾವಕ್ಕೆ ಒಳಗಾಗಿರುತ್ತದೆ. ಇವೆರಡರ ಪರಸ್ಪರಾವಲಂಬನೆ ಸ್ಪಷ್ಟವಾಗಿದೆ. ಆಡಳಿತ ವ್ಯವಸ್ಥೆ ಇಲ್ಲದೆ ಆರ್ಥಿಕ ವ್ಯವಸ್ಥೆ

ಬದುಕಲಾರದು. ಹಾಗೆಯೇ ಆಡಳಿತಾತ್ಮಕ ವ್ಯವಸ್ಥೆಯು ಸಹ ಆರ್ಥಿಕತೆಯ ಹಲವಾರು ಬೇಡಿಕೆಗಳಿಂದ ನಿರ್ಧರಿಸಲ್ಪಡುತ್ತದೆ.

ಸಾಮಾನ್ಯವಾಗಿ, ಎಲ್ಲಾ ಅಭಿವೃದ್ಧಿಶೀಲ ದೇಶಗಳಲ್ಲಿ ಆಡಳಿತಾತ್ಮಕ ಸುಧಾರಣೆಗಳು ಸಮಾಜದ ಆರ್ಥಿಕ ಅಭಿವೃದ್ಧಿಗೂ ಮತ್ತು ಆಧುನೀಕರಣಕ್ಕೂ ಅತ್ಯಾವಶ್ಯಕವೆಂದು ಪರಿಗಣಿಸಲಾಗಿದೆ. ಆರ್ಥಿಕ ಯೋಜನೆಗಳನ್ನು ಸರಿಯಾಗಿ ಕಾರ್ಯಗತಗೊಳಿಸುವುದು ಆಡಳಿತದ ಜವಾಬ್ದಾರಿಯಾಗಿದೆ. ಆದುದರಿಂದ ಆರ್ಥಿಕ ಜೀವನವನ್ನು ಆಡಳಿತವು ನಿಯಂತ್ರಿಸುತ್ತದೆ. ಇಂದು ಆಡಳಿತದ ಉದ್ದೇಶ ಕೇವಲ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದಕ್ಕೆ ಸೀಮಿತವಾಗಿಲ್ಲ. ಆಡಳಿತದ ಉದ್ದೇಶವು ವ್ಯಕ್ತಿಯ ಜೀವನದ ಪ್ರತಿಯೊಂದು ಅಂಶದಲ್ಲೂ ಅವನ ಗರಿಷ್ಠ ಪ್ರಮಾಣದ ಕಲ್ಯಾಣವನ್ನು ಸಾಧಿಸುವುದೇ ಆಗಿದೆ. ಹೀಗೆ ಸಾರ್ವಜನಿಕ ಆಡಳಿತವು ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವ ಬೀರುವುದು. ಎಲ್ಲಾ ರಾಷ್ಟ್ರಗಳಲ್ಲೂ ಸಾರ್ವಜನಿಕ ಆಡಳಿತವು ಕೋಟಾ ಮತ್ತು ಲೈಸನ್ಸ್, ವಸ್ತುಗಳ ಬೆಲೆ ನಿಗದಿಪಡಿಸುವುದು, ಅನುಚಿತ ಮತ್ತು ಕಾನೂನು ಬಾಹಿರ ವ್ಯಾಪಾರ ಚಟುವಟಿಕೆಗಳನ್ನು ತಡೆಗಟ್ಟುವುದು, ಆಮದು ವಸ್ತುಗಳನ್ನು ನಿಯಂತ್ರಿಸುವುದು - ಇವೇ ಮುಂತಾದ ವಿಧಾನಗಳ ಮೂಲಕ ದೇಶದ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುತ್ತದೆ. ಹಾಗೆಯೇ, ಆರ್ಥಿಕ ಪರಿಸರ ಗ್ರಾಮೀಣ ಅರ್ಥವ್ಯವಸ್ಥೆ, ಪ್ರಾಥಮಿಕ ವ್ಯವಸಾಯ, ನಿರುದ್ಯೋಗ, ಬಡತನ, ಜನಸಂಖ್ಯೆ ಬೆಳವಣಿಗೆ ಮುಂತಾದವುಗಳು ಸಾರ್ವಜನಿಕ ಆಡಳಿತ ಸ್ವರೂಪವನ್ನು ನಿರ್ಧರಿಸುತ್ತವೆ. ಬಡತನವು, ಜನರನ್ನು ಆಡಳಿತಾಧಿಕಾರಿಗಳೊಂದಿಗೆ ಪ್ರತಿಕ್ರಿಯಿಸುವಾಗ ಸೌಮ್ಯ ಹಾಗೂ ನಮ್ರತೆಯಿಂದ ವರ್ತಿಸುವಂತೆ ಮಾಡುವುದು. ಸಮಾಜದಲ್ಲಿ ನಿರುದ್ಯೋಗ ಸಮಸ್ಯೆಯು ಸರ್ಕಾರದ/ಆಡಳಿತದ ಮೇಲೆ ಹೆಚ್ಚು ಒತ್ತಡ ಹೇರುವುದರಿಂದ ಅಗತ್ಯವಾದುದಕ್ಕಿಂತ ಹೆಚ್ಚು ಸಂಖ್ಯೆಯ ನೌಕರರನ್ನು ಸರ್ಕಾರಿ ವಿವಿಧ ಇಲಾಖೆಗಳಲ್ಲಿ ನೇಮಕ ಮಾಡುವಂತೆ ಪ್ರಭಾವ ಬೀರುವುದು. ಭಾರತದಂತಹ ರಾಷ್ಟ್ರಗಳಲ್ಲಿ ನಾಗರಿಕರಿಗೆ ಜೀವನಾವಶ್ಯಕ ವಸ್ತುಗಳನ್ನು ವಿತರಿಸುವಾಗ, ವಸ್ತುಗಳ ಅಭಾವದಿಂದಾಗಿ ಆಡಳಿತಾಧಿಕಾರಿಯು ಅನೇಕ ಒತ್ತಡಗಳಿಗೆ ಮಣಿಯ ಬೇಕಾದ ಪರಿಸ್ಥಿತಿಯಲ್ಲಿ ಅಧಿಕಾರಿಯು ತನ್ನ ವಿವೇಚನಾಧಿಕಾರವನ್ನು ಚಲಾಯಿಸಬೇಕಾಗುವುದು. ಇದು ಆಡಳಿತದಲ್ಲಿ ಭ್ರಷ್ಟಾಚಾರಕ್ಕೂ ಮತ್ತು ರಾಜಕೀಯ ಹಸ್ತಕ್ಷೇಪಕ್ಕೂ ಹಾದಿ ಮಾಡಿಕೊಡುವುದು.

ಹೀಗೆ ಆರ್ಥಿಕ ಪರಿಸರದಿಂದಾಗಿ ಆಡಳಿತದಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶವಾಗುವುದನ್ನು ನಾವು ದಿನ ನಿತ್ಯ ಕಾಣುತ್ತೇವೆ. ಹಣಕಾಸಿನ ಲಭ್ಯತೆಯು ರಾಷ್ಟ್ರದ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವ ಬೀರುವ ಒಂದು ಬಲವಾದ ಅಂಶವಾಗಿದೆ. ಯೋಜನಾ ನೀತಿಯನ್ನು ರೂಪಿಸುವುದು, ಸಂಪನ್ಮೂಲಗಳನ್ನು ಕ್ರೋಡೀಕರಿಸುವುದು ಮತ್ತು ಅವುಗಳನ್ನು ವ್ಯವಸ್ಥಿತವಾಗಿ ಬಳಸುವುದು ಸಾರ್ವಜನಿಕ ಆಡಳಿತದ ಮುಖ್ಯ ಕರ್ತವ್ಯವಾಗಿರುತ್ತದೆ. ಒಂದು ದೇಶದ ಆರ್ಥಿಕ ಕಲ್ಯಾಣವು ದಕ್ಷ ಸಾರ್ವಜನಿಕ ಆಡಳಿತವನ್ನು ಅವಲಂಬಿಸಿರುತ್ತದೆ.

**ನಿಮ್ಮ ಪ್ರಗತಿ ಪರಿಶೀಲನೆ-2**

ಸೂಚನೆ : i) ಕೆಳಗೆ ಕೊಟ್ಟಿರುವ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿರಿ.

ii) ನಿಮ್ಮ ಉತ್ತರವನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ.

1) ಸಾರ್ವಜನಿಕ ಆಡಳಿತದ ಮೇಲೆ ರಾಜಕೀಯ ಪರಿಸರದ ಪ್ರಭಾವವನ್ನು ಕುರಿತು ವಿವರಿಸಿ.

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

2) ಸಾರ್ವಜನಿಕ ಆಡಳಿತವು ಆರ್ಥಿಕ ಪರಿಸರದಿಂದ ಹೇಗೆ ಪ್ರಭಾವಿತವಾಗುತ್ತದೆಂಬುದನ್ನು ಚರ್ಚಿಸಿ.

.............................................................................................................

.............................................................................................................

.............................................................................................................

.............................................................................................................

.............................................................................................................

### 3.3.3 ಸಾಮಾಜಿಕ ಪರಿಸರ ಮತ್ತು ಸಾರ್ವಜನಿಕ ಆಡಳಿತ

ಯಾವುದೇ ಒಂದು ಸಮುದಾಯದ ಸಾಮಾಜಿಕ ಪರಿಸರ ಅಥವಾ ವಾತಾವರಣವು ಅದು ಹೊಂದಿರುವ ಸಂಘ ಸಂಸ್ಥೆಗಳ ಸ್ವರೂಪ, ಮತಧರ್ಮ ಹಾಗೂ ಜಾತಿಯ ಸಂಬಂಧಗಳು, ಐತಿಹಾಸಿಕ ಪರಂಪರೆ, ರೀತಿ-ರಿವಾಜುಗಳು, ನಂಬಿಕೆಗಳು, ಆದರ್ಶಗಳು ಮುಂತಾದವುಗಳನ್ನು ಆಧರಿಸಿರುತ್ತದೆ. ಈ ಎಲ್ಲಾ ಅಂಶಗಳು ಸಾರ್ವಜನಿಕ ಆಡಳಿತದ ಮೇಲೆ ಪ್ರಭಾವ ಬೀರುತ್ತವೆ. ಇದಕ್ಕೆ ಕಾರಣವೆಂದರೆ, ಮಾನವನು ಸಮಾಜದ ಅವಿಭಾಜ್ಯ ಅಂಗ. ಅಲ್ಲದೆ ವ್ಯಕ್ತಿಯು ಸಾರ್ವಜನಿಕ ಸೇವೆಗೆ ಸೇರುವ ಮುನ್ನವೇ ಸಾಮಾಜಿಕ ಮೌಲ್ಯಗಳನ್ನು ರೂಢಿಸಿಕೊಂಡಿರುತ್ತಾನೆ. ಅವನ ದೃಷ್ಟಿ ಕೋನ ಮತ್ತು ಮನೋಭಾವನೆಗಳು ಅವನು ಬದುಕಿ ಬಾಳುವ ಸಾಮಾಜಿಕ ಪರಿಸರದ ಪ್ರಭಾವದಿಂದ ರೂಪುಗೊಂಡಿರುತ್ತವೆ. ಹೀಗಾಗಿ ಸಾರ್ವಜನಿಕ ಆಡಳಿತದಲ್ಲಿನ ಅವನ ನಿರ್ಣಯಗಳು ಈ ಅಂಶಗಳಿಂದ ಮುಕ್ತವಾಗಿರಲು ಸಾಧ್ಯವಿಲ್ಲ. ಆಡಳಿತಗಾರನನ್ನು ಅವನ ಸಾಮಾಜಿಕ ಪರಿಸರದಿಂದ ಪ್ರತ್ಯೇಕಿಸಲಾಗದು. ಅವನು ಪರಿಸರದ ಕೂಸು. ಸಾಮಾನ್ಯವಾಗಿ ಆಡಳಿತದಲ್ಲಿ ಗ್ರಾಮಾಂತರ ಪ್ರದೇಶದಿಂದ ಬಂದಿರುವ ವ್ಯಕ್ತಿ ತನ್ನ ಮೂಲದ ಪ್ರಭಾವವನ್ನೇ ಹೊಂದಿದವನಾಗಿರುವುದರಿಂದ ಅವನ ವಿವೇಚನೆಯ ಮೇಲೆ ಇವು ಹೆಚ್ಚು ಪ್ರಭಾವ ಬೀರುತ್ತವೆ. ನಗರದ ವ್ಯಕ್ತಿಗೂ ಇದು ಅನ್ವಯಿಸುತ್ತದೆ. ಇದು ಅವರ ವಿಚಾರಧಾರೆಗೂ ಅನ್ವಯಿಸುತ್ತದೆ. ಆದುದರಿಂದ ಆಡಳಿತಾಗಾರನ ಪ್ರತಿಕ್ರಿಯೆ ಹಾಗೂ ವರ್ತನೆಯನ್ನು ಅವನ ಸಾಮಾಜಿಕ ಹಿನ್ನಲೆಯ ಮೌಲ್ಯ ಹಾಗೂ ಮನೋಭಾವಗಳಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ಅಧ್ಯಯನ ಮಾಡುವುದು ಅಸಾಧ್ಯವೆಂದು ಹೇಳಬಹುದು. ಸಮಾಜದಲ್ಲಿ ಅವನು ಹೊಂದಿರುವ ಸ್ನೇಹ, ಗುಂಪು ಹಾಗೂ ಪರಿಸರ ಮತ್ತು ಸಂಪರ್ಕ ಎಲ್ಲ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದು ಅವಶ್ಯಕವಾಗಿದೆ. ಆದಾಗ್ಯೂ ನಾಗರಿಕ ಸೇವಾ ವರ್ಗವು, ಆಡಳಿತ ತರಬೇತಿ ಕೇಂದ್ರಗಳಲ್ಲಿ ಆಡಳಿತದ ರೀತಿ ನೀತಿ ಮತ್ತು ಮೌಲ್ಯಗಳ ಬಗ್ಗೆ ತರಬೇತಿ ನೀಡುವುದರಿಂದ ಅವರು ಸ್ವಲ್ಪ ಮಟ್ಟಿಗೆ ತಮ್ಮ ಮೂಲ ಸಮಾಜದ ಮೌಲ್ಯಗಳಿಂದ ಬದಲಾಗಿರಬಹುದು. ಎಷ್ಟರಮಟ್ಟಿಗೆ ಬದಲಾಗಿರಬಹುದು ಎಂಬ ಅಂಶವು ಆಡಳಿತ ತರಬೇತಿ ಮತ್ತು ಆಡಳಿತ ರಚನಾಂಗವು ಮೂಡಿಸುವ ಅಥವಾ ರೂಪಿಸುವ ವಿಶೇಷ ಮೌಲ್ಯಗಳನ್ನು ಅವಲಂಬಿಸಿರುತ್ತದೆ.

**ಸಂಘ-ಸಂಸ್ಥೆಗಳು:** ಪ್ರತಿಯೊಂದು ಅಭಿವೃದ್ಧಿ ಹೊಂದಿದ ಸಮಾಜದಲ್ಲಿ ವಿವಿಧ ಪ್ರಕಾರದ ಸ್ವಯಂ ಸೇವಾ ಸಂಘಸಂಸ್ಥೆಗಳು ಸ್ಥಾಪಿತವಾಗಿರುತ್ತವೆ. ಉದಾ: ಕಾರ್ಮಿಕರ ಸಂಘ, ಧಾರ್ಮಿಕ ಮತ್ತು ವೃತ್ತಿನಿರತ ಸಂಸ್ಥೆಗಳು, ಕಲೆ ಮತ್ತು ಸಾಂಸ್ಕೃತಿಕ ಗುಂಪುಗಳು ಇತ್ಯಾದಿ, ಇವುಗಳು ತಮ್ಮದೇ ಆದ ಗೊತ್ತು ಗುರಿಗಳನ್ನು ಹಾಗೂ ಧ್ಯೇಯಗಳನ್ನು ಹೊಂದಿರುತ್ತವೆ. ಇವುಗಳ ಹಿತಾಸಕ್ತಿ ನೇರವಾಗಿ ಆಡಳಿತಕ್ಕೆ ಸಂಬಂಧಿಸಿರುತ್ತದೆ. ಆಡಳಿತ ಯೋಜನೆ ಮತ್ತು ಧೋರಣೆಗಳನ್ನು ರೂಪಿಸುವಾಗ ಇವುಗಳ ಪ್ರಭಾವವನ್ನು ಕಡೆಗಾಣಿಸುವಂತಿಲ್ಲ. ಸಂಘ-ಸಂಸ್ಥೆಗಳು ತಮ್ಮ ಸದಸ್ಯರ ಅಭಿಪ್ರಾಯ ಹಾಗೂ ನಿಲುವನ್ನು ಸಾರ್ವಜನಿಕ ಅಧಿಕಾರಿಗಳ ಮುಂದಿಡುತ್ತಾರೆ ಹಾಗೂ ಪ್ರಚುರಪಡಿಸುತ್ತಾರೆ. ಒಂದು ವಿಶಿಷ್ಟ ಪ್ರಕರಣದ ಸಮಸ್ಯೆ ಹಾಗೂ ಕಾರ್ಯಕ್ರಮಗಳ ಬಗ್ಗೆ ತಮ್ಮ ಅಭಿಪ್ರಾಯ ಹಾಗೂ ಮನದಾಳವನ್ನು ಸಾರ್ವಜನಿಕ ಅಧಿಕಾರಿಗಳ ಮುಂದೆ ಪ್ರಸ್ತುತಪಡಿಸುತ್ತಾರೆ. ಇದರಿಂದ ಸರ್ಕಾರದ ಆಡಳಿತ ಯಂತ್ರಕ್ಕೂ ಸಹ ಅನುಕೂಲ, ಏಕೆಂದರೆ, ಈ ಸಂಘಸಂಸ್ಥೆಗಳು ಜನತೆಯೊಂದಿಗೆ ನೇರ ಸಂಪರ್ಕ ಹೊಂದಿರುವುದರಿಂದ ಜನಾಭಿಪ್ರಾಯವನ್ನು ನಿಲುವನ್ನು ಹಾಗೂ ಸರ್ಕಾರಿ

ಕಾರ್ಯಕ್ರಮಗಳ ಬಗೆಗಿನ ಅಭಿಪ್ರಾಯವನ್ನು ಸರ್ಕಾರ ತಿಳಿದುಕೊಳ್ಳಬಹುದು ಮತ್ತು ಸರ್ಕಾರ ಈ ಸಮೂಹ ಮಾಧ್ಯಮದ ಮೂಲಕ ತನ್ನ ಕಾರ್ಯಕ್ರಮದ ರೂಪುರೇಷಗಳನ್ನು ತಿಳಿಸಿ ಜನತೆ ಆಡಳಿತದಲ್ಲಿ ಸಹಭಾಗಿಯಾಗುವಂತೆ ನೋಡಿಕೊಳ್ಳಬಹುದು. ಈ ಗುಂಪುಗಳ ಒತ್ತಡದಿಂದಾಗಿ ಅಧಿಕಾರಿ ವರ್ಗ ಯಾವಾಗಲೂ ಎಚ್ಚೆತ್ತು ದಕ್ಷತೆಯಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಇಲ್ಲವಾದಲ್ಲಿ ಜನತೆ ಹಾಗೂ ಗುಂಪುಗಳ ಆಕ್ರೋಶಕ್ಕೆ ಬಲಿಯಾಗಬೇಕಾಗುತ್ತದೆ. ಹೀಗೆ ಈ ಸಮೂಹ ಮಾಧ್ಯಮಗಳು ಕೂಡ ಸಾರ್ವಜನಿಕ ಆಡಳಿತದ ಮೇಲೆ ಗಣನೀಯವಾದ ಪ್ರಭಾವ ಬೀರುತ್ತವೆ ಹಾಗೂ ಇವುಗಳ ಬೇಡಿಕೆ ಮತ್ತು ಒತ್ತಾಯಗಳಿಗೆ ಅನುಗುಣವಾಗಿ ಸರ್ಕಾರಿ ಧೋರಣೆಗಳು ಬದಲಾವಣೆಯಾಗುವುದನ್ನು ಕೂಡ ನಾವು ಗಮನಿಸಬಹುದು.

ಅಮೆರಿಕಾದಲ್ಲಿ ಈ ಸ್ವಯಂ ಸೇವಾಸಂಸ್ಥೆಗಳು ಹಾಗೂ ಹಿತಾಸಕ್ತಿ ಗುಂಪುಗಳು ಸರ್ಕಾರಿ ಆಡಳಿತದ ಮೇಲೆ ಗಮನಾರ್ಹವಾದ ಪ್ರಭಾವವನ್ನು ಬೀರಿವೆ. ಅಲ್ಲಿನ ಅರೆ-ಸರ್ಕಾರಿ ನಿಗಮಗಳು, ಮಹಿಳಾ ಸಂಘಟನೆಗಳು, ಮಾನವ ಹಕ್ಕುಗಳ ಸಂಘಟನೆಗಳು, ವಿಶ್ವವಿದ್ಯಾನಿಲಯಗಳು, ಕಾರ್ಮಿಕ ಸಂಘಟನೆಗಳು ಸರ್ಕಾರಿ ಆಡಳಿತದ ಮೇಲೆ ಅತ್ಯಂತ ವ್ಯಾಪಕವಾಗಿ ಪರಿಣಾಮ ಬೀರಿವೆ. ಭಾರತದಲ್ಲಿ ರೈತ ಸಂಘ, ಕಾರ್ಮಿಕ ಸಂಘ, ಚೇಂಬರ್ಸ್ ಆಫ್ ಕಾಮರ್ಸ್ ವಿದ್ಯಾರ್ಥಿ ಸಂಘ, ಪತ್ರಿಕಾ ಗುಂಪು ಇತ್ಯಾದಿಗಳು ಆಡಳಿತದ ಮೇಲೆ ಗಮನಾರ್ಹವಾದ ಪ್ರಭಾವ ಬೀರಿವೆ. ಇವು ಸಂಬಂಧಪಟ್ಟ ವಿಷಯಗಳ ಬಗ್ಗೆ ಸರ್ಕಾರದ ಮೇಲೆ ವಿಭಿನ್ನವಾದ ಒತ್ತಡವನ್ನು ತಂದಿರುವ ನಿದರ್ಶನಗಳು ಸಾಕಷ್ಟಿವೆ. ಇವು ಅತ್ಯಂತ ಪ್ರಬಲ ಶಕ್ತಿಗಳಾಗಿದ್ದು ಭಾರತದ ರಾಜಕೀಯ, ಆರ್ಥಿಕ, ಆಡಳಿತ ಕ್ಷೇತ್ರಗಳಲ್ಲಿ ಇವುಗಳ ಪ್ರಭಾವವನ್ನು ನಿರ್ಲಕ್ಷಿಸಲಾಗದು. ಇವುಗಳಲ್ಲಿ ಕೆಲವು ಗುಂಪುಗಳು ಆಡಳಿತದ ಮೇಲೆ ಸಾಕಷ್ಟು ನಿಯಂತ್ರಣ ಹೊಂದಿವೆ.

**ವರ್ಗ ರಚನೆ :** ಸಾರ್ವಜನಿಕ ಆಡಳಿತವು ವಿವಿಧ ವರ್ಗ ಹಾಗೂ ಜಾತಿಗಳ ಪ್ರಭಾವಕ್ಕೂ ಕೂಡ ಒಳಗಾಗಿದೆ ಎಂದು ಹೇಳಬಹುದು. ಪ್ರತಿಯೊಂದು ಸಮಾಜವು ವಿವಿಧ ವರ್ಗಗಳಿಂದ ಕೂಡಿರುತ್ತದೆ. ವರ್ಗಗಳ ನಡುವೆ ಚಲನಾ ಸ್ವಾತಂತ್ರ್ಯವಿದ್ದರೆ ಅದನ್ನು 'ಮುಕ್ತವರ್ಗವ್ಯವಸ್ಥೆ' (Open class system) ಎಂದು ಕರೆಯುತ್ತೇವೆ. ವರ್ಗಗಳ ನಡುವೆ ಚಲನಾ ಸ್ವಾತಂತ್ರ್ಯವಿಲ್ಲದಿದ್ದಾಗ ಅದನ್ನು 'ಮುಚ್ಚಿದ ವರ್ಗ ವ್ಯವಸ್ಥೆ' (closed class system) ಎಂದು ಕರೆಯುತ್ತೇವೆ. ಮುಕ್ತ ವರ್ಗ ವ್ಯವಸ್ಥೆಗೆ ಅಮೆರಿಕ ಉತ್ತಮ ಮಾದರಿಯಾದರೆ, ಭಾರತವು ಮುಚ್ಚಿದ ವರ್ಗ ವ್ಯವಸ್ಥೆಗೆ ಉದಾಹರಣೆಯಾಗಿದೆ. ಈ ವರ್ಗ ವ್ಯವಸ್ಥೆಯ ಸ್ವರೂಪ, ಅಂತರ ವರ್ಗಗಳ ನಡುವಿನ ಸಂಬಂಧ ಸಾರ್ವಜನಿಕ ಆಡಳಿತದ ಮೇಲೆ ಗಮನಾರ್ಹ ಪ್ರಭಾವ ಬೀರುತ್ತವೆ. ಆಡಳಿತ ವರ್ಗದ ನೇಮಕಾತಿ, ಬಡ್ತಿ ಪದ್ಧತಿ, ಆಡಳಿತ ಇಲಾಖೆಗಳಲ್ಲಿರುವ ವಿವಿಧ ಸ್ಥಾನಗಳಲ್ಲಿರುವ ಅಧಿಕಾರಿಗಳ ನಡುವಿನ ಸಂಬಂಧ, ಆಡಳಿತಶಾಹಿ ವ್ಯವಸ್ಥೆಯ ಸಂಸ್ಕೃತಿ ಮತ್ತು ಸಾರ್ವಜನಿಕರೊಡನೆ ಇರುವ ಸಂಬಂಧ ಈ ಎಲ್ಲಾ ಅಂಶಗಳು ಸಮಾಜದಲ್ಲಿರುವ ಸ್ತರವಿನ್ಯಾಸವನ್ನು ಪ್ರತಿಬಿಂಬಿಸುತ್ತವೆ. ಮುಚ್ಚಿದ ವರ್ಗ ವ್ಯವಸ್ಥೆ, ಜಾತಿ, ಪಂಗಡ, ಕೋಮು, ಭಾಷೆ, ಗುಂಪು, ಮನೋಭಾವ ಇತ್ಯಾದಿ ಅಂಶಗಳು ಆಡಳಿತದ ಮೇಲೆ ಪ್ರಭಾವ ಬೀರುತ್ತವೆ. ಜಾತಿಯತೆ, ಗುಂಪುಗಾರಿಕೆ, ಮತಾಭಿಮಾನಗಳಿಂದ ಕೂಡಿದ ವರ್ಗ ವ್ಯವಸ್ಥೆಯು ಆಡಳಿತದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ.

ಸಮಾಜಿಕ ಪರಿಸರದ ಇತರ ಕೆಲವು ಅಂಶಗಳಾದ ಸಂಪ್ರದಾಯಗಳು, ಬದಲಾವಣೆಯ ಬಗೆಗೆ ಸಮಾಜದ ಪ್ರತಿಕ್ರಿಯೆ, ಸುಧಾರಣೆ, ಮತಧರ್ಮ, ಭಾಷೆ, ಕುಟುಂಬ ಬಾಂಧವ್ಯ, ಸಂವಹನ ಮುಂತಾದವು ಸಾರ್ಜನಿಕ ಆಡಳಿತದ ಮೇಲೆ ಪರಿಣಾಮ ಉಂಟು ಮಾಡುತ್ತವೆ. ರಿಗ್ಸ್ ಅವರು ಹೇಳುವಂತೆ ಕುಟುಂಬಗಳು, ಒಳ ಪಂಗಡಗಳು, ಸಾಮಾಜಿಕ ವರ್ಗಗಳು, ಸಂಘ ಸಂಸ್ಥೆಗಳು, ವಿವಿಧ ಗುಂಪುಗಳು ಮುಂತಾದವುಗಳನ್ನು ಒಳಗೊಂಡಿರುವ ಸಾಮಾಜಿಕ ಪರಿಸರವು ಸಾರ್ವಜನಿಕ ಆಡಳಿತದ ಮೇಲೆ ಪ್ರಭಾವ ಬೀರುತ್ತವೆ. ಏಕೆಂದರೆ ಈ ಅಂಶಗಳು ಅಧಿಕಾರಿಗಳ ಆಯ್ಕೆ, ಅವರ ಸಾಮಾಜೀಕರಣ, ಬಡ್ತಿ ಮತ್ತು ಚಲನವಲನಗಳ ಮೇಲೆ ಪ್ರಭಾವ ಬೀರುತ್ತವೆ. ಅಲ್ಲದೆ ಸಂಸ್ಕೃತಿ ಹಾಗೂ ಸಂಕೇತಗಳು ಆಡಳಿತ ಮೌಲ್ಯಗಳಾದಂತಹ ಸಮಾನತೆ ಹಾಗೂ ಸರ್ವ ಸಮ್ಮತಿಗಳನ್ನು ರೂಪಿಸುವಲ್ಲಿ ಪ್ರಭಾವಿ ಪಾತ್ರವನ್ನೂ ವಹಿಸುತ್ತವೆ. ಈ ಬಗೆಯ ಒತ್ತಡಗಳಿಗೆ ಗುರಿಯಾದ ಅಧಿಕಾರಿಗಳು ಕೆಲವೊಮ್ಮೆ ಸಂಕುಚಿತ ಪ್ರವೃತ್ತಿಯ ಮನೋಭಾವನೆಯನ್ನು ಬಳಸಿಕೊಳ್ಳುತ್ತಾರೆ ಉದಾ: ನೈಜೀರಿಯಾದಲ್ಲಿ ವಿಸ್ತೃತ ಕುಟುಂಬಗಳ ಬಗೆಗೆ ಹೊಂದಿದ ಸ್ವಜನ ಪಕ್ಷಪಾತದ

ಭಾವನೆಗಳಿಂದಾಗಿ ಬಂಧುಗಳಿಗೆ ರಾಜಕೀಯ ರಕ್ಷಣೆ ನೀಡುವ, ಅವರಿಗೆ ಆಡಳಿತ ಒಲವು ತೋರುವ ಸಮಸ್ಯೆಗಳು ಎದುರಾದುದ್ದನ್ನು ಸ್ಮರಿಸಬಹುದು. ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ನೈಜಿರಿಯಾಕ್ಕೆ ಮಾತ್ರ ಸೀಮಿತವಾಗಿಲ್ಲ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ನಾವು ಇವುಗಳನ್ನು ಕಾಣುತ್ತೇವೆ. ಭಾರತೀಯ ಸಮಾಜವು ಲಂಬಾತ್ಮಕವಾಗಿ ಮತ್ತು ಸಮಾನಾಂತರವಾಗಿ ವಿಭಜನೆ ಹೊಂದಿದೆ. ಹಿಂದೂ ಧರ್ಮವು ಪ್ರಮುಖವಾಗಿ ನಾಲ್ಕು ಜಾತಿಗಳಾಗಿ ಮತ್ತು ಪ್ರತಿಯೊಂದು ಜಾತಿ ಹಲವಾರು ಉಪಜಾತಿಗಳಾಗಿ ವಿಭಜನೆ ಹೊಂದಿದೆ. ಜಾತಿ ಪದ್ಧತಿಯು ಕ್ರಮೇಣವಾಗಿ ತನ್ನ ಮೂಲೋದ್ದೇಶವನ್ನು ಕಳೆದುಕೊಳ್ಳುತ್ತಿದ್ದರೂ ವಯಸ್ಕ ಮತದಾನ ಪದ್ಧತಿಯಿಂದಾಗಿ ಅದು ಹೊಸ ಅರ್ಥವನ್ನು ಪಡೆದು, ಕೆಲವು ಇತರ ಉದ್ದೇಶಗಳನ್ನು ಈಡೇರಿಸುತ್ತಿದೆ; ರಾಜಕೀಯ ಉದ್ದೇಶಗಳ ಸಾಧನವಾಗುತ್ತಿದೆ. ಮೀಸಲಾತಿ ರೂಪದಲ್ಲಿ ಅದು ಮುಂದುವರಿದಿದೆ. ಆಡಳಿತಾಧಿಕಾರಿಗಳೂ ಅದರ ಅಹಿತಕರ ಪ್ರಭಾವಕ್ಕೊಳಗಾಗಿದ್ದಾರೆ.

ಕೆಲವೊಂದು ರಾಷ್ಟ್ರಗಳಲ್ಲಿ ರಾಜಕೀಯ ಪಕ್ಷಗಳ ಸಾಮಾಜಿಕ ಹಿನ್ನೆಲೆ ಕೂಡ ರಾಜಕಾರಣ ಮತ್ತು ಆಡಳಿತದ ಮೇಲೆ ಪ್ರಭಾವ ಬೀರುತ್ತದೆ ಎಂದು ಹೇಳಬಹುದು. ರಾಜಕೀಯ ಪಕ್ಷಗಳ ಕಾರ್ಯ ನಿರ್ವಹಣೆಯ ರಚನೆಯು ಪ್ರಮುಖ ಜಾತಿ ಕೋಮುಗಳಿಂದ ಆಗಿದೆ ಎನ್ನಬಹುದು. ಉದಾ: ಮುಸ್ಲಿಮ್ ಲೀಗ್ ಮುಸಲ್ಮಾರ ಪಕ್ಷವಾಗಿದ್ದರೆ, ಭಾರತೀಯ ಜನತಾಪಕ್ಷ ಹಿಂದುಗಳ ಪಕ್ಷವಾಗಿದೆ. ಪ್ರಾದೇಶಿಕ ನಿಲುವನ್ನು ಹೊಂದಿರುವ ಡಿ.ಎಂ.ಕೆ. ಮತ್ತು ಎ.ಐ.ಡಿ.ಎಂ.ಕೆ ತಮಿಳು ನಾಡಿನಲ್ಲಿರುವ ಪ್ರಬಲ ಪಕ್ಷಗಳಾಗಿವೆ. ತೆಲುಗು ದೇಶಂ, ಆಂದ್ರ ಪ್ರದೇಶದಲ್ಲಿಯ ಪ್ರಬಲ ಕೋಮು ಪಕ್ಷವಾಗಿದೆ. 'ಕಮ್ಮಾ' ಜನಾಂಗದವರೇ ಈ ಪಕ್ಷದ ಸಮರ್ಥರಾಗಿದ್ದಾರೆ. ಹೀಗೆ ವಿವಿಧ ಜಾತಿಗಳು ಹಾಗೂ ಸಮುದಾಯಗಳು ಪ್ರಬಲ ಅಧಿಕಾರ ಹೊಂದಿದ ಅನೇಕ ಪಕ್ಷಗಳ ಉದಾಹರಣೆ ನೀಡಬಹುದು.

**ನಿಮ್ಮ ಪ್ರಗತಿ ಪರಿಶೀಲನೆ-3**

ಸೂಚನೆ : i) ಕೆಳಗಿನ ಸ್ಥಳವನ್ನು ನಿಮ್ಮ ಉತ್ತರಕ್ಕೆ ಬಳಸಿ

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ.

1) ಸಾರ್ವಜನಿಕ ಆಡಳಿತದ ಮೇಲೆ ಸಾಮಾಜಿಕ ಅಂಶಗಳ ಪ್ರಭಾವವನ್ನು ವಿವರಿಸಿ.

........................................................................................................................

........................................................................................................................

........................................................................................................................

........................................................................................................................

........................................................................................................................

........................................................................................................................

### 3.3.4 ಸಾಂಸ್ಕೃತಿಕ ಪರಿಸರ ಮತ್ತು ಸಾರ್ವಜನಿಕ ಆಡಳಿತ

ಸಾರ್ವಜನಿಕ ಆಡಳಿತವು ಆಯಾ ಸಂಸ್ಕೃತಿಯ ವಾತಾವರಣದ ಹಿನ್ನೆಲೆಯಲ್ಲಿ ಆದರದೇ ಆದ ಲಕ್ಷಣಗಳನ್ನು ಹೊಂದಿರುತ್ತದೆ. ಆಡಳಿತಾತ್ಮಕ ಮೌಲ್ಯಗಳನ್ನು ರೂಪಿಸುವಲ್ಲಿ ಸಂಸ್ಕೃತಿಯ ಪರಿಸರದ ಪ್ರಭಾವವನ್ನು ಕಡೆಗಣಿಸಲಾಗದು ಎಂದು ರಮೇಶ ಅರೋರಾ ತಮ್ಮ ಅಧ್ಯಯನದಲ್ಲಿ ತಿಳಿಸಿದ್ದಾರೆ. ಪ್ರತಿಯೊಂದು ಸಮಾಜವು ತನ್ನದೇ ಆದ ಸಂಸ್ಕೃತಿಯ ಹಿನ್ನೆಲೆಯಲ್ಲಿ ರೂಪುಗೊಂಡಿರುತ್ತದೆ. ಆಡಳಿತ ಶಾಹಿಯು ಕೂಡ ಸಮಾಜದ ಇತರ ಸಂಸ್ಥೆಗಳಂತೆ ಸಂಸ್ಕೃತಿಯ ಪ್ರತಿರೂಪವಾಗಿದೆ. ಬ್ರಿಟಿಷರ ಆಡಳಿತ ಸ್ವರೂಪವು ದಕ್ಷತೆ, ನಿಷ್ಪಕ್ಷಪಾತತೆ, ರಾಜಕೀಯ ತಾಟಸ್ಥ್ಯತೆ ಮತ್ತು ಋಜುತ್ವದ (integrity) ಗುಣಗಳಿಂದ ಕೂಡಿದ್ದರೂ ಅದನ್ನೇ ನಾವು ಭಾರತದ ಆಡಳಿತದಲ್ಲಿ ಕಾಣಲಾರೆವು. ಇದು ಪರಂಪರೆ ಮತ್ತು ಸಂಸ್ಕೃತಿಗಳ ಅಭಾವಗಳನ್ನು ಎತ್ತಿ ತೋರಿಸುತ್ತದೆ.

ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕೂಡ ಸಾರ್ವಜನಿಕ ಆಡಳಿತವು ಏಕರೂಪವಾಗಿಲ್ಲ. ಇದನ್ನು ನಾವು ಬ್ರಿಟನ್ ಹಾಗೂ ಜರ್ಮನಿಯ ಆಡಳಿತ ವಿಧಾನಗಳಿಂದ ತಿಳಿಯಬಹುದಾಗಿದೆ. ಏಕೆಂದರೆ ಬ್ರಿಟನ್ನಿನಲ್ಲಿ ಆಡಳಿತ ಧೋರಣೆಗಳು ವ್ಯಾಪಾರಿ ಮನೋಭಾವನೆಗಳಿಂದ ಅಧಿಕ ಪ್ರಭಾವಕ್ಕೆ ಒಳಗಾಗಿದ್ದರೆ, ಜರ್ಮನಿಯಲ್ಲಿ ಅದು ಅಧಿಕಾರಿ ಸಂಸ್ಥೆಗಳ ಪ್ರಭಾವಕ್ಕೆ ಗುರಿಯಾಗಿದೆ. ಇದು ಜರ್ಮನೀಯರ ಸಂಸ್ಕೃತಿಯ ಲಕ್ಷಣವಾಗಿದೆ.

ವಿಚಾರ ಮತ್ತು ಮನೋಭಾವದ ಪ್ರವೃತ್ತಿಗಳು ಸಾರ್ವಜನಿಕ ಆಡಳಿತದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತವೆ. ಅಮೇರಿಕಾ, ಜಪಾನ್ ಮತ್ತು ಜರ್ಮನಿಗಳಂತಹ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಆಡಳಿತದ ವರ್ತನೆಯನ್ನು ನಿಯಂತ್ರಿಸುವ ಒಂದು ಅಲಿಖಿತ ನಿಯಮ ಅಥವಾ ಸಾಧನವೆಂದರೆ ಅಲ್ಲಿಯ ಆಡಳಿತದಲ್ಲಿ 'ಶಿಸ್ತು' (discipline) ಶ್ರಮಭರಿತ ಕಾರ್ಯ (Hard Work) ಕಾಲಕ್ಕೆ ನೀಡುವ ಮಹತ್ವ (Time Conscionsnees) ಎನ್ನಬಹುದು. ಇಂತಹ ಸ್ವಭಾವ ಅವರಿಗೆ ರೂಢಿಗತವಾಗಿದ್ದರಿಂದ ಅವರಲ್ಲಿ ಹೆಚ್ಚು ಉದ್ಯೋಗ ತೃಪ್ತಿ ಇದ್ದು ಹಾಗೂ ಅವರು ಚೈತನ್ಯ ಶೀಲರಾಗಿದ್ದು ಬಹುಬೇಗನೆ ತಮ್ಮ ರಾಷ್ಟ್ರವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ದರು. ಇದಕ್ಕೆ ವ್ಯತಿರಿಕ್ತವಾಗಿ ಭಾರತದಲ್ಲಿ ಜನತೆ ಕೆಲವು ಜಾತಿ ಅಥವಾ ಕೋಮು ಹೊರತುಪಡಿಸಿ, ಹೆಚ್ಚಿನ ಸಂಖ್ಯೆಯವರು ವಿಶ್ರಾಂತಿ ಪ್ರಿಯರಾಗಿದ್ದಾರೆ. ನಮ್ಮಲ್ಲಿ ಬಹು ಸಂಖ್ಯಾತ ನೌಕರರು ಕುಂಟು ನೆಪ ಮಾಡಿ ವಿಶ್ರಾಂತಿ ಪಡೆಯಲು ಇಚ್ಛಿಸುತ್ತಾರೆ. ಕಛೇರಿಗೆ ತಡವಾಗಿ ಬರುವುದು, ಸರ್ಕಾರಿ ವಾಹನಗಳನ್ನು ಗೃಹ ಕಾರ್ಯಕ್ಕಾಗಿ ಬಳಸುವುದು ಇತ್ಯಾದಿ ಸಂಗತಿಗಳು ನಮ್ಮ ಆಡಳಿತ ಸಂಸ್ಕೃತಿಯ ಸಾಮಾನ್ಯ ಅಂಶಗಳಾಗಿವೆ. ಪಾಶ್ಚಿಮಾತ್ಯರು ಕಾಲಕ್ಕೆ ಮಹತ್ವ ನೀಡುತ್ತಾರೆ. ಆದರೆ ನಾವು ಭಿನ್ನವಾದ ಮನೋಭಾವನೆಯನ್ನು ಹೊಂದಿದ್ದು ಆಡಳಿತಾತ್ಮಕ ಗುರಿಗಳನ್ನು ಸಮರ್ಥವಾಗಿ ಕಾಲಕ್ಕೆ ತಕ್ಕಂತೆ ಸಾಧಿಸುವುದು ಆಗಿಲ್ಲ. ಇದರಿಂದ ಯೋಜನೆಯ ಕಾರ್ಯಕ್ರಮದ ವೆಚ್ಚದಲ್ಲಿ ಹೆಚ್ಚಳವಾಗಿ ಖಜಾನೆಯ ಮೇಲೆ ಹೆಚ್ಚು ಭಾರ ಬೀಳುವುದು. ಈ ರೀತಿ ನಮ್ಮ ಆಡಳಿತವು ನಮ್ಮ ಆಡಳಿತಗಾರರ ಸಂಸ್ಕೃತಿ, ಮನೋಭಾವ, ನಿರ್ಲಕ್ಷತೆ, ಕಾರ್ಯನಿರ್ವಹಣಾ ಪ್ರವೃತ್ತಿಯನ್ನು ಸೂಚಿಸುತ್ತದೆ.

ಈ ಮೇಲಿನ ಉದಾಹರಣೆಗಳಿಂದ ಸಂಸ್ಕೃತಿ ಹಾಗೂ ಸಾರ್ವಜನಿಕ ಆಡಳಿತಗಳಲ್ಲಿಯ ಸಂಬಂಧ ಗೋಚರವಾಗುತ್ತದೆ. **ಗೈ.ಪೀಟರ್ಸ್ (Guy** Peters) ಅವರು ಹೇಳಿಕೆಯಂತೆ ಸಾರ್ವಜನಿಕ ಅಧಿಕಾರಿಗಳು ತಮ್ಮ ಸಮಾಜದ ಹಾಗೂ ಸಂಸ್ಕೃತಿಯ ಮೌಲ್ಯಗಳ ಪ್ರತಿರೂಪಗಳೇ ಆಗಿದ್ದಾರೆ. ಆದರೆ ಇಲ್ಲಿ ಒಂದು ವಿಷಯವನ್ನು ನಾವು ಗಮನಿಸಬೇಕು. ಸಂಸ್ಕೃತಿ ಶಾಶ್ವತವಾಗಿರದೇ ಕಾಲಕಾಲಕ್ಕೆ ಬದಲಾಗುತ್ತದೆ. ಹೀಗಾಗಿ ಸಂಸ್ಕೃತಿ ಮತ್ತು ಆಡಳಿತಗಳ ಮಧ್ಯೆ ಇರುವ ಬಾಂಧವ್ಯಗಳೂ ಬದಲಾಗುತ್ತಲೇ ಇರುತ್ತವೆ. ಇದನ್ನು ನಾವು ವಿಶ್ವದ ಎರಡು ಮಹಾಯುದ್ಧಗಳಿಂದ ಅರಿಯಬಹುದು. ಈ ಯುದ್ಧಗಳಿಂದ ಸರ್ಕಾರಗಳ ಆಡಳಿತ ಪದ್ಧತಿಗಳಲ್ಲಿ ಅಗಾಧ ಪರಿವರ್ತನೆಯಾಗಿರುವುದನ್ನು ಹಾಗೂ ಏಷ್ಯಾ ಹಾಗೂ ಆಫ್ರಿಕಾ ಖಂಡಗಳಲ್ಲಿಯ ಸಾಮಾಜಿಕ ಬದಲಾವಣೆಗಳನ್ನು ಅರಿಯಬಹುದು.

ಆದರೆ ಸಂಸ್ಕೃತಿ ಮತ್ತು ಸಾರ್ವಜನಿಕ ಆಡಳಿತಗಳ ಬಾಂಧವ್ಯ ಏಕಮುಖವಾಗಿಲ್ಲ. ಏಕೆಂದರೆ ಸಾಂಸ್ಕೃತಿಕ ಪರಿಸರ ಆಡಳಿತದ ಮೇಲೆ ಪ್ರಭಾವ ಬೀರಿದಂತೆ, ಸಾರ್ವಜನಿಕ ಆಡಳಿತವು ಸಹ ಸಂಸ್ಕೃತಿ ಮತ್ತು ಸಮಾಜಗಳ ಬದಲಾವಣೆಯಲ್ಲಿ ಅಗಾಧ ಮತ್ತು ಅ ಪಾತ್ರವನ್ನು ನಿರ್ವಹಿಸಿದೆ ಎಂದು ಜಾನ್‌ಗಾಸ್ ಅಭಿಪ್ರಾಯಪಟ್ಟಿದ್ದಾರೆ.

**ನಿಮ್ಮ ಪ್ರಗತಿ ಪರಿಶೀಲನೆ -4**

ಸೂಚನೆ : i) ಕೆಳಗೆ ಕೊಟ್ಟಿರುವ ಸ್ಥಳವನ್ನು ನಿಮ್ಮ ಉತ್ತರಗಳಿಗೆ ಉಪಯೋಗಿಸಿ.

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ.

1) ಸಾರ್ವಜನಿಕ ಆಡಳಿತದ ಮೇಲೆ ಸಾಂಸ್ಕೃತಿಕ ಅಂಶಗಳು ಹೇಗೆ ಪ್ರಭಾವ ಬೀರುತ್ತವೆಂಬುದನ್ನು ಚರ್ಚಿಸಿ.

..............................................................................................................................................

..............................................................................................................................................

..........................................................................................................................................

..........................................................................................................................................

..........................................................................................................................................

..........................................................................................................................................

## 3.4 ಸಾರಾಂಶ

ಈ ಘಟಕದಲ್ಲಿ ನಾವು ಸಾರ್ವಜನಿಕ ಆಡಳಿತದ ಪರಿಸರದ ಅರ್ಥ ಮತ್ತು ಅದರ ಅಧ್ಯಯನದ ಪ್ರಾಮುಖ್ಯತೆಯನ್ನು ಚರ್ಚಿಸಿದ್ದೇವೆ. ಈ ಚರ್ಚೆಯಿಂದ ಸಾರ್ವಜನಿಕ ಆಡಳಿತವು ಹೇಗೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಸರಗಳಿಂದ ಪ್ರಭಾವಿತವಾಗುತ್ತದೆಂಬುದನ್ನು ತಿಳಿದು ಬರುತ್ತದೆ. ಅಲ್ಲದೆ, ಸಾರ್ವಜನಿಕ ಆಡಳಿತವೂ ಸಹ ಸಮಾಜ ಹಾಗೂ ಸಂಸ್ಕೃತಿಯ ಪರಿಸರದ ಮೇಲೆ ಪರಿಣಾಮ ಬೀರುವುದೆಂದು ಸ್ಪಷ್ಟವಾಗಿದೆ. ಸಾರ್ವಜನಿಕ ಆಡಳಿತವನ್ನು ಪ್ರತ್ಯೇಕವಾಗಿ ನೋಡದೆ, ಸಾರ್ವಜನಿಕ ಆಡಳಿತದ ಕಾರ್ಯಾವಿಧಾನವನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುವ ವಿವಿಧ ರಾಜಕೀಯ, ಆರ್ಥಿಕ, ಸಮಾಜಿಕ ಸಂಸ್ಥೆಗಳು ಹಾಗೂ ಸಾಂಸ್ಕೃತಿಕ ಹಿನ್ನಲೆ, ಶಾಸನೀಯ ಹಾಗೂ ಸಂವಿಧಾನಿಕ ಪರಿಸರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

## 3.5 ಕಠಿಣ ಪದಗಳು

ಪರಿಸರ = ಸನ್ನಿವೇಶ, ಸುತ್ತುಮುತ್ತ

ಕೋಮುವಾದ = ಜಾತಿಗೆ ಸಂಬಂಧಿಸಿದ, ಪಂಗಡ

ಸಂಸ್ಕೃತಿ = ಜೀವನ ವಿಧಾನ

## 3.6 ಕೆಲವು ಉಪಯುಕ್ತ ಪುಸ್ತಕಗಳು


ಪ್ರೊ|| ಎಸ್. ಹಾಲಪ್ಪ - ಸಾರ್ವಜನಿಕ ಆಡಳಿತ- ಆಡಳಿತಾತ್ಮಕ ಸಿದ್ಧಾಂತ

ಡಾ|| ಟಿ.ಡಿ. ದೇವೇಗೌಡ- ಸಾರ್ವಜನಿಕ ಆಡಳಿತ

ಡಾ|| ಟಿ.ಡಿ. ದೇವೇಗೌಡ - ಪರಿಸರದ ಅಧ್ಯಯನ

ಅರೋರಾ ಆರ್.ಕೆ - ಕಂಪೇರಿಟವ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್

ರಿಗ್ಸ್ - ಇಕಾಲಜಿ ಆಫ್ ಪಬ್ಲಿಕ್ ಅಡ್ಮಿನಿಸ್ಟ್ರೇಷನ್

ಎಂ.ಪಿ. ಶರ್ಮ - ಪಬ್ಲಿಕ್ ಅಡ್ಮಿನಿಸ್ಟ್ರೇಷನ್

ಫಾಡಿಯ & ಫಾಡಿಯ - ಪಬ್ಲಿಕ್ ಅಡ್ಮಿನಿಸ್ಟ್ರೇಷನ್


## 3.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು ಅಭ್ಯಾಸ

**ನಿಮ್ಮ ಪ್ರಗತಿ ಪರಿಶೀಲನೆ -1**

1) ನೋಡಿ ವಿಭಾಗ - 3.2

**ನಿಮ್ಮ ಪ್ರಗತಿ ಪರಿಶೀಲನೆ -2**

1) ನೋಡಿ ವಿಭಾಗ - 3.3.1

2) ನೋಡಿ ವಿಭಾಗ - 3.3.2

**ನಿಮ್ಮ ಪ್ರಗತಿ ಪರಿಶೀಲನೆ -3**

1) ನೋಡಿ, ವಿಭಾಗ - 3.3.3

**ನಿಮ್ಮ ಪ್ರಗತಿ ಪರಿಶೀಲನೆ -4**

1) ನೋಡಿ ವಿಭಾಗ - 3.3.4

# ಘಟಕ - 4 ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಮತ್ತು ಯೋಜನೆಗಳ ಅಡಿ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರ

ರಚನೆ


4.0 ಉದ್ದೇಶಗಳು

4.1 ಪೀಠಿಕೆ

4.2 ರಾಷ್ಟ್ರೀಯ ಅಭಿವೃದ್ಧಿಯ ಅರ್ಥ

4.3 ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರ

4.3.1 ಯೋಜನೆ ಅಡಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರ

4.3.2 ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಅಡಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರ

4.4 ಸಾರಾಂಶ

4.5 ಕಠಿಣ ಪದಗಳು

4.6 ಕೆಲವು ಉಪಯುಕ್ತ ಪುಸ್ತಕಗಳು

4.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು ಅಭ್ಯಾಸ

## 4.0 ಉದ್ದೇಶಗಳು

ಈ ಘಟಕದ ಅಧ್ಯಯನದ ನಂತರ, ನೀವು ಈ ಕೆಳಗಿನವುಗಳನ್ನು ಉತ್ತರಿಸಬಹುದಾಗಿದೆ.

* ರಾಷ್ಟ್ರೀಯ ಅಭಿವೃದ್ಧಿಯೆಂದರೇನು?
* ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ವಿವರಿಸಿ.
* ಯೋಜನೆಯಡಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ವಿವರಿಸಿ.
* ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದಡಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ಚರ್ಚಿಸಿ.

## 4.1 ಪೀಠಿಕೆ

ಆಧುನಿಕ ಕಾಲದಲ್ಲಿ ರಾಜ್ಯದ ಕಾರ್ಯಕ್ಷೇತ್ರ ವಿಸ್ತಾರವಾದಂತೆಲ್ಲ ಸಾರ್ವಜನಿಕ ಆಡಳಿತದ ಪಾತ್ರವು ಗಣನೀಯವಾಗಿ ಹೆಚ್ಚುತ್ತಲಿದೆ. ಹಲವಾರು ಬೆಳವಣಿಗೆಗಳಿಂದಾಗಿ ಹಿಂದಿನ ಕಾಲಕ್ಕಿಂತಲೂ ಆಧುನಿಕ ಕಾಲದಲ್ಲಿ ಇದರ ಪ್ರಾಮುಖ್ಯತೆ ಹೆಚ್ಚುತ್ತಲಿದೆ. ಸಾರ್ವಜನಿಕ ಆಡಳಿತದ ಮಹತ್ವದ ಪಾತ್ರವನ್ನು ಪ್ರಪಂಚದ ಎಲ್ಲಾ ರಾಷ್ಟ್ರಗಳು (ಬಂಡವಾಳಶಾಹಿ, ಸಮಾಜವಾದಿ ಅಥವಾ ಅಭಿವೃದ್ಧಿ ಶೀಲ) ಇಂದು ಮಾನ್ಯಮಾಡಿವೆ. ರಾಷ್ಟ್ರದ ಅಭಿವೃದ್ಧಿಯಲ್ಲಿ, ಅದರಲ್ಲೂ ವಿಶೇಷವಾಗಿ ಹಿಂದುಳಿದ ರಾಷ್ಟ್ರಗಳಾದ (ಅಭಿವೃದ್ಧಿ ಶೀಲ) ಏಷ್ಯಾ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕನ್ ರಾಷ್ಟ್ರಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಸಾರ್ವಜನಿಕ ಆಡಳಿತವು ಹೊಸ ಪಾತ್ರವನ್ನು ವಹಿಸುತ್ತಲಿದೆ. ಜನತೆಗೆ ಜೀವನದ ಅಗತ್ಯ ವಸ್ತುಗಳನ್ನು-ಶಿಕ್ಷಣ, ಆರೋಗ್ಯ, ಸಾರಿಗೆ ಸಂಪರ್ಕ, ಆಹಾರ, ವಸತಿ ಮುಂತಾದ ಸೌಲಭ್ಯಗಳನ್ನು ಪೂರೈಸುವುದು ಸಾರ್ವಜನಿಕ ಆಡಳಿತದ ಜವಾಬ್ದಾರಿಯಾಗಿದೆ.

ಇಂದಿನ ಕಾಲದಲ್ಲಿ ಸಾರ್ವಜನಿಕ ಆಡಳಿತದ ಪಾತ್ರ ಹೆಚ್ಚಾಗಲು ಈ ಕೆಳಗಿನ ಅಂಶಗಳು ಕಾರಣವಾಗಿವೆ ಎಂದು ಹೇಳಲಾಗಿದೆ. ಮೊದಲನೆಯದಾಗಿ, ಔದ್ಯೋಗೀಕರಣ ಮತ್ತು ನಗರೀಕರಣದಿಂದಾಗಿ ಅನೇಕ ಜಟಿಲ ಸಮಸ್ಯೆಗಳು ಉದ್ಭವವಾಗಿವೆ. ಅ ಸಮಸ್ಯೆಗಳನ್ನು ಪರಿಹರಿಸಲು ಆಡಳಿತದ ಪ್ರಾಮುಖ್ಯತೆ ಹೆಚ್ಚಾಯಿತು. ಎರಡನೆಯದಾಗಿ, ಕಲ್ಯಾಣ ರಾಷ್ಟ್ರದ ಉದಯದಿಂದಾಗಿ, ರಾಜ್ಯವು ಹಲವಾರು ಕಲ್ಯಾಣಪರ ಯೋಜನೆಗಳನ್ನು ಕೈಗೊಳ್ಳಬೇಕಾಯಿತು. ಯೋಜನೆಗಳ ನಿರೂಪಣೆ ಮತ್ತು ಅನುಷ್ಠಾನವನ್ನು ಆಡಳಿತಕ್ಕೆ ವಹಿಸಲಾಯಿತು. ಮೂರನೆಯದಾಗಿ ಜಾಗತಿಕ ಎರಡು ಮಹಾಯುದ್ಧಗಳ ಪರಿಣಾಮದಿಂದಾಗಿ ನೂತನ ಅಂತರಾಷ್ಟ್ರೀಯ ಸನ್ನಿವೇಶ ಸೃಷ್ಟಿಯಾಯಿತು. ಇದರಿಂದಾಗಿ ರಾಜ್ಯದ ಕಾರ್ಯ ಕ್ಷೇತ್ರ ವಿಸ್ತಾರವಾಯಿತು. ನಾಲ್ಕನೆಯದಾಗಿ ಬಹುತೇಕ ರಾಷ್ಟ್ರಗಳಲ್ಲಿ ಜನಸಂಖ್ಯೆಯಲ್ಲಿ ತೀವ್ರ ಹೆಚ್ಚಳದಿಂದಾಗಿ ಅನೇಕ ಸಮಸ್ಯೆಗಳನ್ನು ಹುಟ್ಟು ಹಾಕಿತು. ಆಹಾರ, ವಸತಿ ಉದ್ಯೋಗ ಮುಂತಾದ ಜೀವನಾವಶ್ಯಕ ವಸ್ತುಗಳ ಪೂರೈಕೆಗಾಗಿ ಯೋಜನಾಬದ್ಧ ಕಾರ್ಯಕ್ರಮಗಳನ್ನು ರೂಪಿಸಲು ಆಡಳಿತ ಹೊಣೆ ಹೊರ ಬೇಕಾಯಿತು. ಈ ಎಲ್ಲಾ ಅಂಶಗಳು ಇಂದು "ದೊಡ್ಡ ಸರ್ಕಾರ" (Big Government) ಎಂಬ ಪರಿಕಲ್ಪನೆಗೆ ನಾಂದಿ ಹಾಡಿದವು. ಅಂದರೆ ಬೃಹತ್ ಆಡಳಿತ ಯಂತ್ರ ಸ್ಥಾಪನೆಗೆ ದಾರಿ ಮಾಡಿತು. ಈ ಪೀಠಿಕೆಯೊಂದಿಗೆ ಮುಂದಿನ ಭಾಗಗಳಲ್ಲಿ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ಚರ್ಚಿಸಲಾಗಿದೆ. ಅದಕ್ಕೂ ಮೊದಲು ರಾಷ್ಟ್ರೀಯ ಅಭಿವೃದ್ಧಿಯ ಅರ್ಥವನ್ನು ತಿಳಿಯೋಣ.

## 4.2 ರಾಷ್ಟ್ರೀಯ ಅಭಿವೃದ್ಧಿಯ ಅರ್ಥ ಮತ್ತು ವ್ಯಾಖ್ಯೆಗಳು

ರಾಷ್ಟ್ರೀಯ ಅಭಿವೃದ್ಧಿ ಎಂದರೆ ರಾಷ್ಟ್ರದ ಸರ್ವಾಂಗೀಣ ಬೆಳವಣಿಗೆ, ಜೀವನದ ಗುಣಮಟ್ಟದ ಹೆಚ್ಚಳ ಎಂದರ್ಥ. ಅಭಿವೃದ್ಧಿಯನ್ನು ವಿವಿಧ ಲೇಖಕರು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. ಜಿ. ಎಂ. ಮೀಯರ್ ಎಂಬುವರು ಧೀರ್ಘಾವಧಿಯಲ್ಲಿ ರಾಷ್ಟ್ರವೊಂದರ

ನೈಜ ತಲಾ ವರಮಾನ ಹೆಚ್ಚಾಗುವ ಪ್ರಕ್ರಿಯೇ ಆರ್ಥಿಕಾಭಿವೃದ್ಧಿ' ಎಂದು ವ್ಯಾಖ್ಯಾನಿಸಿದ್ದಾರೆ. ಸಿ. ಪಿ. ಕಿಂಡಲ್ ಬರ್ಗ್‌ರ್ ಅವರು ತಾಂತ್ರಿಕ ಅಭಿವೃದ್ಧಿಯು ಅಧಿಕ ಉತ್ಪನ್ನ ಮತ್ತು ಅದನ್ನು ಉತ್ಪಾದಿಸುವ ತಾಂತ್ರಿಕ ಮತ್ತು ಸಾಂಸ್ಥಿಕ ವ್ಯವಸ್ಥೆಗಳ ಬದಲಾವಣೆ ಎಂದು ಹೇಳಿದ್ದಾರೆ. ವಿಶ್ವಸಂಸ್ಥೆ ತಜ್ಞರ ಸಮಿತಿ ಹೆಚ್ಚು ತೃಪ್ತಿಕರ ವ್ಯಾಖ್ಯೆಯನ್ನು ನೀಡಿದೆ. ಅದರ ಪ್ರಕಾರ "ಅಭಿವೃದ್ಧಿ ಮಾನವನ ಭೌತಿಕ ಅಗತ್ಯಗಳನ್ನು ಮಾತ್ರವಲ್ಲದೆ ಅವನ ಜೀವನದ ಸಾಮಾಜಿಕ ಸ್ಥಿತಿ ಸುಧಾರಣೆಯನ್ನು ಕೂಡ ಒಳಗೊಂಡಿದೆ. ಹಾಗಾಗಿ ಅಭಿವೃದ್ಧಿ ಎಂದರೆ ಆರ್ಥಿಕ ಬೆಳವಣಿಗೆ ಮಾತ್ರವಲ್ಲ, ಸಾಮಾಜಿಕ, ಸಾಂಸ್ಕೃತಿಕ, ಸಾಂಸ್ಥಿಕ ಮತ್ತು ಆರ್ಥಿಕ ಬದಲಾವಣೆಗಳನ್ನು ಒಳಗೊಂಡಿರುತ್ತದೆ."

**ಮೈಖೇಲ್ ಟೊಡರೋರವರ** ಪ್ರಕಾರ ಎಲ್ಲ ಸಮಾಜಗಳಲ್ಲಿ ಅಭಿವೃದ್ಧಿಯು ಕೆಳಗಿನ ಮೂರು ಉದ್ದೇಶಗಳನ್ನು ಹೊಂದಿರಲೇಬೇಕು.

1) ಜೀವನಾವಶ್ಯಕ ಸರಕುಗಳಾದ ಆಹಾರ, ವಸತಿ, ಬಟ್ಟೆ ಮತ್ತು ರಕ್ಷಣೆಗಳ ಪೂರೈಕೆ ಮತ್ತು ವಿತರಣೆಯನ್ನು ವಿಸ್ತರಿಸುವುದು.
2) ಭೌತಿಕ ಕಲ್ಯಾಣವನ್ನು ಹೆಚ್ಚಿಸುವ ಮತ್ತು ವ್ಯಕ್ತಿಯ ಹಾಗೂ ರಾಷ್ಟ್ರದ ಸ್ವಾಭಿಮಾನವನ್ನು ಉದ್ದೀಪನಗೊಳಿಸುವಂತೆ ಆದಾಯದ ಹೆಚ್ಚಳ, ಅಧಿಕ ಉದ್ಯೋಗವಕಾಶಗಳು, ಉತ್ತಮ ಶಿಕ್ಷಣ ಹಾಗೂ ಮಾನವೀಯ ಮೌಲ್ಯಗಳಿಗೆ ಹೆಚ್ಚು ಗಮನ ಹರಿಸಿ ಜೀವನಮಟ್ಟವನ್ನು ಹೆಚ್ಚಿಸುವುದು.
3) ರಾಷ್ಟ್ರಗಳನ್ನು ಮತ್ತು ಜನರನ್ನು ಇತರ ರಾಷ್ಟ್ರಗಳಿಂದ ಮುಕ್ತಗೊಳಿಸಲು ಆರ್ಥಿಕ ಮತ್ತು ಸಾಮಾಜಿಕ ಆಯ್ಕೆಯ ವ್ಯಾಪ್ತಿಯನ್ನು ವಿಸ್ತರಿಸುವುದು.

ಮೇಲಿನ ವಿವರಣೆಯಿಂದ ಆರ್ಥಿಕಾಭಿವೃದ್ಧಿಯ ಲಕ್ಷಣಗಳನ್ನು ಈ ರೀತಿ ಸಂಕ್ಷಿಪ್ತವಾಗಿ ಹೇಳಬಹುದು.

* ಬೆಳವಣಿಗೆಯು ನೈಜ ತಲಾ ವರಮಾನ ನಿವ್ವಳ ರಾಷ್ಟ್ರೀಯ ಉತ್ಪನ್ನ ಉಳಿತಾಯ, ಬಂಡವಾಳ ಹೂಡಿಕೆ ಇತ್ಯಾದಿಗಳಲ್ಲಿನ ಹೆಚ್ಚಳವನ್ನು ಸೂಚಿಸುತ್ತದೆ.
* ರಾಷ್ಟ್ರೀಯ ಆದಾಯದ ನ್ಯಾಯಬದ್ಧ ಸಮಾನ ವಿತರಣೆಯು ಅಭಿವೃದ್ಧಿಯ ಇನ್ನೊಂದು ಲಕ್ಷಣ. ಆರ್ಥಿಕ ಅಸಮಾನತೆಯು ಅಭಿವೃದ್ಧಿಗೆ ಮಾರಕ
* ವ್ಯಕ್ತಿಯ ಮತ್ತು ಸಮಾಜದ ಗುಣಮಟ್ಟವನ್ನು ಹೆಚ್ಚಿಸುವುದು ಅಭಿವೃದ್ಧಿಯ ಉದ್ದೇಶ.

ಆರ್ಥಿಕಾಭಿವೃದ್ಧಿಯನ್ನು ನಿರ್ಧರಿಸುವ ಅಂಶಗಳಲ್ಲಿ ಮುಖ್ಯವಾದವುಗಳೆಂದರೆ, ಸಾಂಸ್ಥಿಕ ರಚನೆ, ಮೂಲಸೌಲಭ್ಯಗಳು, ಅಂದರೆ ಸಾರಿಗೆ ಸಂಪರ್ಕ, ಯಂತ್ರೋಪಕರಣಗಳು, ಕಟ್ಟಡಗಳು, ರಸ್ತೆಗಳು ಇತ್ಯಾದಿ ಲಭ್ಯವಿರುವ ಕಚ್ಚಾವಸ್ತುಗಳು, ಮಾರುಕಟ್ಟೆಯ ವ್ಯವಸ್ಥೆ, ನೈಸರ್ಗಿಕ ಸಂಪನ್ಮೂಲಗಳು, ಬಂಡವಾಳ ಸಂಗ್ರಹಣೆ, ತಾಂತ್ರಿಕ ಪ್ರಗತಿ, ಸಾಮಾಜಿಕ ಸಂಸ್ಥೆಗಳು, ಸಾಂಸ್ಕೃತಿಕ ನಡವಳಿಕೆಗಳು, ಸಾಂಸ್ಥಿಕ ಹಾಗೂ ರಾಜಕೀಯ ಪರಿಸ್ಥಿತಿಗಳು ಇವೇ ಮುಂತಾದವುಗಳಾಗಿದೆ.

**ನಿಮ್ಮ ಪ್ರಗತಿ ಪರಿಶೀಲನೆ -1**

**ಸೂಚನೆ :** i) ಕೆಳಗೆ ಕೊಟ್ಟಿರುವ ಸ್ಥಳವನ್ನು ನಿಮ್ಮ ಉತ್ತರಕ್ಕಾಗಿ ಉಪಯೋಗಿಸಿರಿ.

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ.

1) ಸಾರ್ವಜನಿಕ ಆಡಳಿತದ ಹೆಚ್ಚುತ್ತಿರುವ ಪಾತ್ರ ಹಾಗೂ ಪ್ರಾಮುಖ್ಯತೆಗೆ ಕಾರಣವಾದ ಅಂಶಗಳನ್ನು ಕುರಿತು ಚರ್ಚಿಸಿ.

..............................................................................................................

..............................................................................................................

..............................................................................................................

..............................................................................................................

2) ರಾಷ್ಟ್ರೀಯ ಅಭಿವೃದ್ಧಿಯ ಅರ್ಥವನ್ನು ವಿವರಿಸಿ

.................................................................................................................

.................................................................................................................

.................................................................................................................

.................................................................................................................

## 4.3. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರ

ಎಲ್ಲಾ ರಾಷ್ಟ್ರಗಳಲ್ಲಿಯೂ, ಅದರಲ್ಲೂ ವಿಶೇಷವಾಗಿ ಅಭಿವೃದ್ಧಿಶೀಲ ದೇಶಗಳಲ್ಲಿ ರಾಷ್ಟ್ರ ನಿರ್ಮಾಣ ಹಾಗೂ ಸಾಮಾಜಿಕ-ಆರ್ಥಿಕ ಪ್ರಗತಿಯಂತಹ ಸಂಕೀರ್ಣವಾದ ಕಾರ್ಯನಿರ್ವಹಣೆಯಲ್ಲಿ ಸಾರ್ವಜನಿಕ ಆಡಳಿತ ಮಹತ್ವದ ಪಾತ್ರವನ್ನು ಹೊಂದಿದೆ. ಸಾರ್ವಜನಿಕ ಆಡಳಿತದ ಕಾರ್ಯಗಳು ಮತ್ತು ಪಾತ್ರ ಕೇವಲ ಗಾತ್ರ ಮತ್ತು ಸಂಖ್ಯೆಯಲ್ಲಿ ಹೆಚ್ಚಾಗಿರುವುದಲ್ಲದೆ, ಸಂಕೀರ್ಣವೂ ಆಗಿವೆ. ಅಭಿವೃದ್ಧಿಶೀಲ ದೇಶಗಳು ಜೀವನದ ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು, ಈ ದೇಶಗಳಲ್ಲಿ ಆಡಳಿತವು ವಿಶೇಷ ಪಾತ್ರವನ್ನು ವಹಿಸಬೇಕಿದೆ. ಈ ಕಾರಣದಿಂದ ಸಾರ್ವಜನಿಕ ಆಡಳಿತದ ಪಾತ್ರ ಮಹತ್ವದ್ದೂ ಅಧಿಕವೂ ಆಗಿದ್ದು, ಗಾತ್ರದಲ್ಲಿ ಹಿರಿದಾಗಿರುತ್ತದೆ.

ಸಾರ್ವಜನಿಕ ಆಡಳಿತವು ಅಭಿವೃದ್ಧಿಯ ಮತ್ತು ಬದಲಾವಣೆಯ ಸಾಧನವಾಗಿರುತ್ತದೆ. ಯಾವುದೇ ಅಭಿವೃದ್ಧಿ ಯೋಜನೆಯು ಅದನ್ನು ಜಾರಿಗೊಳಿಸುವ ಆಡಳಿತ ವರ್ಗವನ್ನೇ ಅವಲಂಬಿಸಿರುತ್ತದೆ. ಅಲ್ಲದೆ ಒಂದು ರಾಷ್ಟ್ರದ ವಿಕಾಸವು ಅದರ ಆಡಳಿತ ವರ್ಗದ ಗುಣಾತ್ಮಕದ ಮೇಲೆ ಆಧಾರವಾಗಿರುತ್ತದೆ. ಜೊತೆಗೆ ಅದರ ರಾಷ್ಟ್ರೀಯ ಲಕ್ಷಣವು ಅದನ್ನು ರಾಷ್ಟ್ರೀಯ ಭಾವೈಕತೆಯ ಪ್ರಬಲ ಸಾಧನವನ್ನಾಗಿ ಮಾಡಿದೆ.

ಅಭಿವೃದ್ಧಿಶೀಲ ದೇಶಗಳಲ್ಲಿ ಆಡಳಿತದ ಎರಡು ಪ್ರಮುಖ ಗುರಿಗಳೆಂದರೆ -

1) ರಾಷ್ಟ್ರ ನಿರ್ಮಾಣ ಮತ್ತು 2) ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ. ಈ ದೇಶಗಳಲ್ಲಿ ಆಡಳಿತವು ಅಭಾವಗಳ ಹಲವಾರು ಒತ್ತಡಗಳ ಮತ್ತು ವಿಶೇಷ ನಿಯಂತ್ರಣಗಳ ಪರಿಸರದಲ್ಲಿ ಕೆಲಸ ಮಾಡಬೇಕಾಗಿರುತ್ತದೆ. ಆದುದರಿಂದ ಈ ದೇಶಗಳ ಸಾರ್ವಜನಿಕ ಆಡಳಿತದ ಪ್ರಮುಖ ಗುರಿಯು ಅಭಿವೃದ್ಧಿ ಆಧಾರಿತ ರಾಷ್ಟ್ರ ನಿರ್ಮಾಣವಾಗಿದೆ. ಸಮಾಜಿಕ ಕ್ಷೇತ್ರದಲ್ಲಿ ಸಾರ್ವಜನಿಕ ಆಡಳಿತಗಾರರು ವಿವಿಧ ಧೋರಣೆಗಳ ನಿರೂಪಣೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವುದರ ಮೂಲಕ ದುರ್ಬಲ ವರ್ಗಗಳನ್ನು ಮೇಲೆತ್ತುವ ಕಾರ್ಯಗಳನ್ನು ಕೈಗೆತ್ತಿಕೊಂಡು ಆರ್ಥಿಕ ಅಭಿವೃದ್ಧಿಗೆ ಅನುವು ಮಾಡಿಕೊಡುತ್ತದೆ. ಈ ಎಲ್ಲಾ ಕಾರಣಗಳಿಂದ ಸಾರ್ವಜಿಕ ಆಡಳಿತದ ಪಾತ್ರವು ಈ ದೇಶಗಳಲ್ಲಿ ಅಧಿಕವಾಗಿದೆ ಹಾಗೂ ಮಹತ್ವಪೂರ್ಣವಾಗಿದೆ.

ಸಾರ್ವಜನಿಕ ಆಡಳಿತ ಶಾಹಿಯ ಪ್ರಮುಖ ಕರ್ತವ್ಯವೆಂದರೆ ರಾಷ್ಟ್ರ ನಿರ್ಮಾಣ ಹಾಗೂ ಆರ್ಥಿಕ ಅಭಿವೃದ್ಧಿ. ಅಭಿವೃದ್ಧಿಶೀಲ ರಾಷ್ಟ್ರಗಳಾದ ಏಷ್ಯಾ ಮತ್ತು ಆಫ್ರಿಕಾ ಖಂಡದ ದೇಶಗಳಲ್ಲಿ ಸಾರ್ವಜನಿಕ ಆಡಳಿತದ ಜವಾಬ್ದಾರಿಯು ಅಧಿಕವಾಗಿದೆ. ಆಡಳಿತವು ವಿವಿಧ ಪಂಗಡಗಳ ನಡುವಣ ದ್ವೇಷ ಮತ್ತು ಪ್ರಾದೇಶಿಕ ಭಿನ್ನಾಭಿಪ್ರಾಯಗಳಂತ ವಿಚ್ಛಿದ್ರಕಾರಿ ಶಕ್ತಿಗಳನ್ನು ಹತ್ತಿಕ್ಕಿ ರಾಷ್ಟ್ರೀಯ ಐಕ್ಯತೆ ಹಾಗೂ ಸಮಗ್ರತೆಯನ್ನು ರೂಪಿಸಬೇಕಿದೆ. ಸಹಜವಾಗಿ ಅದು ವಿವಿಧ ಪಂಗಡಗಳಲ್ಲಿ ವಿರೋಧಿ ಭಾವನೆಗಳನ್ನು ತೊಡೆದು ಹಾಕಿ, ಸಾಮರಸ್ಯ ಜೀವನಕ್ಕೆ ಅಸ್ಪದ ಕಲ್ಪಿಸುವ ಹೊಣೆಗಾರಿಕೆಯನ್ನು ಹೊರಬೇಕಾಗಿದೆ. ಜಾತಿ, ಲಿಂಗ, ಭಾಷೆ ಇತ್ಯಾದಿ ಭೇದಭಾವನೆಗಳನ್ನು ಮೆಟ್ಟಿ ನಿಲ್ಲುವ ರಾಷ್ಟ್ರೀಯ ಏಕತೆಯನ್ನು ಸೃಷ್ಟಿಸಬೇಕು. ಇದು ಸಾಮಾನ್ಯ ಕಾರ್ಯವಾಗಿದೆ, ಆಡಳಿತಕ್ಕೆ ಬಹು ದೊಡ್ಡ ಸವಾಲಾಗಿದೆ.

ಅಭಿವೃದ್ಧಿಶೀಲ ದೇಶಗಳಲ್ಲಿ ಸಾರ್ವಜನಿಕ ಆಡಳಿತವು ಮಹತ್ವಪೂರ್ಣ ಪಾತ್ರವನ್ನು ವಹಿಸಬೇಕಾದ ವಲಯವೆಂದರೆ ದೇಶದಲ್ಲಿ

ಪ್ರಜಾಪ್ರಭುತ್ವದ ನೆಲೆಗಟ್ಟನ್ನು ಭದ್ರಪಡಿಸಬೇಕಾದ ಮತ್ತೊಂದು ವಿಚಾರ. ಏಕೆಂದರೆ ವಸಾಹತು ಶಾಹಿಗೆ ಗುರಿಯಾಗಿದ್ದ ಈ ದೇಶಗಳು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಹಾಗೂ ವಿಧಾನಗಳನ್ನು ಅರಿಯಲು ಅವಕಾಶವಿರಲಿಲ್ಲ ಅಥವಾ ಅವುಗಳಿಗೆ ನೈಜ ಬದ್ಧತೆ ಅಲ್ಲಿರಲಿಲ್ಲ. ಸಾರ್ವಜನಿಕ ಆಡಳಿತವು ಈ ವಿಷಯವನ್ನು ಆದ್ಯತೆಯ ಕ್ಷೇತ್ರವೆಂದು ಪರಿಗಣಿಸಬೇಕು ಎನ್ನುವುದಕ್ಕೆ ಇರುವ ಪ್ರಬಲ ಕಾರಣವೆಂದರೆ, ಆಡಳಿತಾಂಗದ ಉನ್ನತ ಅಧಿಕಾರಿಗಳು ಮಂತ್ರಿಗಳಿಗೆ ಒಂದು ರೀತಿಯ ಸಲಹೆಗಾರರೂ ಆಗಿರುವುದರಿಂದ ಸರ್ಕಾರದ ನೀತಿ ನಿರೂಪಣೆಯ ಮೇಲೆ ಅವರ ಪ್ರಭಾವ ಗಣನೀಯವಾಗಿದೆ. ಪ್ರಜಾಪ್ರಭುತ್ವನ್ನು ಬಲಪಡಿಸಲು ಈ ಪ್ರಭಾವವನ್ನು ಬಳಸಬೇಕು.

ಅನೇಕ ದೇಶಗಳಲ್ಲಿ ಸಾರ್ವಜನಿಕ ಆಡಳಿತವು ರಾಜಕೀಯ ಸಮಾಜೀಕರಣಕರಣದ ಪ್ರಮುಖ ಕಾರ್ಯಗಳನ್ನು ಕೈಗೆತ್ತಿಕೊಂಡಿದೆ. ರಾಜಕೀಯ ಗುರಿ ಹಾಗೂ ಪ್ರಮುಖ ನೀತಿ ನಿರ್ದೇಶನಗಳನ್ನು ಜಾರಿಗೊಳಿಸುವ ಕಾರ್ಯವನ್ನು ಮಾಡುತ್ತಿದೆ. ಸರ್ಕಾರದ ಅನೇಕ ಅಭಿವೃದ್ಧಿ ನೀತಿ ಹಾಗೂ ಕಾರ್ಯಕ್ರಮಗಳನ್ನು ರೂಪಿಸುವ ಹಾಗೂ ಜಾರಿಗೊಳಿಸಬಲ್ಲ ಸಾಮರ್ಥ್ಯ ಪಡೆದಿರುವುದೆಂದರೆ ಅಲ್ಲಿಯ ಆಡಳಿತಾಂಗ ಮಾತ್ರವೇ ಆಗಿದೆ. ಅಲ್ಲದೆ ಜನತೆಯನ್ನು ಒಗ್ಗೂಡಿಸುವ ಮತ್ತು ಕೇಂದ್ರೀಕರಣದ ಪ್ರಮುಖ ಸಾಧನವಾಗಿದೆ. ಜೊತೆಗೆ ಸಂಪನ್ಮೂಲಗಳ ಸಂಗ್ರಹಣೆಯ ಪ್ರಮುಖ ಸಾಧನವಾಗಿಯೂ ಸಾರ್ವಜನಿಕ ಆಡಳಿತ ಕಾರ್ಯನಿರ್ವಹಿಸುತ್ತಿದೆ.

ರಾಷ್ಟ್ರದ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ಈ ರೀತಿ ಸಂಕ್ಷೇಪಿಸಬಹುದು.

1) ಶಾಂತಿ ಮತ್ತು ಸುವ್ಯವಸ್ಥೆಯ ನಿರ್ವಹಣೆ.
2) ರಾಜಕೀಯ ನಿರಂತರತೆಯನ್ನು ಅಥವಾ ಸ್ಥಿರತೆಯನ್ನು ಕಾಪಾಡುವುದು.
3) ಅಭಿವೃದ್ಧಿ ಶೀಲತೆಯ ಪಾತ್ರ.
4) ಅರ್ಥವ್ಯವಸ್ಥೆಯ ನಿಯಂತ್ರಣ ಅಂದರೆ ಅರ್ಥವ್ಯವಸ್ಥೆಯನ್ನು ಕ್ರಮಬದ್ಧಗೊಳಿಸುವುದು.
5) ಸಮಾಜಿಕ ನ್ಯಾಯವನ್ನು ಪ್ರೋತ್ಸಾಹಿಸುವುದು.
6) ಅಭಿವೃದ್ಧಿಗೆ ಅನುಗುಣವಾದ ಸೂಕ್ತ ಸಾಂಸ್ಥಿಕ ವ್ಯವಸ್ಥೆಗಳನ್ನು ರೂಪಿಸುವುದು.
7) ರಾಷ್ಟ್ರೀಯ ಐಕ್ಯತೆಯನ್ನು ಮೂಡಿಸುವುದು ಮತ್ತು ಸಾಮಾಜಿಕ ಭಾವೈಕ್ಯತೆಯನ್ನು ಬೆಳೆಸುವುದು ಹಾಗೂ
8) ಪ್ರಜಾಸತ್ತಾತ್ಮಕ ರಾಜಕೀಯ ಸಂಸ್ಕೃತಿಯನ್ನು ಮೂಡಿಸುವುದು ಮತ್ತು ಸಕ್ರಿಯ ಜನತಾ ಸಹಭಾಗಿತ್ವ ಇರುವಂತೆ ನೋಡಿಕೊಳ್ಳುವುದು.

**ನಿಮ್ಮ ಪ್ರಗತಿ ಪರಿಶೀಲನೆ -2**

**ಸೂಚನೆ :** i) ಕೆಳಗಿನ ಸ್ಥಳವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿರಿ.

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ.

1) ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ವಿವರಿಸಿ.

..........................................................................................................................

..........................................................................................................................

..........................................................................................................................

..........................................................................................................................

..........................................................................................................................

**4.3.1. ಯೋಜನೆ ಅಡಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರ**

ಯೋಜನೆಯು ಅಭಿವೃದ್ಧಿಯ ಹೃದಯ. ಯೋಜನೆಯನ್ನು ಆರ್ಥಿಕಾಭಿವೃದ್ಧಿಯೊಂದಿಗೆ ಜೊತೆಗೂಡಿಸಲಾಗಿದೆ. ಸರ್ಕಾರದ ನೀತಿ ಹಾಗೂ ಕಾರ್ಯಕ್ರಮಗಳು ಆರ್ಥಿಕಾಭಿವೃದ್ಧಿ ಹಾಗೂ ಜನರ ಕಲ್ಯಾಣ ಸಾಧನೆಯ ಗುರಿ ಹೊಂದಿವೆ. ದಕ್ಷತೆ ಮತ್ತು ಮಿತವ್ಯಯದಿಂದ ಈ ಗುರಿಗಳ ಸಾಧನೆಯು ಸಾರ್ವಜನಿಕ ಆಡಳಿತದ ಪ್ರಮುಖ ಉದ್ದೇಶವಾಗಿದೆ. ಆರ್ಥಿಕ ಯೋಜನೆಯ ಪ್ರಾರಂಭದೊಡನೆ ಸಾರ್ವಜನಿಕ ಆಡಳಿತದ ಜವಾಬ್ದಾರಿಯೂ ಹೆಚ್ಚಾಯಿತು. ಮಿತ ಸಂಪನ್ಮೂಲಗಳಿಂದ ಅಧಿಕ ವೆಚ್ಚದ ಗುರಿಗಳನ್ನು ಸಾಧಿಸಬೇಕಾಗಿದೆ. ಅಂದರೆ ಸಾರ್ವಜನಿಕ ಆಡಳಿತವು ಅಭಿವೃದ್ಧಿಯನ್ನು ಯೋಜನಾ ಬದ್ಧವಾಗಿ ಸಾಧಿಸಬೇಕಾಗಿದೆ.

ಆರ್ಥಿಕ-ಸಾಮಾಜಿಕ ಅಭಿವೃದ್ಧಿಯನ್ನು ಯೋಜನೆಯ ಮೂಲಕ ಸಾಧಿಸಬೇಕಾಗಿರುವುದರಿಂದ, ಸಾರ್ವಜನಿಕ ಆಡಳಿತವು ಹಲವು ಹೊಸ ಜವಾಬ್ದಾರಿಗಳನ್ನು ಹೊರಬೇಕಾಗಿದೆ. ಅವುಗಳು ಈ ರೀತಿ ಇವೆ.

1) ಅಭಿವೃದ್ಧಿಯ ಗುರಿಗಳನ್ನು ಹಾಗೂ ಆದ್ಯತೆಗಳನ್ನು ನಿರ್ಧರಿಸುವುದು.
2) ಅಭಿವೃದ್ಧಿ ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ರೂಪಿಸುವುದು ಮತ್ತು ಅನುಷ್ಠಾನಕ್ಕೆ ತರುವುದು.
3) ಭೌತಿಕ ಮತ್ತು ಮಾನವ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಮತ್ತು ಅವುಗಳನ್ನು ಅಭಿವೃದ್ಧಿ ಕಾರ್ಯಗಳಿಗೆ ಸೂಕ್ತ ರೀತಿಯಲ್ಲಿ ಬಳಸಿಕೊಳ್ಳುವುದು.
4) ಅಗತ್ಯವಾದ ನಿರ್ವಹಣಾ ಪರಿಣಿತಿ ಹಾಗೂ ತಾಂತ್ರಿಕ ಸಾಮರ್ಥ್ಯವನ್ನು ಪಡೆಯುವ ನಿಟ್ಟಿನಲ್ಲಿ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು.
5) ಕೈಗಾರಿಕಾ ಹಾಗೂ ಕೃಷಿ ಉತ್ಪನ್ನವನ್ನು ಹೆಚ್ಚಿಸಲು ವೈಜ್ಞಾನಿಕ ಹಾಗೂ ತಾಂತ್ರಿಕತೆಯಲ್ಲಿ ಆಗಿರುವ ಬೆಳವಣಿಗೆಗಳನ್ನು ಸದುಪಯೋಗ ಮಾಡಿಕೊಳ್ಳುವುದು.
6) ಅಭಿವೃದ್ಧಿ ಉದ್ದೇಶಕ್ಕಾಗಿ ಪ್ರಸಕ್ತ ಆಡಳಿತ ವ್ಯವಸ್ಥೆಯ ಸಾಮರ್ಥ್ಯವನ್ನು ಸುಧಾರಿಸುವುದು ಮತ್ತು ಹೊಸ ಆಡಳಿತಾತ್ಮಕ ಸಂಘಟನೆಯನ್ನು ಸೃಷ್ಟಿಸುವುದು.
7) ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರನ್ನು ತೊಡಗಿಸಿ ಕೊಳ್ಳುವುದರ ಮೂಲಕ ಅಭಿವೃದ್ಧಿ ಕಾರ್ಯ ಚಟುವಟಿಕೆಗಳಲ್ಲಿ ಅವರ ಸಹಕಾರ ಹಾಗೂ ಬೆಂಬಲವನ್ನು ಪಡೆಯುವುದು ಮತ್ತು ಅವರಲ್ಲಿ ಸಾಮಾಜಿಕ-ಆರ್ಥಿಕ ಬದಲಾವಣೆಗಳ ಕಡೆಗೆ ಅವರಲ್ಲಿ ಸೂಕ್ತವಾದ ತಿಳುವಳಿಯನ್ನು ಹಾಗೂ ಮನೋಭಾವನೆಯನ್ನು ಮೂಡಿಸುವುದು.

ಭಾರತದಂತಹ ರಾಷ್ಟ್ರದಲ್ಲಿ ಹೆಚ್ಚಿನ ಪ್ರಮಾಣದ ಉತ್ಪಾದನಾ ಸಾಧನಗಳು ಖಾಸಗಿ ವ್ಯಕ್ತಿಗಳ ಒಡೆತನದಲ್ಲಿರುವುದರಿಂದ, ಅಭಿವೃದ್ಧಿ ದೃಷ್ಟಿಯಿಂದ ಹಾಗೂ ಸಾರ್ವಜನಿಕ ನೀತಿಯ ಉದ್ದೇಶಗಳಿಗೆ ಅನುಗುಣವಾಗಿ, ಖಾಸಗಿ ವಲಯದ ಸಾಮಾಜಿಕ-ಆರ್ಥಿಕ ಚಟುವಟಿಕೆಗಳನ್ನು ಆಡಳಿತಾಂಗವು ಯೋಜನೆಯ ಮೂಲಕ ಕ್ರಮಬದ್ಧ ಹಾಗೂ ನಿಯಂತ್ರಿಸುತ್ತಿದೆ. ಭಾರತದ ಆರ್ಥಿಕ ಯೋಜನೆಯ ಅತ್ಯಂತ ಪ್ರಮುಖ ಅಂಶವೆಂದರೆ, ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಎಲ್ಲಾ ಜನರಿಗೂ ಅನುಕೂಲವಾಗುವಂತೆ ಶೀಘ್ರಗತಿಯಲ್ಲಿ ಅಭಿವೃದ್ಧಿ ಪಥದಲ್ಲಿ ಸಾಗುವುದೇ ಆಗಿದೆ. ಆ ಉದ್ದೇಶಗಳನ್ನು ಈ ರೀತಿ ಪಟ್ಟಿ ಮಾಡಬಹುದು.

1) ರಾಷ್ಟ್ರೀಯ ಆದಾಯದಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿ ಜನರ ಜೀವನ ಮಟ್ಟವನ್ನು ಹೆಚ್ಚಿಸುವುದು.
2) ಮೂಲ ಮತ್ತು ಭಾರಿ ಕೈಗಾರಿಕೆಗಳ ಬೆಳವಣಿಗೆಯ ಮೂಲಕ ತ್ವರಿತ ಕೈಗಾರಿಕೀಕರಣದ ಸಾಧನೆ.
3) ಉದ್ಯೋಗದ ಅವಕಾಶಗಳನ್ನು ವ್ಯಾಪಕವಾಗಿ ಹೆಚ್ಚಿಸುವುದು.
4) ಜನರ ನಡುವಣ ಆದಾಯ ಮತ್ತು ಸಂಪತ್ತುಗಳ ಅಸಮಾನತೆಯನ್ನು ಸಾಧ್ಯವಿರುವಷ್ಟು ಕಡಿಮೆ ಮಾಡುವುದು; ಸಾಧ್ಯವಾದಷ್ಟು ಆರ್ಥಿಕ ಶಕ್ತಿಯ ಸಮಾನ ವಿತರಣೆಯನ್ನು ಸಾಧಿಸುವುದು.

ಯೋಜನೆಯ ರಚನೆ, ಅನುಷ್ಠಾನ, ಸಮೀಕ್ಷೆ ಹಾಗೂ ಮೌಲ್ಯ ಮಾಪನ ಕಾರ್ಯಗಳಲ್ಲಿ ವಿವಿಧ ಆಡಳಿತಾಂಗಗಳು ಪ್ರಮುಖ ಪಾತ್ರವಹಿಸುತ್ತವೆ. ಯೋಜನಾ ಆಯೋಗ, ರಾಷ್ಟ್ರೀಯ ಅಭಿವೃದ್ಧಿ ಪರಿಷತ್, ರಾಜ್ಯ ಯೋಜನಾ ಮಂಡಳಿಗಳು, ಜಿಲ್ಲಾ ಯೋಜನಾ ಘಟಕಗಳು, ಕೇಂದ್ರ ಮತ್ತು ರಾಜ್ಯ ಮಂತ್ರಾಲಯಗಳಲ್ಲಿನ ಯೋಜನಾ ಘಟಕಗಳು ಯೋಜನಾ ಪ್ರಕ್ರಿಯೆಯಲ್ಲಿ ತೊಡಗಿರುತ್ತವೆ.

ಭಾರತದ ಯೋಜನಾ ಆಯೋಗವು ಒಂದು ಬಹು ಸದಸ್ಯ ಮಂಡಳಿಯಾಗಿದ್ದು ಕೇಂದ್ರ ಸಚಿವ ಸಂಪುಟದ ಗೊತ್ತುವಳಿಯ ಮೂಲಕ ಮಾರ್ಚ್ 15, 1950ರಲ್ಲಿ ಇದನ್ನು ಸ್ಥಾಪಿಸಲಾಯಿತು. ಇದರ ಮುಖ್ಯಧ್ಯೇಯಗಳೆಂದರೆ : ರಾಷ್ಟ್ರದಲ್ಲಿ ದೊರೆಯುವ ಸಂಪನ್ಮೂಲಗಳ ಪಟ್ಟಿ ತಯಾರಿಸುವುದು ಮತ್ತು ಅವುಗಳನ್ನು ಹೆಚ್ಚಿಸಲು ವಿಧಿ ವಿಧಾನಗಳನ್ನು ಕಂಡು ಹಿಡಿಯುವುದು. ರಾಷ್ಟ್ರದ ಸಂಪನ್ಮೂಲಗಳ ಪರಿಣಾಮಕಾರಿ ಮತ್ತು ಸಮತೋಲನ ಬಳಕೆಗಾಗಿ ಯೋಜನೆಗಳನ್ನು ರೂಪಿಸುವುದು. ಆದ್ಯತೆ ಕ್ಷೇತ್ರಗಳನ್ನು ನಿರ್ಧರಿಸುವುದು, ಯೋಜನೆಯ ಅನುಷ್ಠಾನಕ್ಕೆ ಹಂತಗಳನ್ನು ನಿರ್ಧರಿಸುವುದು ಮತ್ತು ಪ್ರತಿಹಂತವನ್ನು ಪೂರ್ಣಗೊಳಿಸಲು ಸಂಪನ್ಮೂಲಗಳನ್ನು ನಿಗದಿಪಡಿಸುವುದು. ಯೋಜನೆಗಳ ಪ್ರಗತಿ ಮೌಲ್ಯಮಾಪನ ಕೈಗೊಳ್ಳುವುದು ಮತ್ತು ಅಗತ್ಯವೆನಿಸಿದ ತಾತ್ಕಾಲಿಕ ಅಥವಾ ಉಪಯುಕ್ತ ಶಿಫಾರಸುಗಳನ್ನು ಸೂಚಿಸುವುದು ಇತ್ಯಾದಿ.

ಯೋಜನೆಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರ ವಹಿಸುವ ಇನ್ನೊಂದು ಅಂಗವೆಂದರೆ ರಾಷ್ಟ್ರೀಯ ಅಭಿವೃದ್ಧಿ ಪರಿಷತ್/ಮಂಡಳಿಯಾಗಿದೆ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ರಾಷ್ಟ್ರೀಯ ಯೋಜನೆಗಳ ನೀತಿ ಮತ್ತು ಕಾರ್ಯಕ್ರಮಗಳಲ್ಲಿ ಸಮನ್ವಯತೆಯನ್ನು ತರಲು ಕೇಂದ್ರ ಸರ್ಕಾರ, ರಾಜ್ಯಸರ್ಕಾರ ಮತ್ತು ಯೋಜನಾ ಆಯೋಗ ಇವುಗಳ ಮಧ್ಯೆ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತದೆ. ರಾಷ್ಟ್ರೀಯ ಯೋಜನೆಯನ್ನು ಸಿದ್ಧಪಡಿಸುವಲ್ಲಿ ಮಾರ್ಗಸೂಚಿಗಳನ್ನು ಗೊತ್ತುಪಡಿಸುತ್ತದೆ. ರಾಷ್ಟ್ರಾಭಿವೃದ್ಧಿಯ ಮೇಲೆ ಪರಿಣಾಮ ಬೀರುವ ಸಾರ್ವಜನಿಕ ಮತ್ತು ಆರ್ಥಿಕ ನೀತಿಯ ಪ್ರಶ್ನೆಗಳನ್ನು ಪರಿಶೀಲಿಸುತ್ತದೆ. ಯೋಜನೆಗಳ ಕಾರ್ಯಕ್ರಮಗಳಲ್ಲಿ ಜನರು ಸಕ್ರಿಯವಾಗಿ ಪಾತ್ರವಹಿಸುವಂತೆ ಮತ್ತು ಸಹಕಾರ ನೀಡುವಂತೆ ನೋಡಿಕೊಳ್ಳುವುದು, ಆಡಳಿತ ದಕ್ಷತೆಯನ್ನು ಹೆಚ್ಚಿಸುವುದು, ಹಿಂದುಳಿದ ಪ್ರದೇಶಗಳ ಹಾಗೂ ಜನಾಂಗಗಳ ಅಭಿವೃದ್ಧಿಯನ್ನು ಸಾಧಿಸಲು ಸಹಾಯ ಮಾಡುವುದು ಮುಂತಾದ ಕಾರ್ಯಗಳಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಪ್ರಮುಖ ಪಾತ್ರವಹಿಸುತ್ತದೆ.

ಯೋಜನೆಯ ರಚನೆಯಲ್ಲಿ ಸಹಾಯ ಮಾಡಲು ಪ್ರತಿಯೊಂದು ರಾಜ್ಯವು 'ರಾಜ್ಯಯೋಜನಾ ಮಂಡಳಿ' ಅಥವಾ 'ರಾಜ್ಯಯೋಜನಾ ಘಟಕ' ವನ್ನು ಹೊಂದಿರುತ್ತದೆ. ಈ ಮಂಡಳಿಯು ರಾಜ್ಯದ ಮಂತ್ರಾಲಯಗಳು, ಇಲಾಖೆಗಳು, ಜಿಲ್ಲಾ ಪ್ರತಿನಿಧಿಗಳು ಮತ್ತು ಜಿಲ್ಲಾ ಯೋಜನಾ ಘಟಕದ ಸದಸ್ಯರುಗಳ ಸಹಾಯದಿಂದ ರಾಜ್ಯದ ಯೋಜನೆಯನ್ನು ಸಿದ್ಧಪಡಿಸುತ್ತದೆ. ಯೋಜನೆ ರೂಪಿಸಲು ಜಿಲ್ಲೆಗಳು ಯೋಜನಾ ಘಟಕಗಳನ್ನು ಹೊಂದಿರುತ್ತವೆ. ಜಿಲ್ಲೆಯಲ್ಲಿನ ಅಧಿಕಾರಿಗಳು ಮತ್ತು ಜಿಲ್ಲಾ ಘಟಕಗಳು ಒಟ್ಟಾಗಿ ಸೇರಿ ಜಿಲ್ಲಾ ಯೋಜನೆಯನ್ನು ಸಿದ್ಧಪಡಿಸುತ್ತವೆ.

ಯೋಜನೆಯನ್ನು ರಚಿಸಿದ ನಂತರ ಅದನ್ನು ಕಾರ್ಯಾಚರಣೆಗೆ ತರುವುದರಲ್ಲಿ ಆಡಳಿತವು ಪ್ರಮುಖ ಪಾತ್ರವಹಿಸುತ್ತದೆ. ಯೋಜನೆಗಳು ಎಷ್ಟೇ ಉತ್ತಮವಾಗಿದ್ದರೂ ಅವುಗಳನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವ ಆಡಳಿತ ಯಂತ್ರ ಸರಿಯಾಗಿಲ್ಲದಿದ್ದರೆ ಅವುಗಳು ಯಶಸ್ವಿಯಾಗಲಾರವು. ಯೋಜನೆಗಳ ಧ್ಯೇಯೋದ್ದೇಶಗಳ ಸಾಧನೆಯು ಆಡಳಿತ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ. ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಆಡಳಿತಾಧಿಕಾರಿಗಳು ಹೆಚ್ಚಿನ ಹೊಣೆ ಹೊರಬೇಕಾಗುತ್ತದೆ ಮತ್ತು ಆಡಳಿತ ಯಂತ್ರವು ದಕ್ಷತೆಯಿಂದ ಕೆಲಸ ಮಾಡಬೇಕಾಗುತ್ತದೆ. ಯಾವುದೇ ಯೋಜನೆ ಯಶಸ್ವಿಯಾಗಬೇಕಾದರೆ ಸಾಮಾನ್ಯ ನೀತಿಯ ಬಗ್ಗೆ ಜನರಲ್ಲಿ ಒಮ್ಮತವಿರಬೇಕು, ಜನತೆಯ ಸಹಕಾರವಿರಬೇಕು ಮತ್ತು ಆಡಳಿತಾತ್ಮಕ ವ್ಯವಸ್ಥೆ ಉತ್ತಮವಾಗಿರಬೇಕು. ಆಡಳಿತ ವ್ಯವಸ್ಥೆಯು ತ್ವರಿತವಾಗಿಯೂ, ಪ್ರಾಮಾಣಿಕವಾಗಿಯೂ ಮತ್ತು ದಕ್ಷತೆಯಿಂದ ಕಾರ್ಯನಿರ್ವಹಿಸಿದಾಗ ಮಾತ್ರ ಯೋಜನೆಗಳು ಯಶಸ್ವಿಯಾಗುತ್ತವೆ.

ಯೋಜನೆಯನ್ನು ರಾಷ್ಟ್ರ, ರಾಜ್ಯ, ಜಿಲ್ಲೆ, ಬ್ಲಾಕ್ ಮತ್ತು ಗ್ರಾಮ ಮಟ್ಟಗಳಲ್ಲಿ ಕಾರ್ಯಾಚರಣೆಗೆ ತರಬೇಕಾಗುತ್ತದೆ. ಯೋಜನೆಯನ್ನು ಕಾರ್ಯರೂಪಕ್ಕೆ ತರುವ ವಿವಿಧ ಇಲಾಖೆಗಳಲ್ಲಿ ಮತ್ತು ಅಂಗಗಳಲ್ಲಿ ಪರಸ್ಪರ ಸಹಕಾರ ಮತ್ತು ಸಮನ್ವಯತೆ

ಇರಬೇಕಾಗುತ್ತದೆ . ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ನಡುವೆ ಮತ್ತು ಅವುಗಳ ವಿವಿಧ ಇಲಾಖೆಗಳಲ್ಲಿ ಹೊಂದಾಣಿಕೆ ಇರಬೇಕಾಗುತ್ತದೆ. ಯೋಜನೆಯ ಅಭಿವೃದ್ಧಿಯ ವೇಗವು ಹೆಚ್ಚಾಗಿ ಆಡಳಿತವನ್ನೇ ಅವಲಂಬಿಸಿದೆ. ಆಡಳಿತದ ಗುಣಮಟ್ಟ, ದಕ್ಷತೆ ಮತ್ತು ಸಹಕಾರ ಮನೋಭಾವನೆ ಯೋಜನೆಗಳನ್ನು ಯಶಸ್ವಿಗೊಳಿಸಬಲ್ಲವು. ಯೋಜನೆಗೂ ಮತ್ತು ಆಡಳಿತಕ್ಕೂ ನಿಕಟ ಸಂಬಂಧವನ್ನುಂಟು ಮಾಡಬೇಕು. ಬೃಹತ್ ಜಲಾಶಯಗಳು, ಭಾರಿ ವಿದ್ಯುಚ್ಛಕ್ತಿ ಯೋಜನೆಗಳು, ಶಿಕ್ಷಣ ಪ್ರಸಾರ, ಸಾರ್ವಜನಿಕ ಆರೋಗ್ಯ ಸುಧಾರಣೆ ಮುಂತಾದ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಆಡಳಿತವು ತೊಡಗಬೇಕು. ಇದಕ್ಕಾಗಿ ಸಮರ್ಥ ಮತ್ತು ಪ್ರಾಮಾಣಿಕ ಆಡಳಿತಗಾರರು ಬೇಕು. ಎಷ್ಟೇ ಹಣವಿರಲಿ, ಎಷ್ಟೇ ನೈಸರ್ಗಿಕ ಸಂಪನ್ಮೂಲಗಳಿರಲಿ ಸರಿಯಾದ ಯೋಜನೆ ಮತ್ತು ನಿಷ್ಪೃಹತೆಯಿಂದ ದುಡಿಯುವ ಅಧಿಕಾರಿಗಳಿಲ್ಲದಿದ್ದರೆ ಆಡಳಿತವು ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಯಶಸ್ವಿಯಾಗಲಾರದು. ಆದುದರಿಂದ ಸಾಮಾಜಿಕ ಪರಿವರ್ತನೆಯ ಕಾರ್ಯದಲ್ಲಿ ಅಧಿಕಾರಿಗಳು ತಮ್ಮ ಕೊಡುಗೆಯನ್ನು ಸಲ್ಲಿಸಬೇಕಾಗಿದೆ. ಆಡಳಿತಾಧಿಕಾರಿಗಳು ಯೋಜನಾ ಮನೋಭಾವನೆಯನ್ನು ಹೊಂದಿ ಜನತೆಯ ಸಹಕಾರವನ್ನು ಪಡೆಯಬೇಕು. ಆಡಳಿತವು ಅಭಿವೃದ್ಧಿಯ ಸಾಧನವಾಗಬೇಕು. ಒಟ್ಟಿನಲ್ಲಿ ಇಂದಿನ ಸಾರ್ವಜನಿಕ ಆಡಳಿತವು ಸಮಾಜದ, ರಾಷ್ಟ್ರದ ಮುನ್ನಡೆಗೆ ತುಂಬಾ ನೆರವಾಗಬಹುದಾಗಿದೆ ಎಂದು ಹೇಳಬಹುದು.

**ನಿಮ್ಮ ಪ್ರಗತಿ ಪರಿಶೀಲನೆ-3**

**ಸೂಚನೆ :** i) ಕೆಳಗಿನ ಸ್ಥಳವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿ.

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ.

1) ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ಯೋಜನೆಯಡಿಯಲ್ಲಿ ಚರ್ಚಿಸಿ.

..........................................................................................................................................

..........................................................................................................................................

..........................................................................................................................................

..........................................................................................................................................

**4.3.2 ಉದಾರೀಕರಣ, ಖಾಸಗೀಕರಣ, ಜಾಗತೀಕರಣದಡಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರ**

ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ (ಎಲ್.ಪಿ.ಜಿ) ನೀತಿಯಿಂದ ಉಂಟಾಗಿರುವ ಬದಲಾದ ಸನ್ನಿವೇಶದಲ್ಲಿ ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಬದಲಾದ ಪಾತ್ರವನ್ನು ಚರ್ಚಿಸುವ ಮುನ್ನ 'ಉದಾರೀಕರಣ,' ಖಾಸಗೀಕರಣ' ಮತ್ತು 'ಜಾಗತೀಕರಣ' ಗಳ ಪರಿಕಲ್ಪನೆಗಳ ಅರ್ಥವನ್ನು ಗ್ರಹಿಸುವುದು ಇಲ್ಲಿ ಸೂಕ್ತವೆನಿಸುತ್ತದೆ.

'ಉದಾರೀಕರಣ' ವೆಂದರೆ ಆರ್ಥಿಕ ವ್ಯವಸ್ಥೆಯನ್ನು ಎಲ್ಲ ನಿಯಂತ್ರಣಗಳಿಂದ ಮುಕ್ತಗೊಳಿಸುವುದಾಗಿದೆ. ಉದಾರೀಕರಣವು ಕಾನೂನು, ನಿಯಮಗಳು, ಕಾರ್ಯವಿಧಾನ, ನಿಯಂತ್ರಣಗಳು ಮುಂತಾದವುಗಳನ್ನು ಸರಳಗೊಳಿಸುವುದಾಗಿದೆ. ಉದಾರೀಕರಣವು ಅನವಶ್ಯಕ ಹತೋಟಿ ಮತ್ತು ನಿಯಂತ್ರಣಗಳನ್ನು ತೆಗೆದು ಹಾಕಿ, ಉದ್ಯಮಿಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸಲು ಮತ್ತು ಬೆಳೆಸಲು ಮುಕ್ತ ವಾತಾವರಣವನ್ನು ಕಲ್ಪಿಸಿಕೊಡುವ ಉದ್ದೇಶ ಹೊಂದಿರುತ್ತದೆ. ಮಾರುಕಟ್ಟೆಯನ್ನು ಸ್ಪರ್ಧೆಗೆ ಮತ್ತು ಬಾಹ್ಯ ಹೂಡಿಕೆಗೆ ಮುಕ್ತಗೊಳಿಸುವುದೇ ಉದಾರೀಕರಣ. ಒಟ್ಟಿನಲ್ಲಿ ಉದ್ಯಮ ಸ್ಥಾಪನೆ ಮತ್ತು ಅಭಿವೃದ್ಧಿಯನ್ನು ಕುರಿತಂತೆ ಸರ್ಕಾರವು ಉದಾರ ಅಥವಾ ಧಾರಾಳ ನೀತಿಯನ್ನು ಅನುಸರಿಸಬೇಕೆಂಬುದೇ ಉದಾರೀಕರಣವಾಗಿದೆ. ಭಾರತದಲ್ಲಿ ಉದಾರೀಕರಣ ಪ್ರಕ್ರಿಯೆಯು 1991ರಲ್ಲಿ ನೂತನ ಆರ್ಥಿಕ ನೀತಿಯನ್ನು ಘೋಷಿಸುವುದರೊಂದಿಗೆ ಆರಂಭವಾಯಿತು. ಡಾ|| ಮನಮೋಹನ್‌ಸಿಂಗ್ (ಮಾಜಿ ಹಣಕಾಸು ಮಂತ್ರಿ ಮತ್ತು ಈಗಿನ ಪ್ರಧಾನಿ) ಅವರನ್ನು ಉದಾರೀಕರಣದ ಹರಿಕಾರರೆಂದು ಬಣ್ಣಿಸಲಾಗಿದೆ. ಉದಾರೀಕರಣದಿಂದಾಗಿ ಹೊಸ ಉದ್ಯಮ

ಸ್ಥಾಪನೆಗೆ ಅಥವಾ ಬದಲಾವಣೆಗೆ ಪರವಾನಿಗೆ ಅಥವಾ ಅನುಮೋದನೆಯಲ್ಲಿ ಸ್ವಯಂಚಲಿಯಾಗಿ ನೀಡಲಾಗುತ್ತಿದೆ. ಉದ್ಯಮ ಸ್ಥಾಪನೆಗೆ ಮೊದಲು ಅಸ್ತಿತ್ವದಲ್ಲಿದ್ದ ನಿಯಂತ್ರಣಗಳನ್ನು ಸಂಪೂರ್ಣ ತೆಗೆದು ಹಾಕಲಾಗಿದೆ. ಹೊಸ ಉದ್ಯಮಗಳ ಸ್ಥಾಪನೆಗೆ ಸಂಬಂಧಿಸಿದಂತೆ ವಿಧಿ ವಿಧಾನಗಳನ್ನು ಸರಳಗೊಳಿಸಲಾಗಿದೆ. ಪರವಾನಿಗೆಯನ್ನು ನೀಡುವಾಗ ವಿಳಂಬ ನೀತಿಯನ್ನು ಕೈ ಬಿಡಲಾಗಿದೆ.

'ಖಾಸಗೀಕರಣ' ಮತ್ತು 'ಜಾಗತೀಕರಣ'ಗಳು ಉದಾರೀಕರಣದ ಎರಡು ಅವಿಭಾಜ್ಯ ಅಂಗಗಳು. ಉದಾರೀಕರಣ ನೀತಿಯ ಜಾರಿಯಿಂದ ಖಾಸಗೀಕರಣ ಮತ್ತು ಜಾಗತೀಕರಣಗಳು ಸ್ವಯಂ ಚಾಲಿತವಾಗಿ ಬರುತ್ತವೆ. ಖಾಸಗೀಕರಣವು ರಾಜ್ಯದ ಹಿಂತೆಗೆತದ (Retreat) ಒಂದು ಸಾಂಸ್ಥಿಕ ರೂಪವನ್ನು ಸೂಚಿಸುತ್ತದೆ. ರಾಜ್ಯದ ಹಿಂತೆಗೆತದ ವಿಚಾರವು 1980ರ ದಶಕದಿಂದೀಚೆಗೆ ಪ್ರಾಮುಖ್ಯತೆ ಪಡೆದು ಇಂದು ವಿಶ್ವದ ಎಲ್ಲ ರಾಷ್ಟ್ರಗಳಲ್ಲಿಯೂ ಜಾಗತಿಕ ಮಹತ್ವ ಪಡೆದಿದೆ.

ಖಾಸಗೀಕರಣವೆಂದರೆ, ಸಾರ್ವಜನಿಕ ಒಡೆತನದ ನಿಯಂತ್ರಣದಿಂದ ಖಾಸಗೀ ಒಡೆತನದ ನಿಯಂತ್ರಣಕ್ಕೆ ವರ್ಗಾವಣೆ ಆಗಿದೆ. ಖಾಸಗೀಕರಣವು ರಾಷ್ಟ್ರೀಕರಣಕ್ಕೆ ವಿರುದ್ಧವಾದುದು. "ಖಾಸಗೀಕರಣವು ಸರ್ಕಾರಿ ಒಡೆತನದ ಉದ್ಯಮಗಳ ಒಡೆತನದ ಮತ್ತು ಕಾರ್ಯಾಚರಣೆಯಲ್ಲಿ ಖಾಸಗೀ ವಲಯವನ್ನು ತೊಡಗಿಸಿಕೊಳ್ಳುವ ಸಾರ್ವತ್ರಿಕ ಪ್ರಕ್ರಿಯೆಯಾಗಿದೆ" ಎಂದು ಬಾರ್ಬರಾಲಿ ಮತ್ತು ಜಾನ್ ನೆಲ್ಲಿಸ್ ಎಂಬುವರು ಅರ್ಥೈಸಿದ್ದಾರೆ.

ಅರ್ಥವ್ಯವಸ್ಥೆಯ ಕಾರ್ಯನಿರ್ವಹಣೆಯಲ್ಲಿ ಖಾಸಗೀಕರಣಕ್ಕೆ ಹೆಚ್ಚಿನ ವ್ಯಾಪ್ತಿಯನ್ನು ಕಲ್ಪಿಸುವುದೇ ಖಾಸಗೀಕರಣವಾಗಿದೆ. ಈ ವ್ಯವಸ್ಥೆಯಲ್ಲಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಉದ್ಯಮಿಗಳು ಸ್ವತಂತ್ರರಾಗಿರುತ್ತಾರೆ. ವಿವಿಧ ಉತ್ಪಾದನಾ ಕ್ಷೇತ್ರಗಳನ್ನು ಖಾಸಗೀಯವರಿಗೆ ಮುಕ್ತವಾಗಿ ತೆರೆದಿಡುವುದೇ ಖಾಸಗೀಕರಣವಾಗಿದೆ. ಸಾರ್ವಜನಿಕ ವಲಯಕ್ಕೆ ಮೀಸಲಿದ್ದ ಕ್ಷೇತ್ರಗಳನ್ನು ಸಹ ಖಾಸಗಿಯವರಿಗೆ ತೆರೆದಿಡಲಾಗುವುದು. ಖಾಸಗೀಕರಣವು ನಿಯಂತ್ರಿತ ರಕ್ಷಣಾ ಅರ್ಥವ್ಯವಸ್ಥೆಯನ್ನು ಮುಕ್ತ ಮಾರುಕಟ್ಟೆ (Open Market) ಅರ್ಥ ವ್ಯವಸ್ಥೆಯನ್ನಾಗಿ ಪರಿವರ್ತಿಸುತ್ತದೆ. ಖಾಸಗಿ ಉದ್ಯಮಿಗಳಿಗೆ ಮುಕ್ತ ಪ್ರವೇಶದ ಹಕ್ಕನ್ನು ಪ್ರತಿಪಾದಿಸುವುದು ಖಾಸಗೀಕರಣವಾಗಿದೆ.

ಜಾಗತೀಕರಣವೆಂದರೆ ಭಾರತದ ಆರ್ಥಿಕ ವ್ಯವಸ್ಥೆಯನ್ನು ಜಾಗತಿಕ ಆರ್ಥಿಕ ವ್ಯವಸ್ಥೆಯೊಂದಿಗೆ ಸಂಘಟಿಸಿ ಸಂಯೋಜಿಸುವುದಾಗಿದೆ. ಭಾರತದ ಆರ್ಥಿಕ ವ್ಯವಸ್ಥೆಯು ಜಾಗತಿಕ ಆರ್ಥಿಕ ವ್ಯವಸ್ಥೆಯ ಒಂದು ಅವಿಭಾಜ್ಯ ಅಂಗವಾಗಿದೆ. ಜಾಗತೀಕರಣವು ವಿವಿಧ ದೇಶಗಳ ನಡುವಿನ ಎಲ್ಲಾ ವ್ಯಾಪಾರಿ ನಿಯಂತ್ರಣಗಳನ್ನು ತೆಗೆದು ಹಾಕಿ ಇಡೀ ಪ್ರಪಂಚವನ್ನು ಒಂದು ಬೃಹತ್ ಮಾರುಕಟ್ಟೆಯನ್ನಾಗಿ ಪರಿವರ್ತಿಸುವ ಗುರಿ ಹೊಂದಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ವಿಶ್ವದ ವಿವಿಧ ಸಮಾಜಗಳನ್ನು ವಿಶ್ವವ್ಯಾಪಿಯಾದ ಏಕೈಕ ಮಾರುಕಟ್ಟೆ ಸಮಾಜದೊಂದಿಗೆ ಸಂಘಟಿಸುವ ಪ್ರಕ್ರಿಯೆಯನ್ನು ಜಾಗತೀಕರಣವೆಂದು ಕರೆಯಲಾಗಿದೆ. ಜಾಗತೀಕರಣದಿಂದಾಗಿ ಆಮದು ಮಾಡಿಕೊಳ್ಳುವಿಕೆಯ ಮೇಲಿದ್ದ ನಿರ್ಬಂಧಗಳನ್ನು ಸಡಿಲಗೊಳಿಸಲಾಗಿದೆ ಹಾಗೂ ಆಮದುಗಳಿಗೆ ಅಗತ್ಯವಿರುವ ವಿದೇಶಿ ವಿನಿಮಯವನ್ನು ಸುಲಭವಾಗಿ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಜಾಗತಿಕರಣದಿಂದ ಪ್ರತಿದಿನ ಹೊಸ ಹೊಸ ಬಹುರಾಷ್ಟ್ರೀಯ ಕಂಪನಿಗಳು ಭಾರತೀಯ ಅರ್ಥವ್ಯವಸ್ಥೆಯನ್ನು ಪ್ರವೇಶಿಸುತ್ತವೆ.

**ಸಾರ್ವಜನಿಕ ಆಡಳಿತದ ಪಾತ್ರದ ಮೇಲೆ ಉದಾರೀಕರಣ ಖಾಸಗೀಕರಣ, ಜಾಗತೀಕರಣದ ಪರಿಣಾಮಗಳು**

ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳಂತಹ ಆರ್ಥಿಕ ಸುಧಾರಣೆಗಳು ಸಾರ್ವಜನಿಕ ಆಡಳಿತದ ಪಾತ್ರದ ಮೇಲೆ ಗಣನೀಯ ಪರಿಣಾಮಗಳನ್ನು ಬೀರಿವೆ. ಅವುಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ವಿವರಿಸಲಾಗಿದೆ.

**1) ಆಡಳಿತಶಾಹಿಯ ಬದಲಾಗುತ್ತಿರುವ ಪಾತ್ರ**

ಉದಾರೀಕರಣ ಮತ್ತು ಖಾಸಗೀಕರಣದಿಂದಾಗಿ ಸಾರ್ವಜನಿಕ ಆಡಳಿತದ ಅನಾವಶ್ಯಕ ಹತೋಟಿ, ನಿಯಂತ್ರಣ, ಪರವಾನಿಗೆ ಮುಂತಾದ ಕಟ್ಟುಪಾಡುಗಳನ್ನು ತೆಗೆದು ಹಾಕಿ ಉದ್ಯಮಿಗಳಿಗೆ ಕೈಗಾರಿಕೆಗಳನ್ನು ಸ್ಥಾಪಿಸಿ ನಿರ್ವಹಿಸಿಕೊಂಡು ಹೋಗಲು ಮುಕ್ತ

ವಾತಾವರಣವನ್ನು ಕಲ್ಪಿಸಲಾಗಿದೆ. ಇದರ ಪರಿಣಾಮವಾಗಿ ಆಡಳಿತಶಾಹಿಯು ತನ್ನ ಮೊದಲಿನ ಸಮಂಜಸತೆಯನ್ನು ಕಳೆದುಕೊಳ್ಳುತ್ತಿದೆ. ಆರ್ಥಿಕ ವ್ಯವಸ್ಥೆಯ ಮೇಲಿನ ನೌಕರಶಾಹಿಯು ಕ್ರಮೇಣ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತಿದೆ. ಉದಾರೀಕರಣದ ಪ್ರಕ್ರಿಯೆಯು ಆರ್ಥಿಕ ವಲಯದಲ್ಲಿ ಸರ್ಕಾರದ ಮಧ್ಯಪ್ರವೇಶವನ್ನು ಕಡಿತಗೊಳಿಸಿರುವುದರಿಂದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಆಡಳಿತಶಾಹಿಯ ಪಾತ್ರ ಸಹಜವಾಗಿ ಕಡಿಮೆಯಾಗಿದೆ. ಆರ್ಥಿಕ ವಲಯವು ಉದಾರೀಕರಣ, ಖಾಸಗೀಕರಣ, ಜಾಗತೀಕರಣದೆಡೆಗೆ ಸರಿಯುತ್ತಿರುವುದರಿಂದ ಆಡಳಿತಶಾಹಿಯು ಬದಲಾವಣೆಗಾಗಿ ವೇಗವರ್ಧಕದ ಪಾತ್ರವಹಿಸಬೇಕಾಗಿದೆ. ನೂತನ ಅರ್ಥವ್ಯವಸ್ಥೆಯಲ್ಲಿ ನೌಕರಶಾಹಿಯು ಸಹಾಯಕನಾಗಿ, ವೇಗವರ್ಧಕನಾಗಿ, ಬಲವರ್ಧಕನಾಗಿ, ಕಾರ್ಯನಿರ್ವಹಿಸಬೇಕಾಗಿದೆ.

**2) ರಾಜ್ಯದ ಕಾರ್ಯ ವ್ಯಾಪ್ತಿಯಲ್ಲಿ ಇಳಿಮುಖ**

ಖಾಸಕೀಕರಣ ಮತ್ತು ಉದಾರೀಕರಣ ನೀತಿಯಿಂದಾಗಿ ರಾಜ್ಯದ ಕಾರ್ಯವ್ಯಾಪ್ತಿಯಲ್ಲಿ ಇಳಿತ / ಕಡಿತ ಉಂಟಾಗಿದೆ. ಈ ನೀತಿಯು ವ್ಯಕ್ತಿಯ ಜೀವನದಲ್ಲಿ ರಾಜ್ಯದ ಕನಿಷ್ಠ ಪ್ರಮಾಣದ ಮಧ್ಯಪ್ರವೇಶಕ್ಕೆ ಕಾರಣವಾಗಿದೆ. ಇದು ಆಡಳಿತಾತ್ಮಕ ವ್ಯವಸ್ಥೆಯ ಕುಗ್ಗುವಿಕೆಗೆ ಕಾರಣವಾಗಿದೆಯಲ್ಲದೆ, ನೌಕರಶಾಹಿ ಗಾತ್ರವನ್ನೂ ಕುಗ್ಗಿಸಿದೆ. ಖಾಸಗೀಕರಣವು ರಾಜ್ಯದ ಹಿಂತೆಗೆತಕ್ಕೆ (Retreat) ಕಾರಣವಾಗಿದೆ. ಆದರೆ ರಾಜ್ಯದ ಹಿಂತೆಗೆತವೆಂದರೆ ರಾಜ್ಯವು ಉದಾಸೀನ ಧೋರಣೆಯನ್ನು ಹೊಂದಿರಬೇಕೆಂಬುದು ಅರ್ಥವಲ್ಲ. ಉದ್ಯಮಗಳ ಕಾರ್ಯನಿರ್ವಹಣೆಯ ಭಾಗವು ರಾಜ್ಯದ ಮೇಲ್ವಿಚಾರಣೆಗೆ ಒಳಪಡಬೇಕು. ಮಾರುಕಟ್ಟೆಯ ಅರ್ಥವ್ಯವಸ್ಥೆಯ ಆಗುಹೋಗುಗಳು ಅಥವಾ ವ್ಯವಹಾರವು ಮಿತಿಮೀರಿ ಹೋಗದಂತೆ ರಾಜ್ಯವು ನಿಯಂತ್ರಿಸಬೇಕು. ಖಾಸಗೀ ವಲಯದ ನಿರ್ಲಜ್ಜೆಯ ಮತ್ತು ಸಮಾಜ ವಿರೋಧಿ ಶಕ್ತಿಗಳು ಅಧಿಕ ಲಾಭಗಳಿಕೆಗಾಗಿ ಕಾನೂನು ಬಾಹಿರ ಮಾರ್ಗಗಳನ್ನು ಹಿಡಿಯಬಹುದು. ಆದುದರಿಂದ ಇಡೀ ಸಮಾಜದ ಹಿತದೃಷ್ಟಿಯಿಂದ ಇಂತಹ ಕಾನೂನು ಬಾಹಿರ ಕ್ರಮಗಳನ್ನು ತಡೆಗಟ್ಟುವುದು ರಾಜ್ಯದ/ಆಡಳಿತದ ಕರ್ತವ್ಯವಾಗಿದೆ. ಹೀಗೆ ಖಾಸಗೀಕರಣದ ನೀತಿಯಡಿಯಲ್ಲಿ ಸಾರ್ವಜನಿಕ ಹಿತ ಕಾಪಾಡಲು, ಖಾಸಗಿವಲಯ ಹದ್ದು ಮೀರಿ ಹೋಗದಂತೆ ಸಾರ್ವಜನಿಕ ಆಡಳಿತವು ನಿಯಂತ್ರಕನ ಒಂದು ನೂತನ ಪಾತ್ರವನ್ನು ವಹಿಸಬೇಕಾಗಿದೆ.

**3) ಸಾರ್ವಜನಿಕ ಸೇವೆಯ ಸುಧಾರಣೆಗಳು**

ಸರ್ಕಾರ ಮತ್ತು ಆಡಳಿತದ ಮೇಲಿನ ಮಾರುಕಟ್ಟೆಯ ಸುಧಾರಣೆಗಳ ಪರಿಣಾಮಗಳನ್ನು ಸಾಮಾನ್ಯವಾಗಿ 'ನೂತನ ಆಡಳಿತಕ್ರಮ' ಮಾರುಕಟ್ಟೆಯ ಆಧಾರಿತ ಸರ್ಕಾರ, 'ನೂತನ ಸಾರ್ವಜನಿಕ ನಿರ್ವಹಣೆ' 'ಕುಗ್ಗಿದ ರಾಜ್ಯ ವ್ಯಾಪ್ತಿ' ಎಂಥು ವರ್ಣಿಸಲಾಗಿದೆ. ಈ ನೂತನ ಆರ್ಥಿಕ ನೀತಿಯಿಂದಾಗಿ (ಎಲ್.ಪಿ.ಜಿ.) ಆಡಳಿತಾತ್ಮಕ ಸುಧಾರಣೆಗೆ ಹಾಗೂ ನೌಕರಶಾಹಿಯನ್ನು ಬದಲಾದ ಪರಿಸ್ಥಿತಿಗೆ ಹೊಂದಿಕೊಳ್ಳಲು ಅವರಿಗೆ ಸೂಕ್ತ ತರಬೇತಿಯ ಅಗತ್ಯತೆಯನ್ನುಂಟು ಮಾಡಿದೆ.

**4) ನಾಗರಿಕರಿಗೆ ಅಧಿಕಾರಕೊಡುವುದು (Empowering citizens)**

ಜಾಗತೀಕರಣದಿಂದಾಗಿ ಬೇರುಮಟ್ಟದ ಆಡಳಿತ, ಸ್ಥಳೀಯ ಮಟ್ಟದಲ್ಲಿ ಜನರ ಸಹಭಾಗಿತ್ವ, ಸ್ತ್ರೀ ಸಬಲೀಕರಣ, ಸರ್ವರಿಗೂ ಶಿಕ್ಷಣ, ಬಡವರ ಹಕ್ಕುಗಳನ್ನೊಳಗೊಂಡಂತೆ ಮಾನವ ಹಕ್ಕುಗಳು, ಗ್ರಾಹಕರ ಹಕ್ಕುಗಳು, ಪರಿಸರದ ಸಂರಕ್ಷಣೆ, ವಿಕೇಂದ್ರಿಕರಣ ಮುಂತಾದ ವಿಚಾರಗಳು ಬಲವರ್ಧನೆಯಾಗಿವೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣದಿಂದಾಗಿ ಸಾರ್ವಜನಿಕ ಆಡಳಿತವು ನಾಗರಿಕರ ಹಕ್ಕುಗಳ ರಕ್ಷಣೆ, ಹೊಣೆಗಾರಿಕೆ, ನೈತಿಕ ಮೌಲ್ಯಗಳು ಮುಂತಾದವುಗಳಿಗೆ ಹೆಚ್ಚಿನ ಗಮನ ಹರಿಸಿದೆ. 'ಉತ್ತಮ ಆಡಳಿತ' 'ಇ-ಆಡಳಿತ' ಇವು ಆಡಳಿತಾತ್ಮಕ ವ್ಯವಸ್ಥೆಗೆ ಚೌಕಟ್ಟನ್ನು ಒದಗಿಸಿವೆ.

5) ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ನೀತಿಯು ರಾಜ್ಯದ ಪಾತ್ರವನ್ನು ಸೀಮಿತಗೊಳಿಸಿ ಮುಕ್ತ ಮಾರುಕಟ್ಟೆಯ ವ್ಯಾಪ್ತಿಯನ್ನು ಹೆಚ್ಚಿಸಿದೆ. ಈ ಬೆಳವಣಿಗೆಗಳು ರಾಜ್ಯದ ಕನಿಷ್ಠ ಹಸ್ತಕ್ಷೇಪಕ್ಕೆ ಅಥವಾ 'ಸರ್ಕಾರದ ಕುಗ್ಗುವಿಕೆ'ಗೆ (downsizing

government) ಕಾರಣವಾಗಿವೆ. ರಾಜ್ಯದ ಹಸ್ತಕ್ಷೇಪವನ್ನು ವಿಮುಖವಾಗಿಸಿ, ಮಾರುಕಟ್ಟೆ ಅರ್ಥವ್ಯವಸ್ಥೆಯ ಮುಕ್ತ ಕಾರ್ಯನಿರ್ವಹಣೆಗೆ ಅವಕಾಶ ಮಾಡಿದೆ. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳಿಂದಾಗಿ ಇಂದು ರಾಜ್ಯವು 'ನಿಯಂತ್ರಕ' (regulator) ಹಾಗೂ 'ಉತ್ಪಾದಕನ' (Producer) ಪಾತ್ರದ ಬದಲಿಗೆ 'ಸಹಾಯಕ' (facilitater) ಮತ್ತು 'ಪ್ರವರ್ತಕನ' (Promoter) ಪಾತ್ರವನ್ನು ವಹಿಸಬೇಕಾಗಿದೆ. ಸರ್ಕಾರವು 'ಕೆಲಸಗಾರನ' (doer) ಪಾತ್ರದಿಂದ 'ವಿತರಕನ' (distributor) ಪಾತ್ರಕ್ಕೆ ಬದಲಾಗುತ್ತಿದೆ. ರಾಜ್ಯದ ಪಾತ್ರವನ್ನು ಕನಿಷ್ಠಮಟ್ಟಕ್ಕೆ ಇಳಿಸಿ, ಸರ್ಕಾರಿ ಸಂಸ್ಥೆಗಳ ಕಾರ್ಯಗಳಲ್ಲಿ ಕಡಿತಗೊಳಿಸಲಾಗಿದೆಯಲ್ಲದೆ

ಸರ್ಕಾರದ ವಿವಿಧ ಕಾರ್ಯಗಳನ್ನು ಮಾರುಕಟ್ಟೆಗೆ ವರ್ಗಾವಣೆಯಾಗುತ್ತಿವೆ. ಇಂದು ಸಾಂಪ್ರದಾಯಿಕ ರಾಜ್ಯಕ್ಕೆ ಬದಲಾಗಿ ಮಾರುಕಟ್ಟೆ ಅಸ್ತಿತ್ವಕ್ಕೆ ಬರುತ್ತಿದೆ.

1) ಸೀಮಿತ ರಾಜಕೀಯ ಅಧಿಕಾರದ ಚಲಾವಣೆ
2) ವಿಕೇಂದ್ರೀಕರಣ ಮತ್ತು ಸರ್ಕಾರದ ವಿವಿಧ ಹಂತಗಳಲ್ಲಿ ಸೇವಾ ವ್ಯವಸ್ಥೆಗಳ ಬೆಳವಣಿಗೆ
3) ಗ್ರಾಹಕ ಬೇಡಿಕೆಗಳನ್ನು ಪೂರೈಸಲು ಬಹುಸಂಖ್ಯಾ ಏಜನ್ಸಿಗಳ ಸ್ಥಾಪನೆ
4) ಆಡಳಿತ ಪ್ರಕ್ರಿಯೆಯಲ್ಲಿ ಜನರ ಸಹಭಾಗಿತ್ವ
5) ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಸರ್ಕಾರೇತರ ಸಂಸ್ಥೆಗಳ (N.G.OS)ಸ್ಥಾಪನೆ.
6) ಆಡಳಿತಶಾಹಿಯ ಗಾತ್ರದಲ್ಲಿ ಕಡಿತ
7) ಆಡಳಿತಾಶಾಹಿ ವ್ಯವಸ್ಥೆಯ ಬದಲು ಮಾರುಕಟ್ಟೆ ವ್ಯವಸ್ಥೆಗೆ ಹೆಚ್ಚಿನ ಆದ್ಯತೆ-ಇವೇ ಮುಂತಾದವುಗಳು ಸಾರ್ವಜನಿಕ ಆಡಳಿತದ ಪಾತ್ರದ ಮೇಲಿನ ಪರಿಣಾಮಗಳಾಗಿವೆ.

**ನಿಮ್ಮ ಪ್ರಗತಿ ಪರಿಶೀಲನೆ-4**

**ಸೂಚನೆ :** i) ಕೆಳಗಿನ ಸ್ಥಳವನ್ನು ನಿಮ್ಮ ಉತ್ತರಕ್ಕೆ ಉಪಯೋಗಿಸಿ.

ii) ನಿಮ್ಮ ಉತ್ತರಗಳನ್ನು ಈ ಘಟಕದ ಕೊನೆಯಲ್ಲಿ ಕೊಟ್ಟಿರುವುದರೊಂದಿಗೆ ಪರಿಶೀಲಿಸಿ.

1) ಉದಾರೀಕರಣ, ಖಾಸಗೀಕರಣ, ಜಾಗತೀಕರಣದಡಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ವಿವರಿಸಿ.

..................................................................................................................
..................................................................................................................
..................................................................................................................
..................................................................................................................
..................................................................................................................
..................................................................................................................
..................................................................................................................
..................................................................................................................
..................................................................................................................

### 1.4.4. ಸಾರಾಂಶ

ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತವು ಮಹತ್ವದ ಪಾತ್ರವನ್ನು ವಹಿಸಿದೆ. ರಾಷ್ಟ್ರೀಯ ಅಭಿವೃದ್ಧಿ ಎಂದರೆ ರಾಷ್ಟ್ರದ ಸರ್ವಾಂಗೀಣ ಬೆಳವಣಿಗೆ, ಜೀವನದ ಗುಣಮಟ್ಟದ ಹೆಚ್ಚಳ ಎಂದರ್ಥ. ಆರ್ಥಿಕ, ಸಾಮಾಜಿಕ, ರಾಜಕೀಯ ಅಭಿವೃದ್ಧಿಯನ್ನೂ ಸಾಧಿಸುವಲ್ಲಿ ಸಾರ್ವಜನಿಕ ಆಡಳಿತ ಪಾತ್ರ ವಿಸ್ತಾರವಾಗುತ್ತಲಿದೆ.

ಈ ಘಟಕದಲ್ಲಿ ರಾಷ್ಟ್ರೀಯ ಅಭಿವೃದ್ಧಿಯ ಬಹುಮುಖಿ ಆಯಾಮಗಳನ್ನು ಚರ್ಚಿಸಲಾಗಿದೆ. ಆಧುನೀಕರಣ, ರಾಷ್ಟ್ರ ನಿರ್ಮಾಣ, ಸಮಾಜಿಕ ಬದಲಾವಣೆ, ಕೈಗಾರಿಕೀಕರಣ, ಜನರ ಸಹಭಾಗಿತ್ವ ಮುಂತಾದ ವಿಷಯಗಳಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ವಿವರವಾಗಿ ವಿವರಿಸಲಾಗಿದೆ. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಸಾರ್ವಜನಿಕ ಆಡಳಿತದ ಪಾತ್ರವನ್ನು ಯೋಜನೆಯಡಿಯಲ್ಲಿ ವಿಶ್ಲೇಷಿಸಲಾಗಿದೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಸುಧಾರಣೆಗಳಿಂದಾಗಿ ಬದಲಾದ ಸನ್ನಿವೇಶದಲ್ಲಿ ಸಾರ್ವಜನಿಕ ಆಡಳಿತದ ಬದಲಾದ ಪಾತ್ರವನ್ನು ಸಹ ಚರ್ಚಿಸಲಾಗಿದೆ.

## 4.5 ಕಠಿಣ ಪದಗಳು

ತಲಾ ಆದಾಯ-ಒಂದು ದೇಶದ ಸರಾಸರಿ ಆದಾಯ, ರಾಷ್ಟ್ರದ ಒಟ್ಟು ಆದಾಯವನ್ನು ಅದರ ಸಂಖ್ಯೆಯನ್ನು ಭಾಗಿಸಿದಾಗ ಬರುವ ಭಾಗಲಬ್ಧವೇ ತಲಾ ಆದಾಯವಾಗಿರುತ್ತದೆ.

ಸಾಮಾಜಿಕ ನ್ಯಾಯ- ಯಾವುದೇ ಧರ್ಮ, ಜಾತಿ, ವರ್ಗ, ಲಿಂಗದ ಆಧಾರದ ಮೇಲೆ ತಾರತಮ್ಯ ಮಾಡದೆ ಎಲ್ಲರಿಗೂ ಸಮಾನ ಅವಕಾಶ.

**ಮೂಲಭೂತ ಅವಶ್ಯಕತೆಗಳು-** ಆಹಾರ, ವಸತಿ, ಬಟ್ಟೆ, ಶಿಕ್ಷಣ, ಆರೋಗ್ಯ

**ಸಮತಾವಾದಿ ಸಮಾಜ-**ಎಲ್ಲರಿಗೂ ಸಮಾನ ಅವಕಾಶಗಳನ್ನು ಪ್ರತಿಪಾದಿಸುವ ಸಮಾಜ.

**ಕೈಗಾರಿಕಾ ಪರವಾನಿಗೆ-**ಕೈಗಾರಿಕ ಘಟಕಕ್ಕೆ ವಸ್ತುಗಳನ್ನು ತಯಾರಿಸಲು ಸರ್ಕಾರವು ನೀಡುವ ಅನುಮೋಧನಾ ಪತ್ರ

## 4.6 ಕೆಲವು ಉಪಯುಕ್ತ ಪುಸ್ತಕಗಳು

ಪ್ರೊ. ಎನ್. ಹಾಲಪ್ಪ-ಸಾರ್ವಜನಿಕ ಆಡಳಿತ (ಆಡಳಿತಾತ್ಮಕ ಸಿದ್ಧಾಂತ)

ಡಾ|| ಟಿ.ಡಿ. ದೇವೇಗೌಡ -ಸಾರ್ವಜನಿಕ ಆಡಳಿತ

ಫಾಡಿಯಾ & ಫಾಡಿಯಾ - ಪಬ್ಲಿಕ್ ಅಡ್ಮಿನಿಸ್ಟ್ರೇಷನ್

ಅವಸ್ತಿ ಮತ್ತು ಮಹೇಶ್ವರಿ -ಪಬ್ಲಿಕ್ ಅಡ್ಮಿನಿಸ್ಟ್ರೇಷನ್

ಹೊಷಿಯಾರ್ ಸಿಂಗ್ - ಅಡ್ಮಿನಿಸ್ಟ್ರೇಟಿವ್ ಥಿಯರಿ

## 4.7 ನಿಮ್ಮ ಪ್ರಗತಿ ಪರಿಶೀಲನೆಗೆ ಉತ್ತರಗಳು -ಅಭ್ಯಾಸ

**ನಿಮ್ಮ ಪ್ರಗತಿ ಪರಿಶೀಲನೆ -1**

1) ನೋಡಿ ವಿಭಾಗ - 4.1

2) ನೋಡಿ ವಿಭಾಗ - 4.2

**ನಿಮ್ಮ ಪ್ರಗತಿ ಪರಿಶೀಲನೆ -2**

1) ನೋಡಿ ವಿಭಾಗ - 4.3

**ನಿಮ್ಮ ಪ್ರಗತಿ ಪರಿಶೀಲನೆ -3**

1) ನೋಡಿ ವಿಭಾಗ - 4.3.1

ನಿಮ್ಮ ಪ್ರಗತಿ ಪರಿಶೀಲನೆ -4

1) ನೋಡಿ ವಿಭಾಗ - 4.3.2


## ವಿಷಯಗಳು

## ವಿಷಯಗಳು

ಆದೇಶ ಸಂಖ್ಯೆ : ಕರಾಮುವಿ/ಸಿಪಾವಿ/2/1136/2009-10 ದಿನಾಂಕ : 29-10-2009
ಮುದ್ರಕರು : ರಾಜಾ ಪ್ರಿಂಟರ್ಸ್, ಬೆಂಗಳೂರು - 560 027 ಪ್ರತಿಗಳು - 1000
ಕಾಗದ : ಎಂ. ಪಿ. ಎಂ. 60 ಜಿ. ಎಸ್. ಎಂ. 170 ಜಿ. ಎಸ್. ಎಂ. ಆರ್ಟ್ ಕಾಗದ
ಮುದ್ರಿಸಿದ ದಿನಾಂಕ : 2009

# KARNATAKA STATE OPEN UNIVERSITY

MANASAGANGOTRI, MYSORE - 570 006




♔ Head Quarters
* Total Study Centres (Non IT) : 107
❁ Regional Centres : 07
✽ B.Ed Study Centres : 10
♛ M.Ed Study Centres : 08

REGIONAL CENTRES
BANGALORE
DAVANAGERE
GULBARGA
DHARWAD
SHIMOGA
MANGALORE
DELHI

**TOTAL STUDY CENTRES-107. REGIONAL CENTRES-7**

# KARNATAKA STATE OPEN UNIVERSITY

## Manasagangothri, Mysore - 570 006

